ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ


ಸಂಪುಟ 5 ಸಂಚಿಕೆ 30 ಜುಲೈ 24, 2011 ರೂ. 5/- ಪುಟ 16



Blog : janashakthi.wordpress.com e-mail : js_weekly@yahoo.com

ಭ್ರಷ್ಟಾಚಾರ ದಮನ : ಏನೇನಾಗಬೇಕು ?

9





ಭಾರತೀಯ ರೈಲ್ವೆ ಎಂಬೊಂದು ಮೃತ್ಯುಪಾಶ

7



ಉಪವಾಸ : ಉಳಿಸಿದ ಪ್ರಶ್ನೆಗಳು

3


ಭಗವದ್ಗೀತೆ : ಸರ್ಕಾರ - ನೈತಿಕ ಮೌಲ್ಯ ಇತ್ಯಾದಿ

8

ಮುಂಬೈ : ಸರಣಿ ಸ್ಫೋಟ ಅಪರಾಧಿಗಳನ್ನು ಬಗ್ಗು ಬಡಿಯಬೇಕು

ಜನಶಕ್ತಿ
ಕನ್ನಡ ವಾರಪತ್ರಿಕೆ

ಬರಹಗಾರರಿಗೆ ಜನಶಕ್ತಿ ರಾಜ್ಯಮಟ್ಟದ ಕಾರ್ಯಾಗಾರ



ದುಡಿಯುವ ಜನರ ಪ್ರಾಣಮಿತ್ರ 'ಜನಶಕ್ತಿ ಕನ್ನಡ ವಾರಪತ್ರಿಕೆ'ಯು ಜುಲೈ 2–3,2011 ಎರಡು ದಿನಗಳ ವರದಿಗಾರರು ಮತ್ತು ಬರಹಗಾರರಿಗೆ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಸಂಘಟಿಸಿತ್ತು. ರಾಜ್ಯದ ವಿವಿಧ ಜಿಲ್ಲೆಗಳ ಸುಮಾರು 40 ಜನ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.


ಜುಲೈ 2 ರಂದು 'ಸಮೂಹ ಮಾಧ್ಯಮಗಳ ಸ್ವರೂಪ ಮತ್ತು ಜನಪರತೆ' ಎಂಬ ವಿಷಯದ ಮೇಲೆ ಖ್ಯಾತ ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಅವರು ಮಾತನಾಡಿದರು (ಮಾತಿನ ವಿವರಕ್ಕಾಗಿ ಬಾಕ್ಸ್ ನೋಡಿ) 'ಜನಶಕ್ತಿ ಪತ್ರಿಕೆಯ ಸ್ವರೂಪ, ದೃಷ್ಟಿಕೋನ'ದ ಕುರಿತು ಜಿ.ಎನ್.ನಾಗರಾಜ್, 'ವರದಿ ಹೇಗೆ?' ಎಂಬ ಬಗ್ಗೆ ಪತ್ರಕರ್ತ ವಿಶ್ವ ಕುಂದಾಪುರ ಮುಂತಾದವರು ಮಾತನಾಡಿದರು ಮತ್ತು ಸಂವಾದದಲ್ಲಿ ಪಾಲ್ಗೊಂಡರು.

ಜನಶಕ್ತಿ ಹೊರತರುವಲ್ಲಿನ ಪಾಯೋಗಿಕ ತೊಂದರೆ, ಪತ್ರಿಕೆಯನ್ನು ಉತ್ತಮಪಡಿಸುವಲ್ಲಿ ಅಗತ್ಯವಾದ ಕ್ರಮಗಳು ಇತ್ಯಾದಿಗಳ ಕುರಿತೂ ಸಹ ಚರ್ಚೆ ನಡೆಯಿತು.

ಜನಶಕ್ತಿಯ ಮುಂದಿನ ಮೂರು ತಿಂಗಳುಗಳ ವರದಿ–ಬರಹಗಳ ಯೋಜನೆ ಹಾಗು ಜನಶಕ್ತಿಯ ಪ್ರಸಾರ ಹೆಚ್ಚಳ, ಪ್ರಾದೇಶಿಕ ಮಟ್ಟದ ಕಾರ್ಯಾಗಾರಗಳು ಇತ್ಯಾದಿಗಳ ಕುರಿತು ಸಹ ಚರ್ಚೆ ನಡೆದವು. ಪತ್ರಿಕೆಯ ಸಂಪಾದಕರಾದ ಎಸ್.ವೈ.ಗುರುಶಾಂತ್‌ರವರು ಚರ್ಚೆಗೆ ಉತ್ತರಿಸಿದರು.

ಜುಲೈ 3 ರಂದು ಸಂಜೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್‌ರವರು ಸಮಾರೋಪದ ಮಾತುಗಳನ್ನಾಡಿದರು. ಜನಚಳುವಳಿಗಳ ದನಿಯಾಗಿ ಚಳುವಳಿಯ ವಿಸ್ತರಣೆಗೆ ಪೂರಕವಾಗಿ ಪತ್ರಿಕೆ ಕೆಲಸಮಾಡಬೇಕು. ಜನಚಳುವಳಿ ಬೆಳೆದರೆ ಪತ್ರಿಕೆಯೂ ಬೆಳೆಯುತ್ತದೆ ಎಂದ ವಿಜೆಕೆಯವರ ಸಮಾರೋಪದ ಮಾತುಗಳೊಂದಿಗೆ ಪ್ರತಿನಿಧಿಗಳು ತೆರಳಿದರು.

'ವಿಮೋಚನಾ ಸಮರ'ದಲ್ಲಿ ಕೃತಿಯ ಅನುವಾದಕ್ಕಾಗಿ ವಿಶ್ವಕುಂದಾಪುರ ರವರು



ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಅತ್ಯುತ್ತಮ' ಅನುವಾದ ಪ್ರಶಸ್ತಿಯ ಪುರಸ್ಕಾರ ಪಡೆದ ಸಂದರ್ಭದಲ್ಲಿ ವಿಶ್ವ ಅವರ ಪತ್ನಿ ಮಮತ ಕುಂದಾಪುರ ಅವರು ಒಂದು ಸಾವಿರ ರೂಪಾಯಿಗಳನ್ನು ಜನಶಕ್ತಿಗೆ ಕೊಡುಗೆ ನೀಡಿದ್ದನ್ನು ಇಲ್ಲಿ ಪ್ರಕಟಿಸಲಾಯಿತು.

'ಮುಖ್ಯವಾಹಿನಿಯ ಮಾಧ್ಯಮಗಳು ಸಾಮಾಜಿಕ ಬದಲಾವಣೆಗೆ ಸಾಧನ ಎಂಬುದು ಭ್ರಮೆ'

– ದಿನೇಶ್ ಅಮೀನ್ ಮಟ್ಟು

ಜನಶಕ್ತಿ ಪತ್ರಿಕೆ ಎತ್ತಿಕೊಂಡಿರುವ ಬಹಳಷ್ಟು ವಿಷಯಗಳು ಇತರ ಪತ್ರಿಕೆಗಳಲ್ಲಿ ಬರುವುದೇ ಇಲ್ಲ. ಮುಖ್ಯವಾಹಿನಿ ಪತ್ರಿಕೆಗಳಲ್ಲಿ ಇವತ್ತು ಏನಾಗುತ್ತಿದೆ, ಬಹುತೇಕ ಪತ್ರಕರ್ತರು ಒಮ್ಮೆ ಪತ್ರಿಕೆ ಸೇರಿದ ನಂತರ ಮುಂದೆ ಓದಬಾರದು ಅಂತ ತೀರ್ಮಾನ ಮಾಡಿಬಿಡುತ್ತಾರೆ.

ಖ್ಯಾತಿ ಇಲ್ಲದೇ ಆರ್ಥಿಕವಾದ ಲಾಭ ಇಲ್ಲದೇ ನಿರಂತರ ನಷ್ಟದಲ್ಲಿ (ಜನಶಕ್ತಿಯಂತಹ ಪತ್ರಿಕೆಯನ್ನು) ನಡೆಸಿಕೊಂಡು ಹೋಗುವುದು ಕಷ್ಟದ ವಿಷಯ. ಬಹಳ ದೊಡ್ಡವಿಷಯ. ನನಗೆ ಜನಶಕ್ತಿಯಂತಹ ಪತ್ರಿಕೆಯಲ್ಲಿ ಕೆಲಸ ಮಾಡಬೇಕೆಂಬ ಆಸೆ. ನಮಗೆ ಅನಿಸಿದ್ದನ್ನು ಹೇಳಬೇಕು ಅನಿಸುತ್ತದೆ. ಜನಶಕ್ತಿ ಪತ್ರಿಕೆ ನೋಡಿದಾಗ ನನಗೆ ನಿಮ್ಮಿಂದ ಕಲಿಯುವುದು ಬಹಳಷ್ಟಿದೆ ಅನಿಸುತ್ತದೆ. ನಾನು ವೃತ್ತಿ ಆರಂಭಿಸಿದ್ದು ಮುಂಗಾರುವಿನಿಂದ......



ನಮ್ಮಲ್ಲಿ ಎರಡು ಭಾರತ ಇವೆ. ಒಂದು ಭಾರತ–ಇನ್ನೊಂದು ಇಂಡಿಯಾ. ಕುರುಡರು, ಅಂಗವಿಕಲರು, ...ಒಂದು ಹೊತ್ತು ಊಟ, ಹಣ್ಣು ಇಲ್ಲದವರು..... ಜಗಮಗಿಸುವ ಏರ್‌ಪೋರ್ಟ್, ಎಂ.ಜಿ. ರಸ್ತೆ ...ಎಷ್ಟೊಂದು ಅಭಿವೃದ್ಧಿ...ನಮ್ಮ ಸ್ಲಂಗಳದ್ದು ಇನ್ನೊಂದು ಜಗತ್ತು. ಸ್ಲಂಗಳು, ಪ್ರವಾಹ ಸಂತ್ರಸ್ಥರು ಇವರ ಬಗೆಗೆ ಮುಖ್ಯವಾಹಿನಿ ಪತ್ರಿಕೆಗಳ ಗಮನ ಕಡಿಮೆ. ಒಂದು ವರ್ಷದ ಹಿಂದೆ ಉತ್ತರ ಕರ್ನಾಟಕದ ಅತಿವೃಷ್ಟಿಪೀಡಿತ ಪ್ರದೇಶಕ್ಕೆ ಹೋಗಿದ್ದೆ. ಸ್ಪಷ್ಟವಾಗಿ ಇನ್ನೊಂದು ದೇಶದ ಸಾಕ್ಷಿ ಅಲ್ಲಿದೆ.

ಮುಖ್ಯವಾಹಿನಿಯ ಮಾಧ್ಯಮಗಳು ಸಾಮಾಜಿಕ ಬದಲಾವಣೆಗೆ ಸಾಧನ ಎಂದು ತಿಳಿದುಕೊಂಡರೆ ಅದು ಭ್ರಮೆ. ಆದ್ದರಿಂದ ಇನ್ನೊಂದು ಪರ್ಯಾಯ ಮಾಧ್ಯಮಗಳನ್ನು ರೂಪಿಸಬೇಕು. ಮಾಧ್ಯಮ ಉದ್ಯಮದ ರೂಪವನ್ನು ತಳೆದಾಗ ಮೊದಲು ಬಲಿಯಾಗುವುದು ಸಾಮಾಜಿಕ ಜವಾಬ್ದಾರಿ. ಪರಿಸ್ಥಿತಿ ಹೀಗಿದ್ದರೂ ವೈಯುಕ್ತಿಕವಾಗಿ ಕಾಳಜಿ ಇದ್ದರೆ ಸ್ವಲ್ಪ ಸ್ಪೇಸ್ ಕಂಡುಕೊಳ್ಳಬಹುದು. ಬಹಳಷ್ಟು ಮುಖ್ಯವಾಹಿನಿಯ ಪತ್ರಿಕೆಯವರು ಈ ಕೆಲಸ ಮಾಡುತ್ತಿಲ್ಲ.

ನಾನು ವೃತ್ತಿಗೆ ಸೇರುವ ಸಂದರ್ಶನದಲ್ಲಿ ಪಕ್ಷಪಾತ ಪತ್ರಿಕೋದ್ಯಮದ ಬಗೆಗೆ ಪ್ರಶ್ನೆ ಕೇಳಿದರು. ನಾನು ಪಕ್ಷಪಾತ ಪತ್ರಿಕೋದ್ಯದ ಪರ ಎಂದು ಹೇಳಿದೆ. ಜನಶಕ್ತಿಯ ಸಂಪಾದಕೀಯ ನೀತಿ ಕೂಡ ಪಕ್ಷಪಾತ ಪತ್ರಿಕೋದ್ಯಮ. 'ಆಬ್ಜೆಕ್ಟಿವಿಟಿ ಇನ್ ದ ನ್ಯೂಸ್ ಮೀಡಿಯಾ ರಿಪೋರ್ಟಿಂಗ್' (ಪತ್ರಿಕಾ ವರದಿಗಾರಿಕೆಯಲ್ಲಿ ವಸ್ತು ನಿಷ್ಠತೆ.) ಎಂಬುದು ಅಂತರಾಷ್ಟ್ರೀಯವಾಗಿ ಚರ್ಚೆ ಆಗುತ್ತಿರುವ ವಿಷಯ. ವಸ್ತು ನಿಷ್ಠತೆ ಬೇರೆ. ಸತ್ಯ ನಿಷ್ಠತೆ ಬೇರೆ.

ಪತ್ರಿಕಾ ವೃತ್ತಿ, ನಾನೊಬ್ಬ ಪತ್ರಕರ್ತ ಅಂತ ಹೇಳಿಕೊಳ್ಳಲು ನಾಚಿಕೆ ಆಗುವಷ್ಟು ಕೆಟ್ಟು ಹೋಗಿದೆ. ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗದ ಹಾದಿಯಲ್ಲಿ ಮಾಧ್ಯಮರಂಗ ಕೂಡ ಸಾಗುತ್ತಿದೆ. ಜಾಗೃತ ಸಮಾಜದಲ್ಲಿ ಮಾತ್ರ ಮಾಧ್ಯಮ ಪರಿಣಾಮಕಾರಿಯಾಗಿ ಕೆಲಸ ಮಾಡುವುದು.

ಶಿಕ್ಷಣ ಬಡತನ, ಕೋಮುವಾದ ಎಲ್ಲದ್ದಕ್ಕೆ ರಾಮಬಾಣ... ಎಲ್ಲ ಸಮಸ್ಯೆಗಳಿಗೆ ಪರಿಹಾರ ಅಂತ ನಂಬಿದ್ದೆವು. ಇದು ಸುಳ್ಳು ಎಂದು ಸಾಬೀತಾಗಿದೆ. ಎಂಜಲೆಲೆ ಮೇಲೆ ಬಿದ್ದು ಹೊರಳಾಡುವವರು ಶಿಕ್ಷಿತರೆ.

ರಾಜಕಾರಣಿಗಳು ಪತ್ರಿಕೆ ಮತ್ತು ಟಿ.ವಿ.ಯನ್ನು ನಡೆಸುತ್ತಿದ್ದಾರೆ. ತಮಗೆ ಬೇಕಾದ ಜನಾಭಿಪ್ರಾಯ ರೂಪಿಸಲು ಮಾಧ್ಯಮಗಳ ಒಡೆಯರು ಪ್ರಯತ್ನ ಮಾಡುತ್ತಿದ್ದಾರೆ. ಇದು ಇತ್ತೀಚಿನ ಅಪಾಯಕಾರಿ ಬೆಳವಣಿಗೆ. ಯಾವುದೇ ಹಂಗಿಲ್ಲದ ಸಣ್ಣ ಪತ್ರಿಕೆಗಳು ಇಂತಹ ಸಂದರ್ಭದ ಬೆಳಕಿನ ಕಿರಣಗಳು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಶಸ್ತ್ರ ತರಬೇತಿ : ಮುತಾಲಿಕನ ಮೇಲಿನ್ನೂ ಕ್ರಮ ಯಾಕಿಲ್ಲ?

ಶ್ರೀರಾಮ ಸೇನೆಯು ಇತ್ತೀಚಿಗೆ ಬೆಳಗಾಂ ಜಿಲ್ಲೆ ಅಥಣಿ ತಾಲೂಕಿನ ನಂದಗಾವ್ ಹಳ್ಳಿಯಲ್ಲಿ 180 ಯುವಕರಿಗೆ 'ಮಾರ್ಷಲ್ ಕಲೆ' ಹೆಸರಿನಲ್ಲಿ ಶಸ್ತ್ರ ತರಬೇತಿ ನೀಡಿರುವುದು ಅತ್ಯಂತ ಆತಂಕದ ವಿಷಯವಾಗಿದೆ. ಸಂಘ ಪರಿವಾರದ ಕುಖ್ಯಾತ ಪ್ರಮೋದ ಮುತಾಲಿಕನ ನೇತೃತ್ವದಲ್ಲಿ ನಿವೃತ್ತ ಸೈನ್ಯಾಧಿಕಾರಿಗಳಿಂದ ತರಬೇತಿ ನೀಡಿದ ವರದಿಗಳಿವೆ. ಅಲ್ಲಿ ತರಬೇತಿ ಪಡೆದ ಆಯ್ದ 100 ಕಾರ್ಯಕರ್ತರಿಗೆ ಪೊಲೀಸ್ ಇಲಾಖೆಯ ನಾಗರೀಕ ರೈಫಲ್ ದಳದಲ್ಲಿ ಶಸ್ತ್ರಗಳ ತರಬೇತಿಗೆ ಸೇರಿಸಲಾಗುವುದು ಎಂಬುದು, ಇನ್ನಷ್ಟು ಗಂಭೀರ ವಿಚಾರ. ಇದಕ್ಕೆ ಅವಕಾಶ ನೀಡಲಾಗದು ಎಂದು ಇಲಾಖೆ ಅಧಿಕಾರಿಗಳು ಹೇಳಿರುವುದಾದರೂ, ಮುತಾಲಿಕನ ಪಡೆ ಶಸ್ತ್ರಾಸ್ತ್ರ ತರಬೇತಿಯನ್ನು ಹೊಂದುವುದಿಲ್ಲವೆಂದು ಹೇಳಲಾಗದು. ಯಾಕೆಂದರೆ 'ಹಿಂದುತ್ವ' ಸಿದ್ಧಾಂತದಡಿ ಸಂಘ ಪರಿವಾರದ ತುಕಡಿ ಇಂತಹ ಕೃತ್ಯಗಳಲ್ಲಿ ತೊಡಗಿರುವುದು ದೇಶದ ಹಲವಾರು ಕಡೆಯ ಘಟನೆಗಳ ವಿಚಾರಣೆಯಲ್ಲಿ ಸ್ಪಷ್ಟವಾಗಿದೆ. ಆದ್ದರಿಂದ ಎಚ್ಚರ, ಕಟ್ಟುನಿಟ್ಟಿನ ಕ್ರಮ ಅಗತ್ಯವಾಗಿದೆ.

ಈ ಶಿಬಿರದಲ್ಲಿ ಬೆಳಗಿನಿಂದ ತಡ ರಾತ್ರಿಯವರೆಗೂ ದೈಹಿಕ ತರಬೇತಿ ನೀಡಲಾದ ಬಗ್ಗೆ ಹಾಗೂ ಅಲ್ಲಿ ಭಯೋತ್ಪಾದನಾ ಕೃತ್ಯಗಳ ವಿಡಿಯೋ ಚಿತ್ರ ಪ್ರದರ್ಶಿಸಿರುವುದು ತರಬೇತಿಯ ನಿಜವಾದ ಉದ್ದೇಶವನ್ನು ಸ್ಪಷ್ಟಗೊಳಿಸಿದೆ.

ರಾಷ್ಟ್ರವಿರೋಧಿಗಳನ್ನು ದಮನಿಸಲು ಈ ಪಡೆ ಎಂದು ಮುತಾಲಿಕ ಹೇಳಿಕೊಂಡಿರುವುದು ಅದರ ಹಂಚಿಕೆ ಏನೆಂದು ತಿಳಿಸುತ್ತದೆ. ಸಂಘ ಪರಿವಾರದ ವ್ಯಾಖ್ಯಾನದಲ್ಲಿ ಅವರ ಫ್ಯಾಸಿಸ್ಟ್ ಮನೋಭಾವದ 'ಹಿಂದುತ್ವ' ಅಜೆಂಡಾ ಜಾರಿಯನ್ನು ಪ್ರತಿರೋಧಿಸುವವರು, ಮುಸ್ಲಿಂ ಅಲ್ಪಸಂಖ್ಯಾತರು, ದುಡಿಯುವ ವರ್ಗವನ್ನು ಸಂಘಟಿಸುವ ಕಮ್ಯುನಿಸ್ಟರೇ ಆಗಿದ್ದಾರೆ. ಆದರೆ ಈ ಚೆಡ್ಡಿ ಪಡೆ ಭ್ರಷ್ಟರು, ಸಮಾಜಘಾತುಕರನ್ನು ಮಟ್ಟಹಾಕಿದ ಒಂದು ಉದಾಹರಣೆಯೂ ಇಲ್ಲ. ವ್ಯವಸ್ಥಿತ ಕೋಮುಗಲಭೆಗಳಲ್ಲಿ ಇನ್ನಷ್ಟು ಉರಿ ಹಚ್ಚುವಲ್ಲಿ ಅವರ ಶೈಲಿಯ ದೇಶಪ್ರೇಮ ವ್ಯಕ್ತಗೊಳ್ಳುವುದು. ಇಂತಹದೇ ಹೊದಿಕೆಯಲ್ಲಿಯೇ ದೇಶದ ಹಲವಾರು ಕಡೆ 'ಹಿಂದುತ್ವ'ದ ಭಯೋತ್ಪಾದನಾ ಕೃತ್ಯಗಳು ಸಂಭವಿಸಿವೆ. ಮಾಲೆಗಾಂವ್, ಹೈದ್ರಾಬಾದ್‌ಗಳ ಮಸೀದಿ ಪ್ರಾರ್ಥನಾ ಸ್ಥಳಗಳಲ್ಲಿ ಸಂಭವಿಸಿದ ಬಾಂಬ್ ಸ್ಫೋಟಗಳ ರೂವಾರಿಗಳಾದ ಲೆ.ಕ. ಪುರೋಹಿತ್, ಅಸೀಮಾನಂದ, ಪ್ರಗ್ಯಾಸಿಂಗ್‌ರಂಥವರನ್ನು ಶ್ರೀರಾಮಸೇನೆ ತಯಾರಿಸುತ್ತಿಲ್ಲವೆಂದು ಹೇಗೆ ಹೇಳುವುದು? ಇದು ರಾಷ್ಟ್ರದ್ರೋಹವಲ್ಲವೇ?

ಇಂತಹ ಹಲವಾರು ಕುಖ್ಯಾತ ಘಟನೆಗಳಲ್ಲಿ ನಿರಂತರವಾಗಿ ಮುತಾಲಿಕ ತೊಡಗಿರುವ ನಿದರ್ಶನಗಳಿವೆ. ಹಿಂದೆ ಮುತಾಲಿಕ್ ಬಜರಂಗದಳದ ಅಧ್ಯಕ್ಷನಾಗಿರುವಾಗ ಅಕ್ರಮವಾಗಿ ರಾಜ್ಯದ ಹಲವಾರು ಕಡೆ 'ತ್ರಿಶೂಲ' ಗಳನ್ನು ವಿತರಿಸಲಾಗಿತ್ತು. 2008 ರ ಮೇ ಯಲ್ಲಿ ಹುಬ್ಬಳ್ಳಿ ಕೋರ್ಟ್ ಬಳಿ ಸಂಭವಿಸಿದ ಬಾಂಬ್ ಸ್ಫೋಟದ ಪ್ರಕರಣದಲ್ಲಿ ಭಜರಂಗದಳ ತೊಡಗಿದ್ದು, ಅದರ ಕಾರ್ಯಕರ್ತನಾಗಿದ್ದ ಕ್ರಿಮಿನಲ್ ಅಪರಾಧಿ ನಾಗರಾಜ ಜಂಬಲಗಿ ವಿಚಾರಣೆಯಿಂದ ಹೊರಬಂದಿತು. 2009 ರ ಜನವರಿ (13)ಯಲ್ಲಿ 'ರಾಷ್ಟ್ರೀಯ ರಕ್ಷಣಾ ಸೇನೆ' ಹೆಸರಿನಲ್ಲಿ ಕೂಡಲಸಂಗಮದಲ್ಲಿ 5 ದಿನಗಳ ತರಬೇತಿಯನ್ನು ನೀಡಲಾಗಿತ್ತು. ಮುತಾಲಿಕ ಭಜರಂಗದಳದಿಂದ ಪ್ರತ್ಯೇಕಗೊಂಡ ನಂತರವೂ ಇಂತಹುದೇ ಕೃತ್ಯಗಳಲ್ಲಿ ತೊಡಗಿದ್ದಾನೆ. ಹಲವಾರು ಬಾರಿ ಆತ್ಮಹತ್ಯಾ ದಳ ರಚಿಸುವುದಾಗಿ ಸಾರಿದ್ದಾನೆ. ಪಬ್ ದಾಳಿ, ಚರ್ಚ್ ಮೇಲಿನ ದಾಳಿಗಳ ಸಮರ್ಥನೆ ಸ್ವಯಂ ಪೊಲೀಸ್ ಗಿರಿಯ, ಕೋಮುದ್ವೇಷದ ಅಭಿವ್ಯಕ್ತಿಯಾಗಿವೆ.


ಈ ಎಲ್ಲಾ ಕೃತ್ಯಗಳೂ ಭಾರತೀಯ ದಂಡ ಸಂಹಿತೆಯ ಪ್ರಕಾರ ತೀವ್ರ ದಂಡನಾರ್ಹ ಅಪರಾಧಗಳಾಗಿವೆ. ವಿಚಿತ್ರವೆಂದರೆ ಇಷ್ಟೆಲ್ಲಾ ಸಂಗತಿಗಳು ಹೊರಬಂದರೂ ಕರ್ನಾಟಕ ಸರ್ಕಾರ ಏನೊಂದೂ ಕ್ರಮ ವಹಿಸಿಲ್ಲ. ಈ ಜಾಣಕುರುಡು ಖಂಡನೀಯ. ಅಧಿಕಾರಕ್ಕೇರುವ ಮೊದಲು, ಅಧಿಕಾರದಲ್ಲಿರುವಾಗಲೂ ಬಿಜೆಪಿಯು ಮುತಾಲಿಕನನ್ನು ಸಮರ್ಥಿಸುತ್ತಾ, ಬೆಂಬಲಿಸುತ್ತಾ ಬಂದಿದೆ. ಇದಕ್ಕೆ ಸಂಘಪರಿವಾರದ ಆಶೀರ್ವಾದವಿದೆ. ಇದರ ನಂಟಿನ ಹಲವಾರು ಮಠ, ಆಶ್ರಮಗಳಂತಹ ಧಾರ್ಮಿಕ ಸ್ಥಳಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಇತ್ತೀಚಿಗೆ ಪ್ರತಿಯೊಂದಕ್ಕೂ ಶಸ್ತ್ರ ತರಬೇತಿ ನೀಡುವ ಮಾತುಗಳನ್ನಾಡಲಾಗುತ್ತಿದೆ. ಕೆಲವೇ ದಿನಗಳ ಹಿಂದೆ ಯೋಗಗುರು ರಾಮದೇವ್ ಭ್ರಷ್ಟಾಚಾರದ ವಿರುದ್ಧ ಹೋರಾಟದ ಪ್ರಹಸನವಾಗಿ ಹೋದಾಗ 11 ಲಕ್ಷ ಯುವಕರಿಗೆ ಶಸ್ತ್ರ ತರಬೇತಿ ನೀಡುವುದಾಗಿ ಸಾರಿದ್ದರು. ಈಗಲೂ ಮುತಾಲಿಕ ಅದೇ ಧಾಟಿಯಲ್ಲಿ ಭ್ರಷ್ಟಾಚಾರದ ವಿರುದ್ಧ ಶಸ್ತ್ರ ತರಬೇತಿ ಪಡೆದ ಪಡೆ ಹೋರಾಡುವುದಾಗಿ ಹೇಳುತ್ತಿದ್ದಾನೆ. ಎರಡು ಬಾಯಿಗಳಾದರೂ ಒಂದೇ ಧ್ವನಿಯಲ್ಲವೇ? ಇಲ್ಲಿ ಒಂದು ಗಂಭೀರ ಬೆಳವಣಿಗೆಯನ್ನು ಅವಲೋಕಿಸಬೇಕು. ಅದೆಂದರೆ ಧರ್ಮ, ದೇಶ ರಕ್ಷಣೆ ಹೆಸರಿನಲ್ಲಿ ಇಂತಹ ಪಡೆಗಳು ಬೆಳೆಯುತ್ತಿರುವುದು ಅಪಾಯದ ಸ್ಪಷ್ಟ ಸೂಚನೆಯಾಗಿದೆ. ಈಗಾಗಲೇ ದೇಶವು ಭಯೋತ್ಪಾದನೆಯ ಕರಾಳ ಕ್ರೌರ್ಯದ ಮುಖವನ್ನು ಕಂಡಿದೆ. ಇಂತಹ ಸಮಯದಲ್ಲಿ ಅದನ್ನೆದುರಿಸುವ ಹೆಸರಿನಲ್ಲಿ ಬೆಳೆವ ಯಾವುದೇ ಬಣ್ಣದ ಭಯೋತ್ಪಾದನೆಯು ಶಾಂತಿ ತರದೇ ಅನಾಹುತವನ್ನೇ ತರಲಿದೆ. ಆದ್ದರಿಂದ ಇಂತಹ ಪ್ರಯತ್ನ ಯಾರೇ ಮಾಡಲಿ ದಮನಿಸಬೇಕು. ಈಗಲಾದರೂ ಸರ್ಕಾರ ಮುತಾಲಿಕನ ಮೇಲೆ ಹಾಗೂ ಶ್ರೀರಾಮಸೇನೆಯ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಉಪವಾಸ.... ಉಳಿಸಿದ ಪ್ರಶ್ನೆಗಳು

ಇದೆಂತಹ ವಿಚಿತ್ರ? ಕರ್ನಾಟಕದ ರಾಜಕಾರಣದಲ್ಲಿ ಏನೆಲ್ಲಾ ಸಂಭವಿಸುತ್ತವೆ! ವಿರೋಧ ಪಕ್ಷದಲ್ಲಿರುವವರು ಆಡಳಿತದಲ್ಲಿರುವವರ ತಪ್ಪು ಒಪ್ಪುಗಳನ್ನು ಎತ್ತಿ ತೋರಿಸುವುದು, ಆರೋಪಿಸುವುದು,

ಧರಣಿ ಹೂಡುವುದು ಸಾಮಾನ್ಯ. ಆದರೆ ಇಲ್ಲೀಗ ಉಲ್ಟಾ! ವಿರೋಧ ಪಕ್ಷವೊಂದು ಆಡಳಿತ ಪಕ್ಷದ ಅಕ್ರಮ, ಹಗರಣಗಳನ್ನು ಹೊರ ತೆಗೆಯುತ್ತದೆ. ಇವುಗಳ ಸತ್ಯಾಸತ್ಯತೆ ಹೊರತರಲು ವಿಚಾರಣೆಗಾದರೂ ಸರ್ಕಾರವೊಂದು ಒಳಗಾಗಬೇಕಲ್ಲ!. ಇವಾವಕ್ಕೂ ಸಿದ್ಧವಿಲ್ಲದ ಆಡಳಿತ ಪಕ್ಷವಾದ ಬಿಜೆಪಿ ಆರೋಪಿಸಿದವರ ಮೇಲೆ ಮರು ಆರೋಪ ಮಾಡಿ ಬಾಯಿ ಮುಚ್ಚಿಸಲು ಹವಣಿಸುತ್ತದೆ, ಇಂತಹುದೇ ಆರೋಪಕ್ಕೆ ಈಡಾದ ವಿರೋಧ ಪಕ್ಷವೊಂದರ ನಾಯಕರು ತನ್ನ ಮೇಲೆ ಸಿಬಿಐ ತನಿಖೆಯಾಗಲೆಂದು ಆಮರಣ ಉಪವಾಸ ಕೂಡುತ್ತಾರೆ. ಇದೇ ವಿಚಿತ್ರ!



ಆಮರಣ ಉಪವಾಸ

1500 ಕೋಟಿ ರೂ.ಗಳ ಅಕ್ರಮ ಆಸ್ತಿಯನ್ನು ದೇವೇಗೌಡರ ಕುಟುಂಬ ಹೊಂದಿದೆಯೆಂದು ಬಿಜೆಪಿ ಪಕ್ಷವು ಆರೋಪಿಸಿ 'ಚಾರ್ಜ್‌ಷೀಟನ್ನು' ಬಿಡುಗಡೆ ಮಾಡಿತು. ಇದಕ್ಕಾಗಿ ದೆಹಲಿಯಿಂದ ಪಕ್ಷದ ವಕ್ತಾರೆ ನಿರ್ಮಲಾರವರನ್ನು ಕರೆಸಲಾಗಿತ್ತು. ರಾಜ್ಯ ಅದ್ಯಕ್ಷ ಈಶ್ವರಪ್ಪ ಮುಂತಾದವರು ನಾಲಿಗೆ ಕೂಡಿಸಿದ್ದರು. ಇದನ್ನು ಸವಾಲಾಗಿ ಸ್ವೀಕರಿಸಿದ ಕುಮಾರಸ್ವಾಮಿಯವರು 'ಕುಟುಂಬದ ಮಾನ-ಜೀವಕ್ಕಿಂತಲೂ ಮುಖ್ಯ'ವೆಂದು ಜುಲೈ 10 ರಂದು ಆಮರಣ ಉಪವಾಸ ಕುಳಿತದ್ದು, ಮರುದಿನ ಸರ್ಕಾರದ ಪ್ರಮುಖ ಸಚಿವರು ಸಾಂತ್ವನ, ಸಮಜಾಯಿಷಿ ಪತ್ರ ಹಿಡಿದುಬಂದಿದ್ದು, ಸತ್ಯಾಗ್ರಹಿಯ ಆರೋಗ್ಯ ಹದಗೆಡುವ ಆತಂಕದಿಂದ ಜ್ಞಾನಪೀಠ ಪುರಸ್ಕೃತರಾದ ಡಾ.ಅನಂತಮೂರ್ತಿಯವರು ಹಣ್ಣಿನ ರಸ ಕುಡಿಸಿ ಉಪವಾಸ ಅಂತ್ಯಗೊಳಿಸಿದ್ದು ಗತಕಾಲಕ್ಕೆ ಸೇರಿದ ಘಟನೆ.

ಎಡಬಿಡಂಗಿ

ಈ ಸತ್ಯಾಗ್ರಹದಿಂದ ಕುಟುಂಬದ ಮಾನ ಉಳಿಯಿತೋ, ಬಿಜೆಪಿ ಮಾಡಿದ ಆರೋಪಗಳ ತನಿಖೆ ನಡೆಯುತ್ತೋ ಎನ್ನುವುದಕ್ಕಿಂತ ಮುಖ್ಯಮಂತ್ರಿ ಹಾಗೂ ಸಚಿವರು.


ಸರ್ಕಾರ-ಪಕ್ಷದ ನಾಯಕರು ನಡೆಸಿದ ಭ್ರಷ್ಟ ಹಗರಣಗಳನ್ನು ನಿರಂತರವಾಗಿ ಅನಾವರಣಗೊಳಿಸುತ್ತಿರುವ ಜೆಡಿಎಸ್‌ಗೆ ಮತ್ತೊಂದು ರಾಜಕೀಯ ಮೈಲುಗಲ್ಲು ಸಿಕ್ಕಿತು. ತನ್ನ ಮೇಲಿನ ಹಗರಣಗಳನ್ನು ಮುಚ್ಚಿಕೊಳ್ಳುವ ಬಿಜೆಪಿ ಪಕ್ಷದ ತಂತ್ರಕ್ಕೆ ಮರುತಂತ್ರವಾಗಿ ರಾಜಕೀಯ ಪ್ರತಿಕ್ರಿಯೆಯಾಗಿತ್ತು ಈ ಸತ್ಯಾಗ್ರಹ. ಹಗರಣಗಳು ದಾಖಲೆ ಸಮೇತ ಹೊರಬಂದರೂ ಸರ್ಕಾರ ರಾಜೀನಾಮೆ ನೀಡಲಿಲ್ಲ, ಕನಿಷ್ಟ ವಿಚಾರಣೆಗೊಪ್ಪದ ಮುಖ್ಯಮಂತ್ರಿ, ಇನ್ನೊಂದು ಸರ್ಕಾರಕ್ಕೆ ಕುಮಾರಸ್ವಾಮಿ ಸ್ವತಃ ಸಿಬಿಐ ತನಿಖೆಗೆ ಆಗ್ರಹಿಸಿ ಸತ್ಯಾಗ್ರಹ ನಡೆಸಿದ್ದರೆ, ಬಿಜೆಪಿ ಯು ತನ್ನದನ್ನು ಮುಚ್ಚಿಕೊಳ್ಳುವ ಇಬ್ಬಗೆಯ, ಎಡಬಿಡಂಗಿತನವನ್ನು ಬಯಲಿಗಿಟ್ಟಿದೆ.

ಮಾನ ಮುಚ್ಚಿಕೊಳ್ಳಲು

ಬಿಜೆಪಿಯು ಹೊರತಂದ ಕಿರು ಹೊತ್ತಿಗೆಯೂ ಸಹ ನಿರ್ದಿಷ್ಟ ಪ್ರಕರಣಗಳನ್ನು ಸಮರ್ಥಿಸು ವಂತಹ ಸೂಕ್ತವಾದ ದಾಖಲಾಧಾರಗಳಿಲ್ಲದೇ, ಹಿಂದೆಲ್ಲಾ

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್



ಚಿಕ್ಕಬಳ್ಳಾಪುರ

ವೇತನವಿಲ್ಲ ಕನಿಷ್ಟ – ಬದುಕಿಲ್ಲಿ ನಿಕೃಷ್ಟ

ಅಕ್ಷರ ದಾಸೋಹ ನೌಕರರಿಂದ ಜಿಲ್ಲಾಧಿಕಾರಿ ಕಛೇರಿ ಮುಂದೆ ಧರಣಿ

ಜುಲೈ 12 ರಂದು ಅಕ್ಷರ ದಾಸೋಹ ನೌಕರರ ರಾಜ್ಯ ಸಮಿತಿಯ ಕರೆಯ ಮೇರೆಗೆ ಚಿಕ್ಕಬಳ್ಳಾಪುರದ ಜಿಲ್ಲಾಧಿಕಾರಿ ಕಛೇರಿ ಮುಂದೆ ಅಕ್ಷರ ದಾಸೋಹ ನೌಕರರಿಂದ ಪ್ರತಿಭಟನೆ ನಡೆಸಲಾಯಿತು. ಚಿಕ್ಕಬಳ್ಳಾಪುರದ ಪ್ರವಾಸಿ ಮಂದಿರದಿಂದ ಜಿಲ್ಲಾಧಿಕಾರಿ ಕಛೇರಿಯವರೆಗೂ ರ್‍ಯಾಲಿ ನಡೆಸಲಾಯಿತು. ರ್‍ಯಾಲಿಯು ಉದ್ದಕ್ಕೂ ನೂರಾರು ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ದಿಕ್ಕಾರಗಳನ್ನು ಕೂಗಿದರು. ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಧರಣಿ ನಿರತರನ್ನು ಉದ್ದೇಶಿಸಿ ಮಾತಾನಾಡಿದ ಸಿ.ಐ.ಟಿ.ಯು. ಜಿಲ್ಲಾಧ್ಯಕ್ಷರಾದ ಸಿದ್ದಗಂಗಪ್ಪನವರು ಬಿಸಿಯೂಟ ನೌಕರರಿಗೆ ಯಾವುದೇ ಉದ್ಯೋಗ ಭದ್ರತೆ ಇಲ್ಲ ಕನಿಷ್ಠ ವೇತನವಿಲ್ಲ ಒಂದು ತಿಂಗಳು ದುಡಿದರೆ ಕೇವಲ ಸಾವಿರ ರೂಪಾಯಿ ಮಾತ್ರ ನೀಡಲಾಗುತ್ತಿದೆ. 1948 ರಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಅದರಲ್ಲಿ ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರಾಗಲಿ, ಅವರಿಗೆ ಕನಿಷ್ಠ ವೇತನ ನೀಡಬೇಕು ಅಂತ ಇದೆ. ಆದರೆ ಅದರ ಪ್ರಕಾರ 6000 ರೂಪಾಯಿ ಕನಿಷ್ಠ ವೇತನ ನೀಡಬೇಕು. ರಾಜ್ಯದಲ್ಲಿ 20,000 ಕ್ಕಿಂತಲೂ ಹೆಚ್ಚು ಮಹಿಳೆಯರ ಉದ್ಯೋಗಕ್ಕೆ ಧಕ್ಕೆ ತಂದಿರುವ ಇಸ್ಕಾನ್ ಸಂಸ್ಥೆಗೆ ಬಿಸಿಯೂಟವನ್ನು ಖಾಸಗೀಕರಣ ಮಾಡಬಾರದು. ನಮ್ಮ ದೇಶದ ಬಡಮಕ್ಕಳ ಹಾಗೂ ಭಿಕ್ಷೆ ಮಾಡುತ್ತಿರುವ ಮಕ್ಕಳ ಫೋಟೋಗಳನ್ನು ತೆಗೆದು ಬೇರೆ ದೇಶಗಳಲ್ಲಿ ತೋರಿಸಿ ಹಣವನ್ನು ವಸೂಲಿ ಮಾಡುತ್ತಿರುವ ಇಸ್ಕಾನ್ ಹಾಗೂ ಇನ್ನಿತರ ಖಾಸಗಿ ಸಂಸ್ಥೆಗಳಿಗೆ ಬಿಸಿಯೂಟವನ್ನು ವಹಿಸಬಾರದೆಂದು ಈ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇವೆ ಎಂದರು.

ನಂತರ ಸಿ.ಐ.ಟಿ.ಯು. ಜಿಲ್ಲಾ ಉಪಾಧ್ಯಕ್ಷರಾದ ಮುನಿಕೃಷ್ಣಪ್ಪ ಮಾತನಾಡಿ ಹಾಜರಾತಿ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಬಿಸಿಯೂಟ ನೌಕರರನ್ನು ಇವತ್ತು ಅದೇ ಹಾಜರಾತಿ ನೆಪಒಡ್ಡಿ ಕೆಲಸದಿಂದ ಕಿತ್ತು ಹಾಕುತ್ತಿರುವುದು ದುರದೃಷ್ಟಕರ. 25 ಮಕ್ಕಳಿಗೆ ಒಬ್ಬ ಅಡುಗೆಯವರು ಎಂದು ಇದ್ದಿದ್ದನ್ನು ಈಗ 50 ಮಕ್ಕಳಿಗೆ ಒಬ್ಬರು, 100 ಕ್ಕೆ ಇಬ್ಬರು ಈ ರೀತಿ ನೇಮಕ ಮಾಡಿಕೊಳ್ಳುತ್ತಿರುವುದರಿಂದ ಸಾವಿರಾರು ನೌಕರರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಎಸ್.ಡಿ.ಎಂ.ಸಿ. ರವರಿಂದ ಹಾಗೂ ಮುಖ್ಯ ಶಿಕ್ಷಕರಿಂದ ಕಿರುಕುಳವನ್ನು ಅನುಭವಿಸುತ್ತಿರುವ ಇವರಿಗೆ ಕೇವಲ 1000 ರೂಪಾಯಿ ಸಂಬಳ ಕೊಟ್ಟು



ದುಡಿಸಿಕೊಳ್ಳುತ್ತಿರುವುದರಿಂದ ಇವರಿಗೆ ಉದ್ಯೋಗ ಭದ್ರತೆ ಕನಿಷ್ಠ ವೇತನ ಜಾರಿಯಾಗಬೇಕೆಂದು ಒತ್ತಾಯಿಸಿದರು. ನಂತರ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಅಕ್ಷರ ದಾಸೋಹ ನೌಕರ ಸಂಘದ ಅಧ್ಯಕ್ಷರು ಆಯಾ ತಾಲ್ಲೂಕಿನ ಸಮಸ್ಯೆಗಳ ಬಗ್ಗೆ ಮಾತನಾಡಿದರು.

ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿ ಲಕ್ಷ್ಮಿ ದೇವಮ್ಮರವರು ಅಕ್ಷರ ದಾಸೋಹ ನೌಕರರ ಬೇಡಿಕೆಗಳು ಹಾಗೂ ಸಮಸ್ಯೆಗಳ ಬಗ್ಗೆ ಮಾತನಾಡಿ ಬೇಡಿಕೆಗಳ ಮನವಿ ಪತ್ರವನ್ನು ಜಿಲ್ಲಾ ನಿರ್ದೇಶಕರಿಗೆ ಕೊಟ್ಟರು ಅದೇ ಸಮಯಕ್ಕೆ ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷರಾದ ಬಿ. ಸಾವಿತ್ರಮ್ಮನವರು ಆಗಮಿಸಿದರು. ಅವರಿಗೆ ಬೇಡಿಕೆಗಳ ಮನವಿ ಪತ್ರವನ್ನು, ಸಿದ್ದಗಂಗಪ್ಪ ಮುನಿಕೃಷ್ಣಪ್ಪರವರು ನೀಡಿದರು. ನಂತರ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಅಧಿಕಾರಿ ಸಾವಿತ್ರಮ್ಮನವರು ನಿಮ್ಮ ಎಲ್ಲಾ ಬೇಡಿಕೆಗಳನ್ನು ಸಂಬಂಧಪಟ್ಟ ಇಲಾಖೆಯ ಬಳಿ ಚರ್ಚಿಸಿ ಈಡೇರಿಸಲಾಗುತ್ತದೆ ಎಂದು ತಿಳಿಸಿದರು.

ಅಕ್ಷರ ದಾಸೋಹ ಜಿಲ್ಲಾಧ್ಯಕ್ಷರಾದ ರಾಜಮ್ಮ, ಕಾರ್ಯದರ್ಶಿ ಮುನಿಲಕ್ಷ್ಮಮ್ಮ ಬಾಗೇಪಲ್ಲಿ ಅಕ್ಷರ ದಾಸೋಹ ನೌಕರರ ಸಂಘದ ಅಧ್ಯಕ್ಷರಾದ ಮುನಿಗೋವಿಂದಮ್ಮ, ಕಾರ್ಯದರ್ಶಿ ಸುಧಮ್ಮ, ಚಿಕ್ಕಬಳ್ಳಾಪುರದ ಮಂಜುಳಮ್ಮ, ಶಿಡ್ಲಘಟ್ಟದ ಗಂಗರತ್ನಮ್ಮ, ಚಿಂತಾಮಣಿಯ ಇಂದಿರಮ್ಮ ಹಾಗೂ ಸಿ.ಐ.ಟಿ.ಯು. ಮುಖಂಡರಾದ ಮುಸ್ತಫಾ, ನರಸಿಂಹರೆಡ್ಡಿ, ಕೃಷ್ಣ ಮುಂತಾದವರು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ವರದಿ : ಮುಸ್ತಫಾ

ಉಪವಾಸ.... ಉಳಿಸಿದ ಪ್ರಶ್ನೆಗಳು

ಪುಟ 3 ರಿಂದ

ಮಾಡಲಾದ ಆರೋಪಗಳ ಸಂಕಲನವಾಗಿದೆ. ಜೆಡಿಎಸ್ ನಾಯಕರಿಗೆ ಯಡಿಯೂರಪ್ಪ ಒಡ್ಡಿದ ಆಮಿಷದ ಆಣೆ ಪ್ರಮಾಣದ ಪ್ರಕರಣದಲ್ಲಿ ಹೋದ ಮಾನ ಮುಚ್ಚಿಕೊಳ್ಳಲು ಬಿಜೆಪಿ ನಾಯಕರು ತರಾತುರಿಯಲ್ಲಿ ಮಾಡಿದ ವರಸೆಯಿದೆಂಬುದು ಸ್ವಯಂವೇದ್ಯ.

ಅದನ್ನೇ ಅಲ್ಲಿಗೆ ಬಂದಿದ್ದ ಸಚಿವರಾದ ಆರ್.ಅಶೋಕ, ವಿ.ಸೋಮಣ್ಣ, ಬಚ್ಚೇಗೌಡರವರು 'ಇದು ನಮ್ಮ ರಾಜಕೀಯ ಆರೋಪದ ಪ್ರತಿಕ್ರಿಯೆಯಾಗಿತ್ತು' ಎಂದು ಒಪ್ಪಿಕೊಂಡರು. ಅದೇ ಹೊತ್ತಿನಲ್ಲಿ ಸಿಬಿಐ ಮೇಲೆ ತಮ್ಮ ಸರ್ಕಾರಕ್ಕೆ ವಿಶ್ವಾಸವಿಲ್ಲ, ಆದ್ದರಿಂದ ತನಿಖೆಯನ್ನು ಅದಕ್ಕೊಪ್ಪಿಸಲಾಗದು ಎಂಬುದೂ ಕೇವಲ ನೆಪ. ಒಂದುವೇಳೆ ಒಪ್ಪಿ ಬಿಟ್ಟರೆ ತಮ್ಮ ಮೇಲಿನ ಆರೋಪಗಳನ್ನೂ ಸಿಬಿಐಗೆ ಕೊಡಬೇಕಾಗುವುದೆಂಬ ಭಯ. ಆಣೆ-ಪ್ರಮಾಣದಲ್ಲಿ ಪಲಾಯನ ಮಾಡಿದಂತೆ ಇಲ್ಲೂ ಬಿಜೆಪಿ ಮಾಡಿದೆ. ಒಂದು ವೇಳೆ ಬಿಜೆಪಿ ಗೆ ಸಿಬಿಐ ಮೇಲೆ ವಿಶ್ವಾಸವಿಲ್ಲದಿದ್ದರೆ ಸಿಓಡಿ ಅಥವಾ ನ್ಯಾಯಾಂಗ ತನಿಖೆಯಂತಹ ಸಂಸ್ಥೆಗೆ ಒಪ್ಪಿಸಬಹುದಿತ್ತು. ಆದರೆ ಸರ್ಕಾರಕ್ಕೆ ಇವೆಲ್ಲವೂ ಬೇಡವಾಗಿದೆ. ಈ ಎಲ್ಲಾ ವಿದ್ಯಾಮಾನಗಳು ಜೆಡಿಎಸ್‌ಗೆ ಒಂದಿಷ್ಟು ಸಕಾರಾತ್ಮಕ ಪ್ರಭಾವವನ್ನೂ ಮೂಡಿಸಿದೆ. ಇದರ ಬಳಿಕ ಜೆಡಿ(ಎಸ್) ಬಿಜೆಪಿಯ ಮೇಲೆ ಮಾನನಷ್ಟ ಮೊಕದ್ದಮೆ ಹೂಡುವ ಹುರುಪು ತೋರಿಸಿದೆ.

ಮಿತಿಗಳು

ಇದೇ ಹೊತ್ತಿನಲ್ಲಿ ಆಮರಣ ಉಪವಾಸ ಕಾರ್ಯಕ್ರಮದ ಸ್ವರೂಪದ ಬಗ್ಗೆ ಒಂದಿಷ್ಟು ವಿಮರ್ಶೆಯ ಅಗತ್ಯವಿದೆ. ಬಿಜೆಪಿ ಆರೋಪಗಳ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು ಸರಿಯಾಗಿದೆ. ಆದರೆ ಬಿಜೆಪಿ ಯ ಧೋರಣೆ ಗೊತ್ತಿರುವಾಗಲೂ ಸಿಬಿಐ ತನಿಖೆಗೆ ಆಗ್ರಹಿಸಿ ಆರಂಭಿಸಿದ ಆಮರಣ ಸತ್ಯಾಗ್ರಹವು ಮರುದಿನವೇ ಮುಕ್ತಾಯವಾಗುವಂತಾದದ್ದು ಹೋರಾಟ ವಿಸ್ತರಿಸುವ, ತೀವ್ರಗೊಳಿಸುವ ಸಾಧ್ಯತೆಗಳನ್ನು ಮಿತಿಗೊಳಪಡಿಸಿತು ಎಂದನ್ನಿಸುತ್ತದೆ. ಆದ್ದರಿಂದ ಆರೋಗ್ಯದ ಮಿತಿಯರಿತು ನಿರಂತರ ಧರಣಿಯಂತಹ ವಿಧಾನಗಳನ್ನು ಆಯ್ಕೆ ಮಾಡಬಹುದಿತ್ತೇ?

ಎರಡನೆಯದಾಗಿ, ರಾಜ್ಯದಲ್ಲಿ ಅಧಿಕೃತ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಪಕ್ಷವು ಬಿಜೆಪಿ ವಿರುದ್ಧ ಹೋರಾಡುತ್ತಿಲ್ಲ, ಆ ಮನಸ್ಸೂ ಇಲ್ಲ. ಆದರೆ ಜೆಡಿಎಸ್ ನಿರಂತರವಾಗಿ ಪ್ರತಿಭಟಿಸುತ್ತಿದೆ. ನಿಜ, ಆದರೆ ಆ ವಿರೋಧ, ಈ ಸತ್ಯಾಗ್ರಹ ಕೇವಲ ಕುಟುಂಬದ ಮೇಲಿನ ಆರೋಪದ ಪ್ರಶ್ನೆಗಳಿಗೆ ಮಾತ್ರ ಸೀಮಿತಗೊಳ್ಳಬೇಕೇ? ಹಗರಣಗಳಷ್ಟೇ ಹೋರಾಟದ ವಿಷಯಗಳೇ? ಈಗಲೂ ಜೆಡಿಎಸ್ ರಾಜ್ಯದ ಜನರ ಮೂಲಭೂತ ಜ್ವಲಂತ ಪ್ರಶ್ನೆಗಳನ್ನು ತನ್ನ ಹೋರಾಟದ ಪ್ರಧಾನ ಪ್ರಶ್ನೆಯಾಗಿ ಒಳಗೊಳ್ಳುತ್ತಿಲ್ಲ. ಎಡ ಪಕ್ಷಗಳೊಂದಿಗೆ ಐಕ್ಯ ಹೋರಾಟಗಳಿಗೂ ಕೈ ಜೋಡಿಸುತ್ತಿಲ್ಲ. ಬದಲಾಗದ ಅದರ ಈ ಧೋರಣೆ ಬಿಜೆಪಿ ಯನ್ನು ಅಧಿಕಾರದಿಂದ ಉಚ್ಚಾಟಿಸಬಲ್ಲದೇ? ಜೆಡಿ(ಎಸ್)ನ್ನು ಅಧಿಕಾರಕ್ಕೇರಿಸೀತೆ? ಇದು ಜೆಡಿಎಸ್ ಉಳಿಸಿಕೊಂಡಿರುವ ಪ್ರಶ್ನೆ.

★

ಸೇಡಿನ ರಾಜಕಾರಣದ ಒಂದು ತಾಜಾ ಸ್ಯಾಂಪಲ್ ನೋಡಬೇಕೆ? ಹಾಗಾದರೆ ಕರ್ನಾಟಕದ ಬಿಜೆಪಿ ಸರ್ಕಾರದ ಆಡಳಿತ ವೈಖರಿಯತ್ತ ಕಣ್ಣು ಹಾಯಿಸಿ.

ತಮ್ಮ ಕ್ಷೇತ್ರ, ತಮ್ಮ ಸ್ವಂತ ಜಿಲ್ಲೆಯಾದ ಹಾಸನದಲ್ಲಿ ಯಾವುದೇ ಅಭಿವೃದ್ಧಿ ಯೋಜನೆಗಳಿಗೆ ರಾಜ್ಯ ಸರ್ಕಾರ ನೆರವು ನೀಡುತ್ತಿಲ್ಲ, ಅಲ್ಲದೇ ತಾರತಮ್ಯ, ಸೇಡಿನ ರಾಜಕಾರಣ ಮಾಡುತ್ತಿದೆಯೆಂದು ಪ್ರತಿಭಟಿಸಿ ಮಾಜಿ ಪ್ರಧಾನಿಗಳು ಮುಖ್ಯಮಂತ್ರಿಗಳ ಮನೆ ಮುಂದೆ ಧರಣಿ ಕೂಡಬೇಕಾಗಿ ಬಂತು.

ಹಿರಿಯ ರಾಜಕಾರಣಿ, ಸಂಸದ ದೇವೇಗೌಡರವರು ಅನಿವಾರ್ಯವಾಗಿ ಹಾಸನದಲ್ಲೇ ಧರಣಿ ಕುಳಿತು ಪ್ರತಿಭಟಿಸಿದರು. ಆದಾದ ಬಳಿಕವೂ ಸರ್ಕಾರ ಸ್ಪಂದಿಸಲೇ ಇಲ್ಲ. ಕೊನೆಗೆ ಮುಖ್ಯಮಂತ್ರಿ ಮನೆ ಮುಂದೆ ಪ್ರತಿಭಟಿಸುವಂತಾದದ್ದು ವಸ್ತುಸ್ಥಿತಿಗೆ ಹಿಡಿದ ಕನ್ನಡಿ. ಸದಾ ಅಭಿವೃದ್ಧಿಯ ಬಗ್ಗೆಯೇ ಮಾತನಾಡುವ, ಸೇಡಿನ ರಾಜಕಾರಣ ತಮ್ಮದಲ್ಲ ಎಂದೆಲ್ಲಾ ಹೇಳುವ ಯಡಿಯೂರಪ್ಪನವರು ಹಾಸನಕ್ಕೆ ದಿಗ್ಬಂಧನ ಹಾಕಿದ್ದೇಕೆ? ಹಾಸನ ಕರ್ನಾಟಕದಲ್ಲಿ ಇಲ್ಲವೇ? ಅಲ್ಲಿನ ಜನ ಮತ ನೀಡಿ ಜನಪ್ರತಿನಿಧಿಗಳನ್ನು ಕಳಿಸಲಿಲ್ಲವೇ? ಕಾಲಕಾಲಕ್ಕೆ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಹಣ ಹರಿಯುವುದಿಲ್ಲವೇ?

ಬಿಜೆಪಿ - ಜೆಡಿ(ಎಸ್) ಗಳ ನಡುವಿನ ರಾಜಕೀಯ ಸಮರ ತಿಳಿದದ್ದೇ. ಇದನ್ನು ರಾಜಕೀಯವಾಗಿಯೇ ಎದುರಿಸಬೇಕೆ ಹೊರತು ಪಾಳೆಗಾರರಂತೆ ದಿಗ್ಬಂಧಿಸುವುದಲ್ಲ.

ಅಂತೂ ಹೂಗುಚ್ಛಗಳ ಹಿಡಿದು ಚರ್ಚೆಗೆ ಬರಮಾಡಿಕೊಂಡ ಮುಖ್ಯಮಂತ್ರಿಗಳ ಅಧಿಕಾರವೆಂದರೆ ಮನಸೋ ಇಚ್ಛೆಯೆಂದಲ್ಲ, ಕಾನೂನುಬದ್ಧ ಆಡಳಿತ ಎಂಬುದನ್ನು ತಿಳಿದುಕೊಳ್ಳಲಿ.

ಬಳ್ಳಾರಿಯಿಂದ ಬೆಂಗಳೂರಿಗೆ ಬೈಕ್ ಜಾಥಾ

'ನ್ಯಾಯಯುತ ಬೆಲೆ ಕೊಡಿ'

18 ಗ್ರಾಮಗಳ ಭೂಮಿ ಕಳೆದುಕೊಂಡ ರೈತರ ಆಗ್ರಹ

ದೇಶದಾದ್ಯಂತ ಭೂಸ್ವಾಧಿನದ ವಿರುದ್ಧ ಹೋರಾಡುವ ಬಿಜೆಪಿ ಪಕ್ಷವು ಕರ್ನಾಟಕ ರಾಜ್ಯದಲ್ಲಿ ಮಾತ್ರ ಬಲವಂತದ ಭೂಸ್ವಾಧೀನಕ್ಕೆ ಮುಂದಾಗುತ್ತಿರುವುದು ಬಿಜೆಪಿಯ ದ್ವಂದ್ವ ಹಾಗೂ ದ್ವಿಮುಖ ನೀತಿಯನ್ನು ಎತ್ತಿ ತೋರಿಸುತ್ತಿದೆಯೆಂದು ಅಖಿಲ ಭಾರತ ರೈತರ ಸಂಘ (ಎಐಕೆಎಸ್)ನ ಮಹಾ ಪ್ರಧಾನ ಕಾರ್ಯದರ್ಶಿ ಕೆ.ವರದರಾಜನ್ ಟೀಕಿಸಿದರು.

ಅವರು ಜುಲೈ 11, 2011 ರಂದು ಬೆಳಿಗ್ಗೆ ಬೆಂಗಳೂರು, ನಗರಕ್ಕೆ ಆಗಮಿಸಿ ರೈತರ ಬೈಕ್ ಜಾಥಾವನ್ನು ಸ್ವಾಗತಿಸಿ ಮಾತನಾಡುತ್ತಿದ್ದರು. ಭೂಸಂತ್ರಸ್ಥರ ಹೋರಾಟ ಸಮಿತಿ ಬಳ್ಳಾರಿ ಜಿಲ್ಲೆಯು, ಮಿತ್ತಲ್, ಬ್ರಾಹ್ಮಿಣಿ, ಜಿಂದಾಲ್, ಬಿಎಸ್‌ಎಎಲ್, ಭೂಷಣ್, ಬಿಟಿಪಿಎಸ್, ಶಾತವಾಹನ ಮುಂತಾದ ಕೈಗಾರಿಕೆಗಳಿಗಾಗಿ ಕೆಐಎಡಿಬಿ ಬಲವಂತವಾಗಿ ಭೂಸ್ವಾಧೀನ ಮಾಡಿದ 18 ಹಳ್ಳಿಗಳ ರೈತರು 9.7.2011ರಿಂದ ಕುಡುತಿನಿ ಗ್ರಾಮದಲ್ಲಿ ಉದ್ಘಾಟನೆ ಮಾಡಿಕೊಂಡು ರಾಜ್ಯದಾದ್ಯಂತ ಪ್ರಚಾರ ನಡೆಸಿ ಇಂದು ಬೆಂಗಳೂರು ನಗರವನ್ನು ಪ್ರವೇಶಿಸಿತ್ತು.



ಎಲ್ಲೆಡೆ ರೈತರು ಭೂಸ್ವಾಧೀನಕ್ಕೆ ವಿರೋಧಿಸುತ್ತಿದ್ದಾರೆ. ಆದರೆ ಬಳ್ಳಾರಿ ಜಿಲ್ಲೆಯ ಜನತೆ ಕೈಗಾರಿಕೆಗಳನ್ನು ಸ್ವಾಗತಿಸಿ ಜಮೀನು ನೀಡಲು ಮುಂದಾಗಿದ್ದಾರೆ! ಆದರೆ ಅವರಿಗೆ ಸರ್ಕಾರದ ನೀತಿ, ನಿಯಮಗಳ ಪ್ರಕಾರ ನ್ಯಾಯವಾದ ಬೆಲೆ ನೀಡುವ ಬದಲು ಕಂಪನಿ ಮಾಲೀಕರ ಕೋರಿಕೆಯಂತೆ ನಿಯಮಾವಳಿಗಳನ್ನು ಗಾಳಿಗೆ ತೂರಿ ರೈತರನ್ನು ವಂಚಿಸುತ್ತಿರುವ ಬಿಜೆಪಿ ಸರ್ಕಾರ ತೊಡಗಿರುವುದು ಖಂಡನೀಯವೆಂದು ವರದರಾಜನ್ ವಿಷಾದಿಸಿದರು. ಸಾಮಾನ್ಯವಾಗಿ ಮನೆಯಲ್ಲಿ ಹಸುಗಳು ಹಾಲು ಕರೆಯುವಾಗ ಹಸು ವಿರೋಧಿಸಿದರೆ ಮೊದ ಮೊದಲು ಮೈದಡವಿ ರಮಿಸಿ ನುಚ್ಚಿಟ್ಟು ಒಲಿಸಿಕೊಳ್ಳಲು ಯತ್ನಿಸುತ್ತಾರೆ! ಹಾಗೂ ಹಾಲು ನೀಡಲು ತೊಂದರೆ ಮಾಡಿದರೆ ಮತ್ತೆ ಮತ್ತೆ ಪ್ರೀತಿಯಿಂದ ಒಲಿಸಿಕೊಳ್ಳಲು ಯತ್ನಿಸುತ್ತಾರೆ! ಆಗಲೂ ಒಪ್ಪದಿದ್ದಲ್ಲಿ ಕಾಲುಕಟ್ಟಿ ನಾಲ್ಕು ತದುಕಿ ಹಾಲು ಹಿಂಡುತ್ತಾರೆ! ಹೀಗೆ ರೈತರು ಒದೆಯುವ ಮುಂಚೆ, ರಾಜ್ಯ ಸರ್ಕಾರ ಎಚ್ಚೆತ್ತುಕೊಳ್ಳುವುದು ಒಳಿತೆಂದು ವರದರಾಜನ್ ಕಿವಿ ಮಾತು ಹೇಳಿದರು. ಮತ್ತು ರೈತರಿಗೂ ಇನ್ನಷ್ಟು ಬಲವಾದ ಹೋರಾಟ ನಡೆಸಿ ನಿಮ್ಮ ಜೊತೆ ಎರಡೂವರೆ ಕೋಟಿ ಸದಸ್ಯರನ್ನು ಹೊಂದಿದ ಅಖಿಲ ಭಾರತ ರೈತರ ಸಂಘವಿದೆಯೆಂದು ಬೆಂಬಲಿಸಿದರು.

ಬೆಂಗಳೂರಿನ ಮೌರ್ಯ ಜಂಕ್ಷನ್‌ನಿಂದ ಬೈಕ್ ಜಾಥಾ ಹಾಗೂ 250ಕ್ಕೂ ಅಧಿಕ ರೈತರು ಕೆಐಎಡಿಬಿ ಕೇಂದ್ರ ಕಛೇರಿಯೆಡೆಗೆ ತೆರಳಿದರು. ಅಲ್ಲಿ ಸುಮಾರು ಎರಡೂವರೆ ತಾಸುಗಳ ಕಾಲ ಧರಣಿ ಸತ್ಯಾಗ್ರಹ ನಡೆಸಿದರು. ಕೆಐಎಡಿಬಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ಯಾಂಭಟ್‌ರವರಿಗೆ ಮನವಿ ನೀಡಿದರು.

ಕಾನೂನು ನಿಯಮಾವಳಿ ಮೀರಿ ಅಕ್ರಮವಾಗಿ, ಕಂಪನಿ ಮಾಲೀಕರಿಗೆ ಅನುಕೂಲವಾಗುವಂತೆ ರೈತರಿಗೆ ಅನ್ಯಾಯವಾಗುವಂತೆ ನಿಗಧಿಗೊಳಿಸಲಾದ ಮಿತ್ತಲ್, ಬ್ರಾಹ್ಮಿಣಿ, ಜಿಂದಾಲ್ ಕಂಪನಿಯ ಜಮೀನಿಗೆ ನೀಡಲಾದ ಮೋಸದ ಭೂ ಬೆಲೆಯನ್ನು ಕೂಡಲೇ ರದ್ದು ಮಾಡಬೇಕು. ಮೋಸದ ಭೂ ಬೆಲೆಯ ಚೆಕ್ ನೀಡುವುದನ್ನು ರದ್ದುಪಡಿಸಬೇಕು, ಮತ್ತು ನಿಯಮಾವಳಿಯಂತೆ ಹೊಸ ಭೂಬೆಲೆ ನಿರ್ಧರಿಸಲು ಕ್ರಮವಹಿಸಬೇಕು ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಕಾನೂನಿನ ಆಡಳಿತವನ್ನು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಜಾರಿಗೆತರಬೇಕು. ಅಕ್ರಮವಾಗಿ ಭೂಬೆಲೆ ನಿರ್ಧಾರಕ್ಕೆ ಮುಂದಾದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮವಹಿಸಬೇಕು. 15 ವರ್ಷಗಳಿಂದ ಕೈಗಾರಿಕೆ ನಿರ್ಮಾಣ ಮಾಡದೇ ಜಮೀನು ನೀಡಿದ ರೈತರಿಗೆ ಉದ್ಯೋಗ ನೀಡದ ಬಿಎಸ್‌ಎಎಲ್ ಕೈಗಾರಿಕೆಯ ಸ್ವಾಧೀನವಾದ ಜಮೀನನ್ನು ಮೂಲ ರೈತರಿಗೆ ವಾಪಾಸ್ಸು ನೀಡಬೇಕು ಎಂಬ ಮುಂತಾದ 17 ಬೇಡಿಕೆಗಳ ಮನವಿಯನ್ನು ಭೂಸಂತ್ರಸ್ಥರ ಹೋರಾಟ ಸಮಿತಿ ಸಲ್ಲಿಸಿತ್ತು. ಮನವಿ ಪಡೆದ ಶ್ಯಾಂಭಟ್ಟರು ಮಿತ್ತಲ್ ಮತ್ತಿತರೇ ಕಂಪನಿಗಳಿಗಾಗಿ ರೈತರ ಅಭಿಪ್ರಾಯದ ಕಡತವನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುವುದಾಗಿ ತಿಳಿಸಿದರಲ್ಲದೇ, ಭೂಬೆಲೆಯಲ್ಲಿ ಅಕ್ರಮ ಎಸಗಲಾಗಿದೆ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮವಹಿಸುವುದಾಗಿ ಭರವಸೆ ನೀಡಿದರಲ್ಲದೇ ಸಂಜೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಜೊತೆ ರೈತರ ನಿಯೋಗದ ಮಾತುಕತೆಯನ್ನು ಇಂದು ಸಂಜೆ ಮಾಡಲು ನಿರ್ಧರಿಸಲಾಗಿದ್ದು, ರೈತರ ನಿಯೋಗ ಬರಲು ಮನವಿ ಮಾಡಿದರು.

ಭೂಸಂತ್ರಸ್ಥರ ಹೋರಾಟನಿರತರನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿದರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಬೆಂಬಲಿಸಿ ಮಾತನಾಡಿದರು.

ಬೈಕ್ ಜಾಥಾ ಹಾಗೂ ಪ್ರತಿಭಟನೆ ನೇತೃತ್ವದಲ್ಲಿ ಯು.ಬಸವರಾಜ್, ಬಿ.ಪೋಲುಪ್ಪ, ಜಿ.ವೀರನಗೌಡ, ನಾಗದೇವಪ್ಪ, ಆಲ್ದಳ್ಳಿ ಬಸವರಾಜ, ಆನಂದ ಅಯ್ಯನಗೌಡ, ರುದ್ರಪ್ಪ ಬಿ.ಎಂ.ಬಸವರಾಜ, ಧರ್ಮಣ್ಣ, ಶೇಖರ್ ಮುಂತಾದವರು ನೇತೃತ್ವ ವಹಿಸಿದ್ದರು.

ದೇಶದಾದ್ಯಂತ ಭೂಸ್ವಾಧೀನದ ವಿರುದ್ಧ ಹೋರಾಡುವ ಬಿಜೆಪಿ ಕರ್ನಾಟಕದಲ್ಲಿ ಬಲವಂತದ ಭೂಸ್ವಾಧೀನದಲ್ಲಿ ತೊಡಗಿರುವುದು ಅದರ ದ್ವಂದ್ವ ನಿಲುಮೆಗೆ ಸಾಕ್ಷಿ.

– ಕೆ.ವರದರಾಜನ್
ಎಐಕೆಎಸ್ ಪ್ರಧಾನ ಕಾರ್ಯದರ್ಶಿ, ದೆಹಲಿ

ಮುಂಬೈ ಬಾಂಬ್ ಸ್ಫೋಟದಲ್ಲಿ ಮಡಿದವರಿಗೆ ಸಂತಾಪ

ಮುಂಬೈನ ಜನ ನಿಬಿಡ ಪ್ರದೇಶಗಳಾದ ಒಪೇರಾ ಹೌಸ್, ದಾದರ್, ಝುವೇರಿಯಲ್ಲಿ ನಡೆದ ಬಾಂಬ್ ಸ್ಫೋಟವನ್ನು ಎಸ್.ಎಫ್.ಐ – ಡಿ.ವೈ.ಎಫ್.ಐ – ಜೆ.ಎಂ.ಎಸ್ ಸಂಘಟನೆಗಳು ತೀವ್ರವಾಗಿ ಖಂಡಿಸುತ್ತವೆ.

ಭಯೋತ್ಪಾದಕ ಈ ಕೃತ್ಯವು ಜೀವ ವಿರೋಧಿಯಾಗಿದೆ. ಇದಕ್ಕೆ ಬಲಿಯಾಗಿರುವ ಸುಮಾರು 21 ಜನರಗೆ ಸಂತಾಪ ಸೂಚಿಸುತ್ತೇವೆ. ದೇಶದಲ್ಲಿ ಇಂತಹ ಕೃತ್ಯಗಳನ್ನು ಪದೇ ಪದೇ ನಡೆಸುವ ಮೂಲಕ ಅಶಾಂತಿ ಸೃಷ್ಟಿಗೆ, ಜನರ ನೆಮ್ಮದಿಗೆ ಭಂಗ ತರುವ ಕೆಲಸ ಮಾಡುತ್ತಿರುವ ಉಗ್ರವಾದಿಗಳ ಈ ಕೃತ್ಯ ದೇಶದ ಭದ್ರತಾ ವ್ಯವಸ್ಥೆಯನ್ನು ಪ್ರಶ್ನಿಸುವಂತಿದೆ. ಈ ದಾಳಿಯನ್ನು ಸಮರ್ಥವಾಗಿ ತಡೆಯಲು ಭಯೋತ್ಪಾದನಾ ಗ್ರಹ ದಳ, ಪೋಲೀಸ್ ಇಲಾಖೆಗಳನ್ನು ಬಲಪಡಿಸುವ ಅಗತ್ಯವಿದೆ. ಈ ಘಟನೆಯ ಬಗ್ಗೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಭೇಕು. ಮತ್ತು ಬಲಿಯಾದ ಕುಟುಂಬಗಳಿಗೆ ಸೂಕ್ತ ಪರಿಹಾರ ಒದಗಿಸಬೇಕು. ದೇಶಾದ್ಯಂತ ಶಾಂತಿ ನೆಮ್ಮದಿಗಾಗಿ ಜನತೆ ಶ್ರಮಿಸಬೇಕೆಂದು ಎಸ್.ಎಫ್.ಐ –ಡಿ.ವೈ.ಎಫ್.ಐ – ಜೆ.ಎಂ.ಎಸ್ ಸಂಘಟನೆಗಳು ಬಯಸುತ್ತವೆ.

ನಾಡಿನ ಸಾಹಿತಿ, ಚಿಂತಕರು, ಕಲಾವಿದರ, ನೇತೃತ್ವದಲ್ಲಿ ಎಸ್.ಎಫ್.ಐ – ಡಿ.ವೈ.ಎಫ್.ಐ –ಜೆ.ಎಂ.ಎಸ್ ಸಂಘಟನೆಗಳು ಹಮ್ಮಿಕೊಂಡಿದ್ದ "ಶಾಲೆಗಳಲ್ಲಿ ಭಗವದ್ಗೀತೆ ಕಂಠಪಾಠ ಅಭಿಯಾನ ವಿರೋಧಿಸಿ" ನಡೆಯಬೇಕಾಗಿದ್ದ ಪ್ರತಿಭಟನಾ ಧರಣಿಯನ್ನು ಮುಂಬೈನಲ್ಲಿ ನಡೆದ ಸರಣಿ ಬಾಂಬ್ ಸ್ಫೋಟದ ಹಿನ್ನೆಲೆಯಲ್ಲಿ ಮುಂದೂಡಿ ಎಂ.ಜಿ ರಸ್ತೆಯಲ್ಲಿರುವ ವಿಕ್ಟೋರಿಯಾ ರಾಣಿ ಪ್ರತಿಮೆ ಎದುರು ಸಭೆ ಸೇರಿದ್ದ ಕಾರ್ಯಕರ್ತರು ಮುಂಬೈ ಬಾಂಬ್ ಸ್ಫೋಟವನ್ನು ಖಂಡಿಸಿ, ಘಟನೆಯಲ್ಲಿ ಮಡಿದವರಿಗೆ ಸಂತಾಪ ಸೂಚಿಸಿ ಮೌನ ಪ್ರತಿಭಟನೆ ನಡೆಸಿದರು.




ಮುಂದುವರಿದಿದೆ ಬೀದಿ ಬದಿ ವ್ಯಾಪಾರಸ್ಥರ ಸಮರ

ವಿಧಾನಸಭೆ ಉಪಾಧ್ಯಕ್ಷರ ಮನೆ ಮುಂದೆ ಬೀದಿ ಬದಿ ವ್ಯಾಪಾರಸ್ಥರು

ಮಂಗಳೂರು ಮಹಾನಗರ ಪಾಲಿಕೆಯ 'ಟೈಗರ್' ಲಾರಿಯ ಕಣ್ಣು ತಪ್ಪಿಸಿಯೇ ತಮ್ಮ ವ್ಯಾಪಾರವನ್ನು ಮಾಡಬೇಕಾಗಿರುವ ಪರಿಸ್ಥಿತಿಗೆ ಬೀದಿ ಬದಿ ವ್ಯಾಪಾರಿಗಳು ಒಡ್ಡಲ್ಪಟ್ಟಿದ್ದಾರೆ. ಈಗಾಗಲೇ ಸಾಕಷ್ಟು ಪ್ರತಿಭಟನೆಗಳನ್ನು ಮಾಡಿದ್ದಾಗಿದೆ. ತಾವು ಈಗಾಗಲೇ ಸಾಕಷ್ಟು ಕಳೆದುಕೊಂಡಿದ್ದೇವೆ, ಇನ್ನು ಹೆಚ್ಚಿಗೆ ಕಳೆದುಕೊಳ್ಳಲಿಕ್ಕೇನಿದೆ- ಎಂಬ ಹಟ ಬೀದಿ ಬದಿ ವ್ಯಾಪಾರಿಗಳಲ್ಲಿ ಜಾಗೃತವಾಗಿದೆ. ಹೋರಾಟ ಕೈಬಿಡೆವು ಎಂಬ ನಿರ್ಧಾರ ಬಲವಾಗಿದೆ.

ಜೂನ್ 23 ರಂದು ಮಂಗಳೂರು ನಗರ ಕೇಂದ್ರವಾದ ಸ್ಟೇಟ್‌ಬ್ಯಾಂಕಿನಿಂದ ಹೋರಾಟ ಸಮಿತಿ ನೇತೃತ್ವದಲ್ಲಿ ಮೆರವಣಿಗೆಯಲ್ಲಿ ಹೊರಟ ಬೀದಿ ಬದಿ ವ್ಯಾಪಾರಸ್ಥರು ವಿಧಾನಸಭಾ ಉಪಾಧ್ಯಕ್ಷರಾದ ಎನ್.ಯೋಗೀಶ್ ಭಟ್ ಅವರ ಮನೆಯ ಕಡೆಗೆ 'ಚಲೋ' ನಡೆಸಿಯೇ ಬಿಟ್ಟರು. ಈ ಕಾರ್ಯಕ್ರಮದ ಬಗ್ಗೆ ಮೊದಲೇ ತಿಳಿದಿರದಿದ್ದ ಪೋಲೀಸ್ ಅಧಿಕಾರಿಗಳು ಆತುರಾತುರವಾಗಿ ಬೇರೆ ಬೇರೆ ಠಾಣೆಗಳಿಂದ ಸಿಬ್ಬಂದಿ ನಿಯೋಜನ, ದೊಡ್ಡ ಸಾಲಿನಲ್ಲೇ ಪ್ರತಿಭಟನಾಕಾರರನ್ನು ಹಿಂಬಾಲಿಸಿದರು.ಮಂಗಳೂರಿನ ಮುಖ್ಯ ರಸ್ತೆಯಿಂದಲಾಗಿ ಸಾಗಿ ಕೊಡಿಯಾಲಬೈಲಿನಲ್ಲಿರುವ ಯೋಗೀಶ್ ಭಟ್ಟರ ಮನೆ ಸಮೀಪಿಸು ತ್ತಿದ್ದಂತೆಯೇ, ದೂರದಿಂದಲೇ ಪೋಲೀಸರು ಪ್ರತಿಭಟನಾಕಾರರನ್ನು ತಡೆದು ನಿಲ್ಲಿಸಿದರು. ಅಲ್ಲಿ ಪ್ರತಿಭಟನಾಕಾರರಿಗೂ ಪೋಲೀಸರಿಗೂ ಮಾತಿನ ಚಕಮಕಿ ನಡೆಯಿತು.

ಕಡಲತಡಿ



ವಾ.ಉ.



ಶಾಸಕರ ಮನೆ ಮುಂದೆ ಧರಣಿ ನಡೆಸಬೇಡಿ ಎಂಬ ಪೋಲೀಸ್ ಅಧಿಕಾರಿಗಳ ಮನವಿಯ ಮೇರೆಗೆ, ಪ್ರತಿಭಟನೆಯನ್ನು ಸ್ವಲ್ಪ ದೂರದಲ್ಲಿಯೇ ನಡೆಸಲಾಯಿತು.

ಕೂಳೂರಿನಲ್ಲಿ ಪ್ರತಿಭಟನಾ ಸಭೆ:

ಮಂಗಳೂರು ನಗರದ ಉತ್ತರ ಭಾಗದ ವಾರ್ಡ್‌ಗಳಲ್ಲಿ ಬಿಜೆಪಿ ಪಕ್ಷದಿಂದಲೇ ಕಾರ್ಪರೇಟರ್‌ಗಳು ಆಯ್ಕೆಯಾಗಿದ್ದಾರೆ. ಬಿಜೆಪಿ ಕಾರ್ಪರೇಟರ್ ಗಳಿರುವ ವಾರ್ಡ್‌ಗಳಲ್ಲೇ ಹಂತಹಂತಗಳಲ್ಲಿ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಬೇಕೆಂದು ಬೀದಿ ಬದಿ ವ್ಯಾಪಾರಸ್ಥರ ಸಂಘವು ಹೋರಾಟ ಸಮಿತಿಯ ನೇತೃತ್ವದಲ್ಲಿ ತೀರ್ಮಾನಿಸಿದ್ದು, ಈ ಸಂಬಂಧ ನಗರ ಉತ್ತರ ಭಾಗದಲ್ಲಿರುವ ಕೂಳೂರಿನ ವೃತ್ತದಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಜೂನ್ 28 ರಂದು ಏರ್ಪಡಿಸಿತ್ತು.

ಮತ್ತೆ ನಗರಪಾಲಿಕೆ ಕಚೇರಿ ಮುಂದೆ ಮುಂದುವರಿದಿದೆ ಧರಣಿ

ಜೂನ್ 30 ರಂದು ಮಂಗಳೂರು ನಗರಪಾಲಿಕೆಯ ಮಾಸಿಕ ಸಾಮಾನ್ಯ ಸಭೆ (ಕೌನ್ಸಿಲ್ ಸಭೆ) ನಡೆಯಲಿರುವ ಹಿನ್ನೆಲೆಯಲ್ಲಿ ಜೂನ್ 29 ರಂದು ಮತ್ತೆ ಪಾಲಿಕೆ ಕಚೇರಿ ಎದುರು ಧರಣಿ ಸತ್ಯಾಗ್ರಹವನ್ನು ಬೀದಿ ಬದಿ ವ್ಯಾಪಾರಸ್ಥರ ಹೋರಾಟ ಸಮಿತಿ ಹಮ್ಮಿಕೊಂಡಿತ್ತು.

ಪಾಲಿಕೆ ಕೌನ್ಸಿಲ್ ಸಭೆಯ ಒಳಗೂ ಹೊರಗೂ............

ಜೂನ್ 30 ರಂದು ಹೋರಾಟ ಸಮಿತಿ ಬೆಂಬಲಿಗರು ನಗರಪಾಲಿಕೆ ಕಚೇರಿ ಹೊರಗಡೆ ಪ್ರತಿಭಟನಾ ಧರಣಿ ನಡೆಸುತ್ತಿದ್ದರೆ, ಕೌನ್ಸಿಲ್‌ನ ಒಳಗೂ ಬೀದಿ ಬದಿ ವ್ಯಾಪಾರಿಗಳ ಪರ ಧ್ವನಿಗಳೂ ತೀವ್ರವಾಗಿಯೇ ವ್ಯಕ್ತವಾದವು.

ಕೌನ್ಸಿಲ್ ಸಭೆಯಲ್ಲಿ ಸಿಪಿಎಂ ಕಾರ್ಪರೇಟರ್ ಜಯಂತಿ ಬಿ.ಶೆಟ್ಟಿ ಬೀದಿ ಬದಿ ವ್ಯಾಪಾರಸ್ಥರಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವ ವರೆಗೆ 'ಟೈಗರ್' ಕಾರ್ಯಾಚರಣೆಯನ್ನು ನಿಲ್ಲಿಸಬೇಕೆಂದು ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಉಲ್ಲೇಖಿಸಿ ತರ್ಕಬದ್ಧವಾಗಿ ಆಗ್ರಹಿಸುತ್ತಿರುವಾಗ, ಬಿಜೆಪಿ ಕಾರ್ಪರೇಟರುಗಳು ವಿಷಯಾಂತರ ಮಾಡಲು ಯತ್ನಿಸಿದರು. ತಮ್ಮ ಪ್ರಶ್ನೆಗೆ ಉತ್ತರಿಸದೆ ಮೇಯರ್ ತಪ್ಪಿಸಿಕೊಳ್ಳುತ್ತಿರುವುದೇಕೆ ಎಂದು ಜಯಂತಿ ಬಿ.ಶೆಟ್ಟಿ ಹಾಗೂ ಕಾಂಗ್ರೆಸ್ ಕಾರ್ಪರೇಟರ್‌ಗಳಾದ ಅಪ್ಪಿಲತಾ ಮತ್ತು ಮರಿಯಮ್ಮ ಥಾಮಸ್ ಮೇಯರ್ ಪೀಠದೆದುರು ಬಂದು ವಿರೋಧ ವ್ಯಕ್ತಪಡಿಸಿದರು. ಒತ್ತಡಕ್ಕೆ ಮಣಿದ ಮೇಯರ್ 15 ದಿನಗಳೊಳಗಾಗಿ ಬೀದಿ ಬದಿ ವ್ಯಾಪಾರಿಗಳ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು; ಆದರೆ 'ಟೈಗರ್' ಕಾರ್ಯಾಚರಣೆಯನ್ನು ನಿಲ್ಲಿಸಲಾಗುವುದಿಲ್ಲವೆಂದೂ ತಿಳಿಸಿದರು.

'ಟೈಗರ್' ಲಾರಿ ತಡೆ ಮುಖಂಡರ ಬಂಧನ:

ಮರುದಿನ ಜುಲೈ 1 ರಂದು 'ಟೈಗರ್' ಲಾರಿ ಸ್ಟೇಟ್‌ಬ್ಯಾಂಕ್ ವೃತ್ತದ ಕಡೆಗೆ ಬಂದುದೇ ತಡ, 40 ಮಂದಿ ಬೀದಿ ಬದಿ ವರ್ತಕರು ಮುಖಂಡರ ನೇತೃತ್ವದಲ್ಲಿ ಲಾರಿಗೆ ಅಡ್ಡವಾಗಿ ಮಲಗಿ ಪ್ರತಿಭಟಿಸಿದರು. 'ಟೈಗರ್' ಬೆಂಬಲಕ್ಕೆ ಬಂದ ಪೋಲೀಸರು ಮುಖಂಡರನ್ನೊಳಗೊಂಡು 10 ಮಂದಿಯನ್ನು ಮಾತ್ರ ಬಂಧಿಸಿದರು.

'ಟೈಗರ್' ಕಾರ್ಯಾಚರಣೆ ವಿರುದ್ಧ ದೂರು":

ಬೀದಿ ಬದಿ ವ್ಯಾಪಾರದ ಸಂಬಂಧ ರಾಷ್ಟ್ರೀಯ ನೀತಿಯನ್ನು ನಿರ್ಲಕ್ಷಿಸಲಾಗುತ್ತಿದೆ ಹಾಗೂ 'ಟೈಗರ್' ಕಾರ್ಯಾಚರಣೆ ಮೂಲಕ ಅಲ್ಪಸಂಖ್ಯಾತರೇ ಹೆಚ್ಚಿರುವ ಜನವಿಭಾಗದ ಮೇಲೆ ದೌರ್ಜನ್ಯ ಎಸಗಲಾಗುತ್ತಿದೆ ಎಂಬ ದೂರನ್ನು ರಾಜ್ಯದ ರಾಜ್ಯಪಾಲರಿಗೆ ಹೋರಾಟ ಸಮಿತಿಯು ಸಲ್ಲಿಸಿದೆ. ಜುಲೈ 4 ರಂದು ಬೆಂಗಳೂರಲ್ಲಿ ಹೋರಾಟ ಸಮಿತಿಯ ಪ್ರತಿನಿಧಿಗಳಾದ ಸಿಪಿಐ(ಎಂ)ನ ಕೆ.ಯಾದವ ಶೆಟ್ಟಿ, ಜೆಡಿಎಸ್‌ನ ಎಂ.ಜಿ.ಹೆಗಡೆ ಮತ್ತು ಮಾಜಿ ಶಾಸಕ ಹಾಗೂ ಕಾಂಗ್ರೆಸಿನ ವಿಜಯ ಕುಮಾರ್ ಶೆಟ್ಟಿ ಇವರನ್ನೊಳಗೊಂಡ ನಿಯೋಗವು ರಾಜ್ಯಪಾಲರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. ರಾಜ್ಯಪಾಲರು ಪರಿಶೀಲಿಸುವುದಾಗಿ ತಿಳಿಸಿರುತ್ತಾರೆ.

'ಟೈಗರ್' ಕಾರ್ಯಾಚರಣೆ ನಡೆಸುವ ಮೂಲಕ ಮಂಗಳೂರು ಮಹಾನಗರಪಾಲಿಕೆ ನಗರದ ಬೀದಿ ಬದಿ ವ್ಯಾಪಾರಿಗಳ ಬದುಕುವ ಹಕ್ಕು, ವ್ಯಾಪಾರ ಮಾಡುವ ಹಕ್ಕುಗಳನ್ನು ಹತ್ತಿಕ್ಕಲು ಹೊರಟಿದೆ ಎಂದು ಆರೋಪಿಸಿ ಸಿಐಟಿಯು ನಿಯೋಗವು ಮಂಗಳೂರು ಪೋಲೀಸ್ ಕಮೀಷನರಿಗೆ ದೂರು ನೀಡಿದೆ. ವ್ಯಾಪಾರಿಗಳು ಮಾರುವ ಹಾಗೂ ಸಂಗ್ರಹಿಸಿಟ್ಟಿರುವ ಆಹಾರ ವಸ್ತುಗಳನ್ನು ಕೂಡಾ ದರೋಡೆ ಮಾಡುತ್ತಿರುವುದನ್ನು ಖಂಡಿಸಿದೆ.

ನಿಯೋಗದಲ್ಲಿ ಹೋರಾಟ ಸಮಿತಿಯ ಸಂಚಾಲಕ ಸುನಿಲ್ ಕುಮಾರ್ ಬಜಾಲ್, ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಕಾಂಗ್ರೆಸ್‌ನ ಪಾಲಿಕೆ ಸದಸ್ಯೆ ಅಪ್ಪಿಲತಾ, ವ್ಯಾಪಾರಿಗಳ ಸಂಘದ ಅಧ್ಯಕ್ಷ ಬಿ.ಎಂ.ಹಸನ್ ಮುಂತಾದವರು ಇದ್ದರು.

ನಾಗರಿಕರಿಂದ ಮಾನವ ಸರಪಳಿ:

ಜುಲೈ 7 ರಂದು ಮಂಗಳೂರು ಸ್ಟೇಟ್‌ಬ್ಯಾಂಕ್ ವೃತ್ತದಿಂದ ಲೇಡಿಗೋಶನ್ ಆಸ್ಪತ್ರೆಯ ವರೆಗೆ ಮಾನವ ಸರಪಳಿಯನ್ನು ರಚಿಸಲಾಯಿತು 3000 ಮಂದಿ ನಾಗರಿಕರು ಬೀದಿ ಬದಿ ವ್ಯಾಪಾರಿಗಳೊಂದಿಗೆ ಪಾಲ್ಗೊಂಡು, ಬೀದಿ ಬದಿ ವ್ಯಾಪಾರವನ್ನು ಉಳಿಸುವುದಾಗಿ ಹಾಗೂ 'ಟೈಗರ್' ಕಾರ್ಯಾಚರಣೆಯನ್ನುನಿಲ್ಲಿಸುವುದಾಗಿ ಪ್ರತಿಜ್ಞೆ ಕೈಗೊಂಡರು.

ಬಳಿಕ ಸ್ಟೇಟ್‌ಬ್ಯಾಂಕ್ ವೃತ್ತದಲ್ಲಿ ಸೇರಿದ್ದ ಬೃಹತ್ ಸಭೆಯನ್ನುದ್ದೇಶಿಸಿ ಮಾಜಿ ಸಚಿವ ಬಿ.ರಮಾನಾಥ ರೈ, ಸಿಪಿಐ(ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ, ಜೆಡಿಎಸ್ ಜಿಲ್ಲಾ ಮುಖಂಡ ಎಂ.ಜಿ.ಹೆಗಡೆ ಮಾತನಾಡಿದರು. ಸಿಪಿಐ(ಎಂ) ಕಾರ್ಪರೇಟರ್ ಜಯಂತಿ ಬಿ.ಶೆಟ್ಟಿ ಅಲ್ಲದೆ ಕಾಂಗ್ರೆಸ್ ಹಾಗೂ ಜೆಡಿಎಸ್ 9 ಜನ ಕಾರ್ಪರೇಟರ್‌ಗಳು, ಪ್ರಾಧ್ಯಾಪಕಿ ರೀಟಾ ನೊರೋನ್ಹಾ, ವಕೀಲರ ಸಂಘದ ಯಶವಂತ ಮರೋಳಿ, ಡಿಎಸ್ಸೆಸ್‌ನ ಎಸ್.ಪಿ. ಆನಂದ, ಪ್ರಾಂತ ರೈತ ಸಂಘದ ಯಾದವ ಶೆಟ್ಟಿ, ಸಿಪಿಐ(ಎಂ)ನ ಕೆ.ಆರ್.ಶ್ರೀಯಾನ್, ಜೆ.ಬಾಲಕೃಷ್ಣ ಶೆಟ್ಟಿ, ಕಾಂಗ್ರೆಸ್ ಹಾಗೂ ಜೆಡಿಎಸ್‌ನ ಮಂಗಳೂರು ತಾಲೂಕು ಹಾಗೂ ನಗರ ಮುಖಂಡರು ಹಾಗೂ 25ಕ್ಕೂ ಹೆಚ್ಚು ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು. ಹೋರಾಟ ಸಮಿತಿ ಸಂಚಾಲಕ ಸುನಿಲ್ ಕುಮಾರ್ ಬಜಾಲ್, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ನೇತೃತ್ವ ನೀಡಿದ್ದರು.

ಬೀದಿ ಬದಿ ವ್ಯಾಪಾರಿಗಳ ಸಮಾವೇಶ– ನೂತನ ಸಮಿತಿ ಆಯ್ಕೆ:

ಸಿಐಟಿಯು ನೇತೃತ್ವದಲ್ಲಿ ಕಳೆದ 2 ತಿಂಗಳಿಂದ ನಡೆಯುತ್ತಿರುವ ಹೋರಾಟಗಳು ಮಂಗಳೂರಿನ ಬೀದಿ ಬದಿ ವ್ಯಾಪಾರಸ್ಥರಿಗೆ ಸಂಘಟನೆಯ ಬಗ್ಗೆ ಹೆಚ್ಚಿನ ನಂಬಿಕೆಯನ್ನು ಮೂಡಿಸಿದೆ. 500ಕ್ಕೂ ಮೀರಿ ವ್ಯಾಪಾರಸ್ಥರು ಸಂಘದ ಸದಸ್ಯರಾಗಿದ್ದಾರೆ. ಎರಡು ತಿಂಗಳ ಹಿಂದೆ ಸಂಘವನ್ನು ರಚಿಸಿದಾಗ ಸೇರಿದ ಸಮಾವೇಶದಲ್ಲಿ 50 ಮಂದಿಯಷ್ಟೇ ಇದ್ದರು. ಆದರೆ ಹೋರಾಟಗಳ ಮೂಲಕ ಸಂಘಕ್ಕೆ ಬಂದವರಲ್ಲಿ ಕೆಲವರು ನಿಜವಾದ ನಾಯಕತ್ವ ಸಾಮರ್ಥ್ಯ ಹೊಂದಿದ್ದರು. ಅಲ್ಲದೆ ಮಂಗಳೂರು ನಗರದ ಬೇರೆ ಬೇರೆ ವಿಸ್ತರಣೆಗಳ ಬೀದಿ ಬದಿ ವರ್ತಕರೂ ಸಂಘಕ್ಕೆ ಸೇರಿಕೊಳ್ಳಲು ಮುಂದಾಗಿ ದ್ದರು. ಈ ಹಿನ್ನೆಲೆಯಲ್ಲಿ ಜುಲೈ 9 ರಂದು ನಗರ ಮಟ್ಟದ ಸಮಾವೇಶವನ್ನು ಆಯೋಜಿಸಲಾಗಿತ್ತು.

ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷರಾದ ಬಿ.ಮಾಧವ ಅವರು ಸಮಾವೇಶವನ್ನು ಉದ್ಘಾಟಿಸಿ, ಮಾನವನಿಂದ ಮಾನವ ಶೋಷಣೆಯನ್ನು ವಿರೋಧಿಸುವ ಸಿದ್ಧಾಂತ ಹಾಗೂ ಸಮಾಜದ ಕನಸು ಹೊತ್ತಿರುವ ಸಿಐಟಿಯು ಸಂಘಟನೆಯು ವಿವಿಧ ಕಾರ್ಮಿಕ ವಿಭಾಗವನ್ನು ಸಂಘಟಿಸುತ್ತಿದ್ದು, ಬೀದಿ ಬದಿ ವ್ಯಾಪಾರಿಗಳಂಥ ಅತ್ಯಂತ ಶೋಷಿತ ಶ್ರಮಿಕ ವರ್ಗದ ಸಂಘಟನೆಯನ್ನು ಇಂದು ರಚಿಸಲು ಸಾಧ್ಯವಾಗಿರುತ್ತದೆ. ದೇಶದ ಕಾನೂನುಗಳು ಎಲ್ಲರಿಗೂ ಒಂದೇ ಸಮನೆ ಅನ್ವಯವಾಗಬೇಕು; ಈ ರಾಜ್ಯದಲ್ಲಿ ಸಚಿವರೊಬ್ಬರು 35 ಬಾರಿ ವಾರಂಟು ಹೊರಡಿಸಿದರೂ ಪೋಲೀಸರಿಗೆ ಸಿಗುವುದಿಲ್ಲ; ಬಡ ಬೀದಿ ವ್ಯಾಪಾರಿ ನಾಲ್ಕು ತರಕಾರಿ ಮಾರಿದ ಕೂಡಲೇ 'ಟೈಗರ್' ಕಾರ್ಯಾಚರಣೆ ನಡೆಸಲಾಗುತ್ತದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿನಿಧಿ ಅಧಿವೇಶನದಲ್ಲಿ ಒಬ್ಬ ಮಹಿಳೆಯೂ ಒಳಗೊಂಡರೆ 6 ಮಂದಿ ಪ್ರತಿನಿಧಿಗಳು ದಿಟ್ಟತನದಿಂದ ಮಾತನಾಡಿದರು. ಸಮಾವೇಶವು ಪ್ರತಿನಿಧಿಗಳಿಂದ 51 ಮಂದಿಯ ನೂತನ


ಪುಟ 15ಕ್ಕೆ

ತಮ್ಮ ಅಧಿಕಾರದ ಒಂದೇ ವರ್ಷದಲ್ಲಿ ಭಾರತೀಯ ರೈಲ್ವೇಯಲ್ಲಿ ಸುರಕ್ಷಿತತಾ ಸಿಬ್ಬಂದಿಯ ಕೊರತೆ 89 ಸಾವಿರದಿಂದ 1 ಲಕ್ಷಕ್ಕೇರಿದರೂ ನಿರ್ಲಕ್ಷ್ಯದಿಂದಿದ್ದ ಹಿಂದಿನ ರೈಲ್ವೇ ಮಂತ್ರಿಗಳಿಗೆ ಇಂತಹ ಗಂಭೀರ ಲೋಪಗಳನ್ನು ಸರಿಪಡಿಸುವ ಸಮಯವೂ ಇರಲಿಲ್ಲ, ಅಂತಹ ಆಶಯವೂ ಇರಲಿಲ್ಲ. ಅವರು ಭಾರತೀಯ ರೈಲ್ವೆಯ ಅವ್ಯಸ್ಥಿತ ವಿಸ್ತರಣಾ ಯೋಜನೆಗಳ ಅಬ್ಬರವನ್ನು ಪಶ್ಚಿಮ ಬಂಗಾಲದಲ್ಲಿ ಚುನಾವಣಾ ಸಮರಕ್ಕೆ ಬಳಸಿಕೊಳ್ಳುವುದರಲ್ಲೇ ಮಗ್ನರಾಗಿದ್ದರು. ಈಗ ಪಶ್ಚಿಮ ಬಂಗಾಲದ ಮುಖ್ಯಮಂತ್ರಿಯಾದ ಮೇಲೆ ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ದುರಂತಕ್ಕೆ ಕಾರಣರಾದವರ ಬಿಡುಗಡೆಯನ್ನು ಪ್ರಕಟಿಸಿದ್ದಾರೆ. ಭಾರತೀಯ ರೈಲು ಜಾಲ ನಮ್ಮ ದೇಶದ ಜನತೆಯ ಜೀವಸೆಲೆ. ಅದರ ಸುರಕ್ಷಿತತೆಯ ಬಗ್ಗೆ ಇಂತಹ ಸಿನಿಕ ವರ್ತನೆ ಆ ಜೀವಸೆಲೆಯನ್ನೇ ಇಂಗಿಸಿ ಬಿಡುತ್ತದೆ.

ಭಾರತೀಯ ರೈಲ್ವೆ ಎಂಬೊಂದು ಮೃತ್ಯುಪಾಶ

ಭಾರತೀಯ ರೈಲ್ವೆ ಭಾರತೀಯ ಜನತೆಯ ಮೇಲೆ ಒಂದು ಸಾವಿನ ಬಲೆಯನ್ನು ಹಾಸಿದಂತಿದೆ. ನಿಜ ಹೇಳಬೇಕೆಂದರೆ, ಅದು ಒಂದು ಸಾವು ತರುವ ಶಾಪದಂತಿದೆ. ಯುಪಿಎ-2 ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದ ಈ 21 ತಿಂಗಳಲ್ಲಿ ರೈಲು ಅಪಘಾತಗಳಲ್ಲಿ 561 ಮಂದಿ ಪ್ರಾಣ ಕಳಕೊಂಡಿದ್ದಾರೆ, 822 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಈ ವಾರ ಮತ್ತೆ ಒಂದು ಗಂಟೆಯ ಅಂತರದಲ್ಲಿ ಎರಡು ಅಪಘಾತಗಳು ನಡೆದಿವೆ- ಹೌರಾ-ಕಾಲ್ಕಾ ಮೇಲ್ ಹಳಿ ತಪ್ಪಿ, ಗುವಾಹಾಟಿ-ಪುರಿ ಎಕ್ಸ್‌ಪ್ರೆಸ್‌ನಲ್ಲಿ ಸ್ಫೋಟ ಸಂಭವಿಸಿ ಕನಿಷ್ಟ 50 ಮಂದಿ ಸತ್ತರು, 300ಕ್ಕೂ ಹೆಚ್ಚು ಮಂದಿ ಗಾಯಗೊಂಡರು. ದುರಂತವೆಂದರೆ, ಈ ಸಂಖ್ಯೆ ಇನ್ನೂ ಹೆಚ್ಚಲಿದೆ, ಮಾನವನ ನೋವು ಇನ್ನಷ್ಟು ಆಳಗೊಳ್ಳಲಿದೆ.

ಕಳೆದ ನಾಲ್ಕು ತಿಂಗಳಲ್ಲಿ ನಾಲ್ಕು ದೊಡ್ಡ ಅಪಘಾತಗಳು ಸಂಭವಿಸಿವೆ. ಈ ಎರಡು ಅಪಘಾತಗಳಲ್ಲದೆ, ಮೇ 22ರಂದು ಒಂದು ಗರೀಬ್ ರಥ್ ಎಕ್ಸ್‌ಪ್ರೆಸ್ ಬಿಹಾರದ ಮಧುಬನಿ ಜಿಲ್ಲೆಯಲ್ಲಿ



ಕಾವಲುಗಾರನಿಲ್ಲದ ಕ್ರಾಸಿಂಗ್‌ನಲ್ಲಿ ಜೀಪಿಗೆ ಡಿಕ್ಕಿ ಹೊಡೆದು 20 ಜನಗಳ ಸಾವು ಸಂಭವಿಸಿತು. ಈ ರೀತಿ ಕಾವಲುಗಾರರಿಲ್ಲದ ರೈಲ್ವೆ ಕ್ರಾಸಿಂಗ್‌ಗಳೇ ಇಲ್ಲದಂತೆ ಮಾಡಲಾಗುವುದು ಎಂದು ರೈಲ್ವೆ ಇಲಾಖೆ ದೇಶಕ್ಕೆ ಭರವಸೆ ನೀಡುತ್ತಲೇ ಬಂದಿದೆ. ಆದರೂ ಜುಲೈ 7ರಂದು ಮತ್ತೊಮ್ಮೆ ಉತ್ತರ ಪ್ರದೇಶದ ಕಾಂಶಿರಾಂ ನಗರದ ಇಂತಹ ಒಂದು ಕ್ರಾಸಿಂಗ್‌ನಲ್ಲಿ ಮದುವೆ ದಿಬ್ಬಣದ 38 ಮಂದಿ ಸಾವನಪ್ಪಿದರು.

ವ್ಯವಧಾನವೇ ಇಲ್ಲದ ಮಂತ್ರಿ

ವಾಸ್ತವತೆಂಯೆಂದರೆ, ಯುಪಿಎ-2 ಸರಕಾರ ರಚನೆಯಾದಂದಿನಿಂದ ರೈಲ್ವೆ ಮಂತ್ರಾಲಯ ಒಂದು ಪೂರ್ಣಕಾಲದ ರಾಜಕೀಯ ಮುಖಂಡತ್ವವಿಲ್ಲದೆ ನರಳುತ್ತಿತ್ತು. ಕೇಂದ್ರ ರೈಲ್ವೆ ಮಂತ್ರಿಗಳಿಗೆ ಪಶ್ಚಿಮ ಬಂಗಾಲದಲ್ಲಿ ತನ್ನ ರಾಜಕೀಯ ಮಹತ್ವಾಕಾಂಕ್ಷೆಗಳೇ ಪ್ರಧಾನವಾಗಿದ್ದವು. ಇನ್ನೂ ಹೊಲಸೆಂದರೆ, ರಾಜ್ಯದಲ್ಲಿ ಅವರ ಚುನಾವಣಾ ಪ್ರಚಾರಕ್ಕೆ ರೈಲ್ವೆ ಜಾಲದ ಮತ್ತು ರೈಲ್ವೆ ನಿಧಿಗಳ ದುರುಪಯೋಗವೂ ನಡೆಯಿತು.

ಯುಪಿಎ-2 ಸರಕಾರ ಅಧಿಕಾರ ವಹಿಸಿಕೊಂಡಾಗಲೇ ಭಾರತೀಯ ರೈಲ್ವೆಯಲ್ಲಿ ಸುಮಾರು 2ಲಕ್ಷ ಹುದ್ದೆಗಳು ಭರ್ತಿಯಾಗದೇ ಇಳಿದಿದ್ದವು. ಇವುಗಳಲ್ಲಿ ಸುರಕ್ಷಿತತೆಗೆ ಸಂಬಂಧಪಟ್ಟ ಹುದ್ದೆಗಳ ಸಂಖ್ಯೆ 89,024 ! ಇದು ಒಂದೇ ವರ್ಷದೊಳಗೆ 1.04 ಲಕ್ಷಕ್ಕೆ ಏರಿತು. ಇನ್ನೂ ಕೆಟ್ಟ ಸಂಗತಿಯೆಂದರೆ, ರೈಲ್ವೆ ಮಂಡಳಿಯಲ್ಲೂ ಬಹಳ ಮುಖ್ಯವಾದ ಸಾರಿಗೆ ಸದಸ್ಯರ ಹುದ್ದೆ ಖಾಲಿ ಬಿದ್ದು ಒಂದು ವರ್ಷ ಮಿಕ್ಕಿದೆ. ಮತ್ತಷ್ಟು ಶೋಚನೀಯ ಸಂಗತಿಯೆಂದರೆ ರೈಲ್ವೆ ಕೆಲಸ-ಕಾರ್ಯಗಳ ಮತ್ತು ಸುರಕ್ಷಿತತೆಯ ಅಂಶಗಳ ಉಸ್ತುವಾರಿ ನೋಡಿಕೊಳ್ಳಬೇಕಾದ ಜನರಲ್ ಮ್ಯಾನೇಜರುಗಳ ಹಲವು ಹುದ್ದೆಗಳೂ ಖಾಲಿಯಾಗೇ ಉಳಿದಿವೆ. ಕೇಂದ್ರ ರೈಲ್ವೆ ಮಂತ್ರಿಗಳಿಗೆ ಇಂತಹ ಗಂಭೀರ ಲೋಪಗಳನ್ನು ಸರಿಪಡಿಸುವ ಸಮಯವೂ ಇರಲಿಲ್ಲ, ಅಂತಹ ಆಶಯವೂ ಇರಲಿಲ್ಲ.

ರೈಲ್ವೆ ಇಲಾಖೆ ಒಂದು ಕಾರ್ಪೊರೇಟ್ ಸುರಕ್ಷಿತತೆಯ ಯೋಜನೆ(2003-2013)ಯಲ್ಲಿ ತನ್ನದೇ ಆದ ಗುರಿಗಳನ್ನು ಹಾಕಿಕೊಂಡಿತ್ತು. ವರ್ಷಾನುಗಟ್ಟಲೆ ಪ್ರಯಾಣಿಕರನ್ನು ನಿರ್ಲಕ್ಷಿಸಿದ್ದನ್ನು ಇದು ತೋರಿಸಿತ್ತು. ಆದರೂ ಈ ಯಾವ ಗುರಿಗಳನ್ನೂ ಅದು ತಲುಪಿಲ್ಲ. ಮಾಧ್ಯಮಗಳ ಪ್ರಕಾರ ಇದನ್ನು ಒಂದು ಸಿಎಜಿ ವರದಿಯಲ್ಲಿ ತೋರಿಸಲಾಗಿತ್ತು. ಸಿಗ್ನಲ್ ಉಪಕರಣಗಳ ಆಧುನೀಕರಣ, ಡಿಕ್ಕಿ-ನಿರೋಧಕ ಸಾಧನಗಳ ಬಳಕೆ ಮತ್ತು ಸುರಕ್ಷಿತತೆ ಸಂಬಂಧೀ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ಭಾರತೀಯ ರೈಲ್ವೆ ವಿಫಲವಾಗಿರುವುದನ್ನು ಅದು ಎತ್ತಿ ತೋರಿಸಿತ್ತು. ರೈಲ್ವೇಯ ಎಲ್ಲ 16 ವಲಯಗಳಲ್ಲೂ ಸುರಕ್ಷಿತತಾ ಸಿಬ್ಬಂದಿಯ ಕೊರತೆ ಇದೆ ಎಂಬುದನ್ನೂ ಅದು ಎತ್ತಿ ತೋರಿತ್ತು. ಹೀಗೆ ರೈಲ್ವೇ ಮಂತ್ರಿಗಳು ಅವೇ ಹಳೆಯ ಹಳಿಗಳ ಮೇಲೆ ಹೆಚ್ಚೆಚ್ಚು ರೈಲುಗಳನ್ನು ಓಡಿಸುವ ಅವ್ಯಸ್ಥಿತ ವಿಸ್ತರಣಾ ಯೋಜನೆಗಳ ಅಬ್ಬರದಲ್ಲೇ ಮುಳುಗಿದ್ದರು. ಈ ಪ್ರಚಾರದ ಅಬ್ಬರ ಪಶ್ಚಿಮ ಬಂಗಾಲದಲ್ಲಿ ಚುನಾವಣಾ ಸಮರಕ್ಕೆ ಭಾರತೀಯ ರೈಲ್ವೆಯನ್ನು ಬಳಸಿಕೊಳ್ಳುವುದಕ್ಕಷ್ಟೇ.

ಇವೆಲ್ಲದರ ಒಟ್ಟು ಪರಿಣಾಮವೆಂದರೆ ಭಾರತೀಯ ರೈಲ್ವೇಯಲ್ಲಿ ಸುರಕ್ಷಿತತೆ ಎಂಬುದರ ಬಲಿ. ಇಂತಹ ಘೋರ ನಿರ್ಲಕ್ಷ್ಯಕ್ಕೆ ಮತ್ತು ಕ್ಷುಲ್ಲಕ ಚುನಾವಣಾ ಅಜೆಂಡಾಗಳಿಗೆ ರೈಲ್ವೆ ಇಲಾಖೆಯ ದುರುಪಯೋಗಕ್ಕೆ ನೂರಾರು ಮುಗ್ಧ ಪ್ರಯಾಣಿಕರು ಬೆಲೆ ತೆರಬೇಕಾಗಿ ಬಂದಿದೆ.

ಸಿನಿಕ ದುರುಪಯೋಗ ನಿಲ್ಲಿಸಿ

ಇನ್ನೊಂದು ಅಂಶವೂ ಆತಂಕದ ವಿಷಯ. ಗುವಾಹಾಟಿ-ಪುರಿ

ಪುಟ 11ಕ್ಕೆ

ಇದು ನಿಮಗೆ ಗೊತ್ತೆ?

ಐದು ವರ್ಷಗಳಲ್ಲಿ 169% ಆಸ್ತಿ ಹೆಚ್ಚಳ

ಈ ಮೇ ತಿಂಗಳಲ್ಲಿ ನಾಲ್ಕು ರಾಜ್ಯಗಳು ಮತ್ತು ಒಮದು ಕೇಂದ್ರಾಡಳಿತ ಪ್ರದೇಶಕ್ಕೆ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಚುನಾಯಿತರಾದ 825 ಶಾಸಕರ ಆಸ್ತಿಗಳ ಮೊತ್ತ ಎಷ್ಟೆಂದು ನೀವು ಊಹಿಸಬಲ್ಲಿರಾ? 2128 ಕೋಟಿ ರೂ.ಗಳು. ಇದು ನ್ಯಾಶನಲ್ ಇಲೆಕ್ಷನ್ ವಾಚ್ (ಎನ್‌ಇಡಬ್ಲ್ಯ) ಈ ಶಾಸಕರ ಘೋಷಿಸಿಕೊಂಡಿರುವ ಆಸ್ತಿಗಳಿಂದ ಕಲೆ ಹಾಕಿದ ಮಾಹಿತಿ. ಅದು ಕಲೆ ಹಾಕಿರುವ ಇನ್ನಷ್ಟು ಮಾಹಿತಿಗಳನ್ನು ನೋಡಿ:

- ಇವರಲ್ಲಿ 231 ಮಂದಿ ಎರಡನೇ ಬಾರಿ ಚುನಾಯಿತರಾದವರು. ಇವರ ಆಸ್ತಿಗಳಲ್ಲಿ 2006 ರಿಂದ 2011ರ ನಡುವೆ ಸರಾಸರಿ 169% ಹೆಚ್ಚಳವಾಗಿದೆ. ಇದು ಅವರೆಲ್ಲ ಈ ಮೊದಲು ತಮ್ಮ ಜೀವಮಾನದಲ್ಲೇ ಗಳಿಸಿದ ಸಂಪತ್ತಿಗಿಂತ ಎಷ್ಟೋ ಹೆಚ್ಚಿರಬೇಕು ಎನ್ನುತ್ತಾರೆ ಪ್ರಖ್ಯಾತ ಪತ್ರಕರ್ತ ಪಿ. ಸಾಯಿನಾಥ್.
- ಈ 2128 ಕೋಟಿ ಅಂಕೆಯನ್ನು ತಲುಪಲು, ಈ ದೇಶದ 825 ಬಡವರಿಗೆ, ಉದಾ: ರೇಗಾದಡಿ ಕೆಲಸ ಮಾಡುವ ಕೂಲಿಕಾರರಿಗೆ 2000 ವರ್ಷಗಳೇ ಹಿಡಿಸಬಹುದು, ಅದು ಕೂಡ 'ಹೊಟ್ಟೆ ತುಂಬಿಸುವ' ಕ್ಷುಲ್ಲಕ' ಹವ್ಯಾಸವನ್ನು ಬಿಟ್ಟರೆ, ಅಂದರೆ ಉಪವಾಸವಿದ್ದರೆ- ಎಂದು ಲೆಕ್ಕ ಹಾಕಿದ್ದಾರೆ ಪಿ ಸಾಯಿನಾಥ್. ಹೆಚ್ಚಿನ ಶಾಸಕರು 60 ತಿಂಗಳಲ್ಲಿ ಗಳಿಸಿದ್ದನ್ನು ಪಡೆಯಲು 10 ಲಕ್ಷ ಕೂಲಿಕಾರ ಕುಟುಂಬಗಳಿಗೆ ಕನಿಷ್ಟ ಒಂದು ವರ್ಷದ ಉಪವಾಸವಾದರೂ ಬೇಕಾದೀತು!
- ಈ ದೇಶದ ಕೋಟ್ಯಂತರ ದುಡಿಮೆಗಾರರು ಈ ಗುರಿ ತಲುಪುವುದಂತಿರಲಿ, ಅವರ ಸಾಲದ ಹೊರೆ ಇಳಿಯುವುದೂ ಕಷ್ಟ. ಆದರೆ ಈ ದೇಶದ ಕಾರ್ಪೊರೇಟ್ ವಲಯ ಗಳಿಸಿದ 'ಆಸ್ತಿ'ಯ ಎದುರು ಈ 825 ಶಾಸಕರ ಆಸ್ತಿಮೊತ್ತವೂ ನಾಚಿ ನೀರಾಗಬೇಕು. ಈ ಕಾರ್ಪೊರೇಟ್ ವಲಯ ಕಳೆದ ಆರು ವರ್ಷಗಳಲ್ಲಿ ಸರಕಾರದ ಕೃಪಾಪೋಷಣೆಯಿಂದ ಪ್ರತಿವರ್ಷ ಪಡೆಸ ಸರಾಸರಿ ಮೊತ್ತ 3.5 ಲಕ್ಷ ಕೋಟಿರೂ. ಇಷ್ಟನ್ನು ಗಳಿಸಲಂತೂ ಈ ದೇಶದ ಒಂದು ಮಿಲಿಯ ರೇಗಾ ಕೂಲಿಕಾರರಿಗೆ 275 ವರ್ಷಗಳ ಉಪವಾಸ ಬೇಕಾದೀತು ಎಂದು ಸಾಯಿನಾಥ್ ಲೆಕ್ಕ ಹಾಕುತ್ತಾರೆ.

ಇಂತಹ ಬೃಹತ್ ಅಸಮಾನತೆ ನಮ್ಮ ದೇಶದಲ್ಲಿ ರಾರಾಜಿಸುತ್ತಿರುವ ಭ್ರಷ್ಟಾಚಾರದ ಒಂದು ಪ್ರಮುಖ ಮೂಲ ಎನ್ನುತ್ತಾರೆ ಆದ್ದರಿಂದ ಈ ಅಸಮಾನತೆಯನ್ನು ನಿರ್ಲಕ್ಷಿಸುವ ಯಾವ ಭ್ರಷ್ಟಾಚಾರ-ವಿರೋಧಿ ಆಂದೋಲನವೂ ಯಶಸ್ವಿಯಾಗದು.

ಹಗರಣಗಳು ರೋಗದ ಲಕ್ಷಣಗಳಷ್ಟೇ. ನಾಗರಿಕರನ್ನು ಬದಿಗೊತ್ತಿ ಕಾರ್ಪೊರೇಟ್‌ಗಳ ಸೇವೆಯಲ್ಲಿ ನಿರತವಾಗಿರುವ ಪ್ರಭುತ್ವವೇ ನಿಜವಾದ ರೋಗ ಎನ್ನುತ್ತಾರೆ ಸಾಯಿನಾಥ್.

ರಾಜ್ಯ ಬಿಜೆಪಿ ಸರ್ಕಾರ ಸಂವಿಧಾನ ವಿರೋಧಿ ಹಾದಿಯಲ್ಲಿ ಸಾಗುತ್ತಿದೆ. ಶಿಕ್ಷಣ ಸಚಿವರು ಭಗವದ್ಗೀತೆ ಪ್ರಶ್ನಾತೀತ, ಸರ್ವಮಾನ್ಯ, ಸರ್ವಶ್ರೇಷ್ಠ ಗ್ರಂಥ ಎನ್ನುತ್ತಿದ್ದಾರೆ. ಭಗವದ್ಗೀತೆಯಲ್ಲಿ ಏನಿದೆ? ಕೆಲವೊಂದು ಅಂಶಗಳ ಬಗೆಗೆ ಒಂದು ಚಿಂತನೆ

ಭಗವದ್ಗೀತೆ-ಶಿಕ್ಷಣ ಸರ್ಕಾರ-ನೈತಿಕ ಮೌಲ್ಯ

ಯಮುನಾ ಗಾಂವ್ಕರ್, ಕಾರವಾರ

ಕರ್ನಾಟಕದಲ್ಲಿ ಈ ವಾರ ಬಹು ಚರ್ಚಿತ ವಿಷಯ ಭಗವದ್ಗೀತೆ. ಭಾರತ ವಿದ್ಯಾರ್ಥಿ ಫೆಡರೇಶನ್(ಎಸ್ ಎಫ್ ಐ) ನವರು ಶಾಲೆಗಳಲ್ಲಿ ಭಗವದ್ಗೀತೆ ಪಠಣವನ್ನು ಪ್ರಶ್ನಿಸಿದ್ದು ಮಾತ್ರವಲ್ಲ ಅದನ್ನು ವಿರೋಧಿಸಿದ್ದರಿಂದ ಭಗವದ್ಗಿತಾ ಬೋಧನೆಗೆ ಸರ್ಕಾರದಿಂದ ಆದೇಶಿತರಾದ ಸೋಂದಾ ಸ್ವರ್ಣವಲ್ಲೀ ಸ್ವಾಮಿ ಅಲ್ಲಿಂದ ಕಾಲು ಕಿತ್ತ ಪ್ರಸಂಗವೂ ಜರುಗಿತು. ಅಲ್ಲಿಗೆ ಭಗವದ್ಗೀತೆಯ ಪ್ರಥಮೋಧ್ಯಾಯವು ಸಂಪನ್ನವಾಯಿತು.

ಇದೊಂದು ಪ್ರಸಂಗಾವಧಾನವೆಂಬತೆ ಅರ್ಜುನನ ಸ್ಥಾನ ಸ್ವಾಮಿಗೆ ಬಂತು. ನಂತರ ಕೃಷ್ಣನ(ಸರ್ಕಾರ) ಉಪದೇಶದ ವಾಸ್ತವಾಂಶ ಜಾರಿಯ ಭಾಗವಾಗಿ ಮಾರನೇ ದಿನವೇ ಭಗವದ್ಗೀತೆ ಪ್ರಶ್ನಿಸಿದವನ ಬಂಧನ, ರಾಜ್ಯದೆಲ್ಲೆಡೆ ಎಸ್‌ಎಫ್ಐ ವಿರುದ್ಧ ಹೋರಾಟ, ಅವಮಾನಿತ ಸ್ವಾಮಿಗೆ ಬೆಂಬಲ, ಘಟನೆ ಖಂಡನೆ, ಎಸ್ ಎಫ್ ಐ ಒಂದು ಸಮಾಜ ವಿರೋಧಿ ಸಂಘಟನೆ, ಇದನ್ನು ನಿಷೇಧಿಸಬೇಕೆಂದು ಕೆಲವರ ಹಲುಬುವಿಕೆ. 'ಇದೊಂದು ಕಮ್ಯುನಿಷ್ಟ ಹಿನ್ನೆಲೆಯ ಸಂಘಟನೆ, ಇವರಿಗೆ ಭಾರತೀಯ- ಸಂಸ್ಕೃತಿಯ, ಧರ್ಮದ ಅರಿವಿಲ್ಲ, ರಾಷ್ಟ್ರೀಯತೆ ಅರಿಯಲಿ, ಭಗವದ್ಗೀತೆ ಓದಲಿ'ಎಂಬ ಉಪದೇಶಾಮೃತ ವಿದ್ಯಾ ಮಂತ್ರಿಗಳಿಂದ.

'ಸರ್ಕಾರ ಭಗವದ್ಗೀತೆ ಬೋಧಿಸಲು ಆದೇಶಿಸಿಲ್ಲ; ಮಧ್ಯಪ್ರದೇಶದಂತೆ ಕಡ್ಡಾಯ ಬೋಧನೆಗೆ ಚಿಂತನೆ' ಎಂದ ಅವರು ಚಿಕ್ಕಬಳ್ಳಾಪುರ ಹಾಗೂ ಕೋಲಾರಕ್ಕೆ ಹೋಗಿ ಪೇಜಾವರ ಶ್ರೀ ಎಂಬ ಮಧ್ಯಸ್ಥಗಾರರನ್ನು ಮುಂದೆ ಮಾಡಿ ಭಗವದ್ಗಿತೆ ಅರ್ಪಣಾ ಸಭೆ ಮಾಡಿದ್ದೂ ಆಯಿತು. ಅಲ್ಲಿ ಬಹಳ ಮುಖ್ಯವಾಗಿ ಹೇಳಿದ್ದು, 'ಮಠ-ಸ್ವಾಮಿಗಳಿಗೆ ಸರ್ಕಾರ ರಕ್ಷಣೆ ನೀಡುವಲ್ಲಿ ಬದ್ಧವಾಗಿದೆ, ಭಾರತೀಯ ಸಂಸ್ಕೃತಿಯ ಪ್ರತೀಕವಾದ ಈ ಭಗವದ್ಗೀತೆಯನ್ನು ಪ್ರಶ್ನಿಸುವವರು ವಿದೇಶಕ್ಕೆ ತೊಲಗಲಿ' ಎಂದು ಆಜ್ಞಾಪಿಸಿದ್ದು ಆಯಿತು. ಮೂಲಸೌಕರ್ಯಗಳಿಂದ ನಲುಗುತ್ತಿರುವ ಶಿಕ್ಷಣಕ್ಕೆ ಕಾಯಕಲ್ಪ ಮಾಡದೇ ಶಾಲೆಗಳನ್ನು ಭಜನ ಮಂಡಳಿ ಮಾಡಹೊರಟಿರುವ ಈ ಸರ್ಕಾರ, ಪ್ರಗತಿಪರ ಸಂಘಟನೆಯನ್ನು ಜರಿಯುತ್ತಿದೆ.

ಎಲ್ಲರೂ ಒಪ್ಪಿದರೆ?

ಯಾಕೆ ಹೀಗೆಲ್ಲ ಆಯಿತು? ಭಗವದ್ಗಿತೆಯ ರಚನೆಯಾದಂದಿನಿಂದಲೂ ಮತ್ತು ಅದಕ್ಕೆ ಕಾಲಾನಂತರದಲ್ಲಿ, ಕೆಲವು ಅಂಶ ಸೇರ್ಪಡೆಯಾಗುತ್ತ ಬಂದ ಲಾಗಾಯ್ತಿನಿಂದಲೂ ಇದನ್ನು ಎಲ್ಲರೂ ಒಪ್ಪಿದ್ದರೆ? ಒಪ್ಪಿದ್ದರೆ ವೈದಿಕ ಧರ್ಮಕ್ಕೆ ಪ್ರತಿಯಾಗಿ ಬೌದ್ಧ ಧರ್ಮ, ಜೈನ ಧರ್ಮಗಳು ವ್ಯಾಪಕವಾಗಿ ಏಕೆ ಹರಡುತ್ತಿದ್ದವು? ವೈದಿಕ ಶಾಹಿಯ ಉಚ್ಛ್ರಾಯ ಕಾಲಘಟ್ಟದಲ್ಲಿ ಈ ಬೌದ್ಧ, ಜೈನ ಧರ್ಮಗಳ ಭಂಜನ ನಡೆಯುತ್ತಿತ್ತೇ? ಖಂಡಿತ ಇಲ್ಲ. ಬಲವಂತದಿಂದ



ಒಪ್ಪಿಸಲಾಗುತ್ತಿದೆ ಅಷ್ಟೆ. ವೈಶಿಷ್ಟ್ಯಪೂರ್ಣ ಭಾರತದ ಸಂದರ್ಭದಲ್ಲಿ ಎಲ್ಲರೂ ಒಪ್ಪುವಂಥ ಮೌಲ್ಯ ಇದರಲ್ಲಿ ಇಲ್ಲವೆಂದು ತಾನೇ ವಿರೋಧಗಳು ಬರುತ್ತಿರುವುದು?

ಮತ, ಧರ್ಮ, ಆಧ್ಯಾತ್ಮಿಕತೆ, ಯೋಗ, ನೈತಿಕತೆಗಳನ್ನು ಕಲಿಸುವ ನೆಪದಲ್ಲಿ ಉಪದೇಶಕ್ಕೆ ಬಳಸಿ ಬಳಸಿ ಸಾವಿರಾರು ವರ್ಷಗಳಿಂದ ಭಾರತೀಯ ಸಂಸ್ಕೃತಿಯೆಂದು ಹೇಳಿಕೊಳ್ಳಲ್ಪಡುವ ಅಸಮಾನತೆಯನ್ನು ಪೋಷಿಸಲು ಅಸ್ತ್ರವಾಗಿಯೇ ಈ ಭಗವದ್ಗೀತೆಯನ್ನು ಬಳಸಲಾಯಿತು. ಅಸಮಾನತೆ, ಅನ್ಯಾಯ, ಶೋಷಣೆಗಳ ಹರಿಕಾರರಾದ ಆಯಾ ಕಾಲಘಟ್ಟದ ಪ್ರಭುತ್ವದ, ಹಾಗೂ ಆಳರಸರ, ಸರ್ಕಾರಗಳ ಬಲವರ್ಧನೆಗೆ, ಜನತೆಯನ್ನು ಅಡಿಯಾಳಾಗಿಸುವ ತಂತ್ರಕ್ಕೆ ಪ್ರಧಾನವಾಗಿ ಬಳಸಿದ್ದೇ ಭಗವದ್ಗೀತೆ ಮತ್ತು ಮನುಸ್ಮೃತಿ. ಅಷ್ಟೇ ಅಲ್ಲ, ಇವುಗಳ ಜೊತೆಗೆ ಭಾರತದ ಮಹಾಪುರಾಣಗಳಾದ ರಾಮಾಯಣ-ಮಹಾಭಾರತವನ್ನು ನೈತಿಕ ಶಿಕ್ಷಣದ ಹೆಸರಿನಲ್ಲಿ, ನೆಪದಲ್ಲಿ ಬೋಧಿಸಲಾಯಿತು. ಆ ನೈತಿಕ ಶಿಕ್ಷಣದ ಭಾಗವಾಗಿ ಸಾವಿರಾರು ವರ್ಷಗಳಿಂದಲೂ ಭಾರತದಲ್ಲಿ ದಾಯಾದಿ ಕಲಹ, ಜನಾಂಗೀಯ ಅವಮಾನ, ಜಾತಿ ದೌರ್ಜನ್ಯ, ಧಾರ್ಮಿಕ ಅಸಹಿಷ್ಣುತೆ, ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ, ಶೂದ್ರ-ಅಂತ್ಯಜರೆಂಬವರ ಹೀನಾಯ ಸ್ಥಿತಿ, ಭ್ರಷ್ಟಾಚಾರ, ಕೊಲೆ-ಸುಲಿಗೆ ಅವ್ಯಾಹತವಾಗಿ ನಡೆಯುತ್ತಲೇ ಇದೆ.

ಈ ಮಹಾ ಪುರಾಣಗಳ ಕಥಾವಸ್ತುವಿಗೆ ಮನುಸ್ಮೃತಿ-ಭಗವದ್ಗೀತೆಗಳೆಂಬ ಕಾನೂನುಗಳಿಂದ ರಕ್ಷಣೆ ಒದಗಿಸಲಾಯಿತು. ವೈದಿಕಶಾಹಿಗೆ ಮೇಲಂತಸ್ತನ್ನು ತಂದು ಕೊಟ್ಟ ಈ ಶೃತಿ-ಸ್ಮೃತಿ-ಪುರಾಣಗಳ ಸಂಗ್ರಹಾಲಯವಾಗಿದ್ದ ಶಂಕರಾಚಾರ್ಯರ ತನಕವೂ ಪ್ರಶ್ನಿಸಿದವರನ್ನು ಕೀಳಾಗಿ ಕಾಣಲಾಯಿತು. ಪ್ರಶ್ನಿಸಿದವರನ್ನು ರಾಕ್ಷಸರೆಂದು, ಪಾಪಿಗಳೆಂದು, ವಿಷಯ ಲಂಪಟರೆಂದು, ಧರ್ಮದ್ರೋಹಿಗಳೆಂದು, ಸಮಾಜ ದ್ರೋಹಿಗಳೆಂದು, ಹಿಂದೂ ಧರ್ಮ ನಿಂದಕರೆಂದು, ನಾಸ್ತಿಕರೆಂದು, ಅಂತಿಮವಾಗಿ ಕಮ್ಯುನಿಷ್ಟರೆಂದು ಹೀಗಳೆಯಲಾಯಿತು.

ಯಾಕೆ ಪ್ರತೀ ಕಾಲಘಟ್ಟಗಳಲ್ಲಿಯೂ ಭಗವದ್ಗೀತೆ ಹೇರುವಾಗಲೆಲ್ಲ ವಿರೋಧ, ಪ್ರತಿರೋಧ, ಘರ್ಷಣೆ ಬಂದಿದೆ ಎಂದು ಇತಿಹಾಸವನ್ನು ಅವಲೋಕನ ಮಾಡಿದರೆ ಅರಿವಾಗುತ್ತಿತ್ತು. ಬಹುಶಃ ಇಂದಿನ ಆಧುನಿಕ ಜ್ಞಾನ ವಿಕಾಸದ ಸಂದರ್ಭದ ಒಂದು ಸರ್ಕಾರ ಭಗವದ್ಗೀತಾ ಪಠಣವನ್ನು ಪಾಠಣವನ್ನು ಕಡ್ಡಾಯ ಮಾಡುತ್ತಿರಲಿಲ್ಲ.

ಆದರೆ, ಹಿಂದೂಗಳೆಲ್ಲ ಒಂದು, ಸರ್ವ ಧರ್ಮ ಸಮಭಾವವೆಂದು, ಸರ್ವರಿಗೂ ಸಮಬಾಳು, ಸಮಪಾಲು ಎಂದೆಲ್ಲ ಜಾಹಿರಾತು ಫಲಕಗಳಲ್ಲಿ ಕೃತ್ರಿಮ ನಗುವಿನ ಪೋಸ್ ಕೊಡುವ ಈ ಸರ್ಕಾರದ ಮುಖ್ಯಸ್ಥರು ಯಾರು? ಯಾವ ಹಿನ್ನೆಲೆಯವರು? ಇವರ ಹಿತಾಸಕ್ತಿ ಯಾವುದು? ಯಾರ ರಕ್ಷಕರು? ಅಂತಿಮವಾಗಿ ಯಾವ ಸ್ವರೂಪದ ಸಮಾಜ ಪ್ರತಿಪಾದಕರು? ಎಂದು ಕಂಡುಕೊಳ್ಳುವುದು ದುಸ್ತರವೇನಲ್ಲ?

ಖಂಡಿತವಾಗಿಯೂ ಈ ಸರ್ಕಾರದ ಮುಖಪುಸ್ತಕವಾದ ಕಮಲ ಪಾಳಯದವರು, ಆರೆಸ್ಸೆಸ್ಸಿಗರು ಭಾರತದ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲದವರು. ಬಹು ಜನಾಂಗೀಯ, ಬಹು ಧರ್ಮೀಯ, ಬಹು ಜಾತೀಯ, ಬಹು ಭಾಷೀಯ, ಬಹು ವಿಧ ವೇಷ-ಭೂಷಣಗಳ ನೆಲೆವೀಡನ್ನು ವಿಭಜಿಸುವ ಪ್ರವೃತ್ತಿಯತ್ತ ಹೊರಟಿದ್ದಾರೆ.

ವೈದಿಕ ಶಾಹಿಯನ್ನೇ ಹಿಂದೂ ಧರ್ಮವಾಗಿ ಕಾಲಾನಂತರದಲ್ಲಿ ಘೋಷಿಸಿಕೊಂಡ ಇವರು, ಈ ವೈದಿಕ ಧರ್ಮಗ್ರಂಥವನ್ನು ಕಡ್ಡಾಯ ಮಾಡುವ ಮೂಲಕ ಉಳಿದ ಧರ್ಮದವರು ಉದ್ರೇಕಗೊಳ್ಳುವ ಪರಿಸ್ಥಿತಿಯನ್ನು ತಾವೇ ನಿರ್ಮಿಸುತ್ತಿದ್ದಾರೆ. ಅಂತಿಮವಾಗಿ ಭಾರತದ ಪ್ರಜಾಸತ್ತೆಯ ಬುನಾದಿಯನ್ನು ಅಲುಗಾಡಿಸಿ ಸಂವಿಧಾನಕ್ಕೆ ಅಪಚಾರ ಎಸಗುತ್ತಿದ್ದಾರೆ.

ಹಾಗಾದರೆ ಭಗವದ್ಗೀತೆಯಿಂದ ಪ್ರಯೋಜನವೇನು?

ಈ ವಾರ ಕಮಲ ಪಾಳೆಯಕ್ಕೆ ಖುಷಿ ಯಾಕೆಂದರೆ, ಅವರ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಅನೈತಿಕ ರಾಜಕಾರಣದ ಕುರಿತು ಹೆಚ್ಚು ಮಾತಿಲ್ಲ ಮತ್ತು ಆತಂಕ ಯಾಕೆಂದರೆ, ಕಮಲ ಪಾಳೆಯಕ್ಕೆ ಬೆಂಗಾವಲಾಗಿ ನಿಂತ ಸೋಂದಾ ಸ್ವರ್ಣವಲ್ಲೀ ಸ್ವಾಮಿಯ ಭಗವದ್ಗೀತಾ ಬೋಧನೆಗೆ ಭಂಗ ಬಂದುದು. ತತ್ ಕ್ಷಣವೇ ರಾಜ್ಯ ಎಲ್ಲಾ ಮತೀಯವಾದಿ ಸಂಘಟನೆಗಳೂ, ಕೆಲವು ಸ್ವಸ್ಥಾನೀಯ ಯುವ



ಸಂಘಟನೆಗಳು, ಜಾತಿ ಸಂಘಗಳೂ ಗರಿಗೆದರಿ ಬೀದಿ ಕಾಳಗಕ್ಕೆ ಇಳಿದುವು. ಹೌದು, ಭಗವದ್ಗೀತೆ ಇವೆಲ್ಲವನ್ನೂ ಹೇಳಿದೆ.

ಭಗವದ್ಗೀತೆ ಕಂಠಪಾಠ ಮಾಡಿ, ಅದರ ಸಾರ ಸರ್ವಸ್ವವನ್ನೂ ಅರಗಿಸಿಕೊಂಡವರು ಅಧಿಕಾರದ. ಚುಕ್ಕಾಣಿ ಹಿಡಿದಿದ್ದಾರೆ. ಭಗವದ್ಗೀತೆಯ ರಚನೆಯ ಪೂರ್ವದಿಂದ ಭರತ ಖಂಡ-ಭರತವರ್ಷ ಭಾರತದಲ್ಲಿ ಹಲವು ಜನಾಂಗಗಳು ವಾಸಿಸುತ್ತಿದ್ದವು. ಆದರೆ ವೈದಿಕ

ಪುಟ 12ಕ್ಕೆ

ಭ್ರಷ್ಟಾಚಾರ ಹತ್ತಿಕ್ಕಲು ಪರಿಣಾಮಕಾರಿ 'ಲೋಕಪಾಲ' ಜೊತೆಗೆ ಬಹುಮುಖಿ ಕ್ರಮಗಳು ಅಗತ್ಯ ಎಂದು ಸಿಪಿಐ(ಎಂ) ಪ್ರತಿಪಾದಿಸುತ್ತಾ ಬರುತ್ತಿದೆ. ನಿರ್ದಿಷ್ಟವಾಗಿ ಏನು ಆ ಕ್ರಮಗಳು ಓದಿ....

ಭ್ರಷ್ಟಾಚಾರ ಹತ್ತಿಕ್ಕಲು ಅಗತ್ಯವಾದ ಸಮಗ್ರ ಕ್ರಮಗಳು

'ಲೋಕಪಾಲ' ಸ್ವರೂಪ ಹಾಗೂ ಇತರ ಆಯಾಮಗಳ ಬಗೆಗೆ ಸಿಪಿಐ(ಎಂ) ನಿಲುವು

ಕಳೆದ ಕೆಲವು ವರ್ಷಗಳಿಂದ ಭ್ರಷ್ಟಾಚಾರ ಹಗರಣಗಳು ನಿರಂತರವಾಗಿ ಬೆಳಕಿಗೆ ಬರುತ್ತಿರುವುದರಿಂದ ಈ ವಿಷಯ ಅತ್ಯಂತ ಪ್ರಮುಖವಾದ, ಸಾರ್ವಜನಿಕರನ್ನು ಕಾಡುತ್ತಿರುವ ಕಳವಳಕಾರಿ ವಿಷಯವಾಗಿದೆ. ಭಾರತದಂತಹ ದೇಶಗಳಲ್ಲಿ ಕೋಟ್ಯಂತರ ಜನ ಇನ್ನೂ ತೀವ್ರತರವಾದ ಬಡತನದಿಂದ ನರಳುತ್ತಿದ್ದಾರೆ, ಹಸಿವು, ಸಾಮಾಜಿಕ-ಆರ್ಥಿಕ ಅವಕಾಶಗಳ ವಂಚನೆಯಿಂದ ನರಳುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಭ್ರಷ್ಟಾಚಾರದ ಮೂಲಕ ಸಾರ್ವಜನಿಕ ಹಣವನ್ನು ಲೂಟಿ ಮಾಡುತ್ತಿರುವುದು ಅತ್ಯಂತ ಘೋರವಾದ ಅಪರಾಧವಾಗಿದೆ. ಈ ಭ್ರಷ್ಟಾಚಾರ ಆರ್ಥಿಕ ಅಭಿವೃದ್ಧಿಯನ್ನು ಕುಂಠಿತಗೊಳಿಸುವುದರ ಜೊತೆಗೆ ಅಕ್ರಮವಾಗಿ ಸಂಪಾದಿಸಿದ ಈ ಸಂಪತ್ತು ಅಸಮಾನತೆಯನ್ನು ಹೆಚ್ಚಿಸುತ್ತಿದೆ. ಸಮಾಜದಲ್ಲಿನ ನೈತಿಕ ಪ್ರಜ್ಞೆಯನ್ನೇ ಧ್ವಂಸಗೊಳಿಸುತ್ತಿದೆ.

ಇತ್ತೀಚೆಗೆ ಬೆಳಕಿಗೆ ಬಂದ 2ಜಿ ಸ್ಪೆಕ್ಟ್ರಂ ಹಗರಣ, ಸಿಡಬ್ಲುಜಿ ಹಗರಣ ಮತ್ತಿತರ ಹಗರಣಗಳು ಉದ್ಯಮಿಗಳು, ಅಧಿಕಾಶಾಹಿ ಮತ್ತು ರಾಜಕಾರಣಿಗಳ ಒಂದು ವರ್ಗ ಹೇಗೆ ಕೋಟ್ಯಂತರ ರೂ. ಸಾರ್ವಜನಿಕ ಸಂಪನ್ಮೂಲಗಳನ್ನು ಲೂಟಿ ಮಾಡಿದ್ದಾರೆ ಎಂಬುದನ್ನು ತೋರಿಸಿದೆ. ಇದಕ್ಕಿಂತಲೂ ಕೆಟ್ಟ ವಿಚಾರ ಎಂದರೆ ಕಳಂಕಿತ ಸಚಿವರು ಹಲವಾರು ತಿಂಗಳು ಸಚಿವರಾಗಿಯೇ ಮುಂದುವರೆದದ್ದು ಮತ್ತು ನ್ಯಾಯಾಂಗವನ್ನೇ ದಿಕ್ಕುತಪ್ಪಿಸಲು ತನಿಖೆ ಮೇಲೆ ಪ್ರಭಾವ ಬೀರಿದರು ಎಂಬುದು. ಹಲವಾರು ದಶಕಗಳಿಂದಲೂ ಭ್ರಷ್ಟಾಚಾರ ಎಂಬುದು ರಾಜಕೀಯ ವ್ಯವಸ್ಥೆಯ ಒಂದು ಲಕ್ಷಣವೇ ಆಗಿದೆ. ಆದರೆ ಹೊಸ ಆರ್ಥಿಕ ಮತ್ತು ಜಾಗತೀಕರಣ ನೀತಿಗಳು ಜಾರಿಗೆ ಬಂದ ನಂತರದ ಅವಧಿಯಲ್ಲಿ ಈ ಭ್ರಷ್ಟಾಚಾರ ಉನ್ನತ ಮಟ್ಟದಲ್ಲಿ ನೀತಿನಿರೂಪಣೆ ಮಾಡುವ ಪ್ರಕ್ರಿಯೆಯನ್ನೇ ವಿರೂಪಗೊಳಿಸಿದೆ. ಹೊಸ ಆರ್ಥಿಕ ಉದಾರೀಕರಣ ಅವಧಿಯಲ್ಲಿ ಉದ್ಯಮಿಗಳು, ರಾಜಕಾರಣಿಗಳು ಮತ್ತು ಅಧಿಕಾರಶಾಹಿ ನಡುವಿನ ಸಂಬಂಧಗಳು ಹೆಚ್ಚು ನಿಕಟವಾಗುತ್ತಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲುಗೊಳಿಸುತ್ತಿದೆ. ನಮ್ಮ ಪ್ರಸ್ತುತ ಆರ್ಥಿಕ ಆಡಳಿತ ವಿಧಾನವೂ ಅಧಿಕಾರಸ್ಥರು ಮತ್ತು ಬಂಡವಾಳಗಾರರ ನಡುವಿನ ಪರಮ ಆಪ್ತತೆ ಹಾಗೂ ಚಮಚಾಗಿರಿಗೆ ಮತ್ತು ಅಪರಾಧಿತ್ವಕ್ಕೆ ಅವಕಾಶ ನೀಡುವಂತಿದೆ.

ಭ್ರಷ್ಟಾಚಾರದ ವಿರುದ್ಧದ ಹೋರಾಟ, ಇಂದಿನ ದಿನಗಳಲ್ಲಿ ಇನ್ನಷ್ಟು ಪರಿಣಾಮಕಾರಿ ಮಾಡಬೇಕಾದರೆ, ರಾಜಕೀಯ, ಕಾನೂನು, ಆಡಳಿತಾತ್ಮಕ ಮತ್ತು ನ್ಯಾಯಾಂಗ ವ್ಯವಸ್ಥೆಯಲ್ಲಿ ಸಮಗ್ರವಾದ ಸುಧಾರಣೆ ತರಬೇಕೆ ವಿನಹ, ಯಾವುದೋ ಒಂದು ಸಂಸ್ಥೆಯನ್ನೋ ಅಥವಾ ಕೆಲವು ಸುಧಾರಿತ ಕ್ರಮಗಳನ್ನು ಕೈಗೊಳ್ಳುವುದರಿಂದ ಸಾಧ್ಯವಿಲ್ಲ. ಸಮಗ್ರ ಸುಧಾರಣೆ ತರುವ ನಿಟ್ಟಿನಲ್ಲಿ ಪರಿಣಾಮಕಾರಿ ಲೋಕ್‌ಪಾಲ್ ಸಂಸ್ಥೆಯನ್ನು ಸ್ಥಾಪಿಸುವುದೂ ಅಂತಹ ಒಂದು ಕ್ರಮವಾಗಿದೆ. ಇದರೊಂದಿಗೆ ಇನ್ನಷ್ಟು ಸುಧಾರಣೆಗಳನ್ನು ಕೈಗೊಳ್ಳುವ ಮೂಲಕ ಇದನ್ನು ಪೂರ್ಣಗೊಳಿಸಬೇಕಾಗಿದೆ. ಶಾಸನದ ಮೂಲಕ ಸಾರ್ವಜನಿಕ ಕುಂದು ಕೊರತೆಗಳ ನಿವಾರಣೆ ಸಂಸ್ಥೆಯನ್ನು ಸ್ಥಾಪಿಸುವ ಅಗತ್ಯವಿದೆ. ನ್ಯಾಯಾಂಗ ವ್ಯವಸ್ಥೆಯ ಮೇಲ್ವಿಚಾರಣೆಗಾಗಿ ರಾಷ್ಟ್ರೀಯ ನ್ಯಾಯಾಂಗ ಆಯೋಗ ರಚಿಸುವ ಅಗತ್ಯವಿದೆ. ಭ್ರಷ್ಟಾಚಾರಕ್ಕೆ ಮತ್ತೊಂದು ಮೂಲವಾದ ಚುನಾವಣೆಯಲ್ಲಿ ಹಣಬಲ ಬಳಕೆಯಾಗದಂತೆ ತಡೆಯುವ ನಿಟ್ಟಿನಲ್ಲಿ ಚುನಾವಣೆ ವ್ಯವಸ್ಥೆಗೆ ಸುಧಾರಣೆಗಳನ್ನು ತರಬೇಕು. ತೆರಿಗೆ ವ್ಯವಸ್ಥೆಯಲ್ಲಿನ ಲೋಪಗಳನ್ನು ತಡೆಯಲು ಮತ್ತು ಕಪ್ಪುಹಣವನ್ನು (ಇದರಲ್ಲಿ ಹೆಚ್ಚಿನ ಹಣವನ್ನು ವಿದೇಶಗಳಲ್ಲಿನ ಬ್ಯಾಂಕ್‌ಗಳು ಮತ್ತು ತೆರಿಗೆ ಸ್ವರ್ಗಗಳಲ್ಲಿ ಬಚ್ಚಿಡಲಾಗಿದೆ) ಹೊರಕ್ಕೆಳೆಯಲು ತೆರಿಗೆ ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಜಾರಿ ಮಾಡಬೇಕು. ದೊಡ್ಡ ದೊಡ್ಡ ಉದ್ಯಮಿಗಳು, ರಾಜಕಾರಣಿಗಳು ಮತ್ತು ಅಧಿಕಾರಶಾಹಿ ನಡುವಿನ ಸಂಬಂಧಗಳನ್ನು ಮುರಿಯಲು ದೃಢ ಕ್ರಮಗಳನ್ನು ಜರುಗಿಸಬೇಕು. ಇಂತಹ ಸಮಗ್ರವಾದ ಸುಧಾರಣೆಯಿಂದ ಮಾತ್ರ ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಬಲ್ಲದು.



'ಲೋಕಪಾಲ' ಭಿನ್ನ ಭಿನ್ನ ದೃಷ್ಟಿ

ಲೋಕ್‌ಪಾಲ್ ಮಸೂದೆ

ಭ್ರಷ್ಟಾಚಾರದ ಮೇಲೆ ಕಣ್ಣಿಡುವಂತಹ ಒಂದು ಸಂಸ್ಥೆ (ಒಮ್‌ಬುಡ್ಸ್‌ಮನ್ ಇನ್ಸ್‌ಟಿಟ್ಯೂಷನ್) – ಈಗಾಗಲೇ ಜಗತ್ತಿನ ಹಲವಾರು ದೇಶಗಳಲ್ಲಿ ಅಸ್ತಿತ್ವದಲ್ಲಿ ಇರುವಂತೆ – ಭ್ರಷ್ಟಾಚಾರ ಹಾಗೂ ಅಧಿಕಾರ ದುರುಪಯೋಗಕ್ಕೆ ಸಂಬಂಧಿಸಿದಂತೆ ಖಾಸಗಿ ಗಳಿಕೆಗಾಗಿ ಸಾರ್ವಜನಿಕ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವುದರ ನಡುವಿನ ಸಂಬಂಧ ಅಥವಾ ಸಂಪತ್ತು ಗಳಿಸುವುದು ಭ್ರಷ್ಟಾಚಾರ ನಿಷೇಧದ ಅತ್ಯುನ್ನತ ಅಗತ್ಯವಾಗಿದೆ.

ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಹಾದಿ ತೋರಿದೆ. ಕಳೆದ ನಾಲ್ಕು ದಶಕಗಳಿಂದ ಲೋಕ್‌ಪಾಲ್ ಮಸೂದೆಯನ್ನು ಜಾರಿಗೊಳಿಸಿಲ್ಲ ಎಂದರೆ ರಾಜಕಾರಣಿಗಳಲ್ಲಿ ರಾಜಕೀಯ ಇಚ್ಚಾಶಕ್ತಿ ಕೊರತೆಯಿದೆ ಎಂಬುದನ್ನು ಎತ್ತಿತೋರಿಸಿದೆ. ಈ ಹಿಂದೆ ಕೆಲವು ಸರ್ಕಾರಗಳು ಇದನ್ನು ಕೈಗೆತ್ತಿಕೊಂಡವಾದರೂ ಹಲವು ನಾಟಕಗಳನ್ನು ಮಾಡಿ ನಂತರ ಅದನ್ನು ಕೈಬಿಟ್ಟವು. ಈಗಿನ ಸರ್ಕಾರ ಸಹ, ಒಂದರ ನಂತರ ಒಂದರಂತೆ ಭ್ರಷ್ಟಾಚಾರ ಹಗರಣಗಳು ಬಯಲಿಗೆ ಬಂದಿದ್ದರಿಂದ ಸಾರ್ವಜನಿಕರಿಂದ ಭಾರಿ ಆಕ್ರೋಶಗಳು ಎದುರಾಗಿರುವುದರಿಂದ, ಈ ಕುರಿತ ಚರ್ಚೆಯನ್ನು ಎತ್ತಿಕೊಂಡಿದೆ. ಹಾಗಾಗಿ ಉನ್ನತ ಸ್ಥಳಗಳಲ್ಲಿ ಭ್ರಷ್ಟಾಚಾರವನ್ನು ಹತ್ತಿಕ್ಕುವಂತಹ ಲೋಕ್‌ಪಾಲ್ ಮಸೂದೆಯನ್ನು ಬರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಮಂಡಿಸಲೇಬೇಕಾದ ಅನಿವಾರ್ಯತೆಯಿದೆ.

ಲೋಕ್‌ಪಾಲ್ ಸಂಸ್ಥೆಯ ಪಾತ್ರ ಮತ್ತು ಅದರ ವ್ಯಾಪ್ತಿ ಕುರಿತು ಚರ್ಚೆಗಳು ಮುಂದುವರಿದಿರುವ ಪ್ರಸ್ತುತ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಲೋಕ್‌ಪಾಲ್ ಸ್ಥಾಪನೆ ಕುರಿತು ಇರುವ ಅತ್ಯಂತ ಪ್ರಮುಖ ವಿಷಯಗಳ ಕುರಿತು ತನ್ನ ನಿಲುವನ್ನು ವ್ಯಕ್ತಪಡಿಸುತ್ತಿದೆ.

1. ಭ್ರಷ್ಟಾಚಾರದ ಸ್ವರೂಪ

ಭ್ರಷ್ಟಾಚಾರ ಎಂಬುದು ಲಂಚ, ಪ್ರಭಾವ ಬೀರುವುದು, ತಮಗೆ ಬೇಕಾದವರಿಗಾಗಿ ಪ್ರೋತ್ಸಾಹಿಸುವುದು ಮತ್ತು ಅನುಕೂಲ ಮಾಡಿಕೊಡುವುದು, ಸ್ವಜನ ಪಕ್ಷಪಾತ, ಯೋಗ್ಯತೆಗೆ ಬೆಂಬಲ ನೀಡದೆ ಆಪ್ತರನ್ನು ದೊಡ್ಡ ಪದವಿಗೆ ಬೆಂಬಲಿಸುವುದು, ಚುನಾವಣಾ ಅಕ್ರಮ, ಸಾರ್ವಜನಿಕ ಹಣವನ್ನು ಲೂಟಿ ಮಾಡುವುದು, ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡುವುದು ಮತ್ತು ಸಂಘಟಿತ ಅಪರಾಧದಲ್ಲಿ ತೊಡಗುವುದು. ಇವೆಲ್ಲವೂ ಭ್ರಷ್ಟಾಚಾರದ ವಿವಿಧ ಮುಖಗಳಾಗಿವೆ.

2. ಭ್ರಷ್ಟಾಚಾರ ನಿರ್ಮೂಲನೆ ಕಾಯ್ದೆ-1988 ಭ್ರಷ್ಟಾಚಾರ ವ್ಯಾಪ್ತಿಗೆ ಒಳಗಾಗುವ ಅಂಶಗಳ ಕುರಿತು ವಿವರಿಸುತ್ತದೆ. ಇದರ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸುವ ಅಗತ್ಯವಿದೆ. ಹಲವಾರು ಪ್ರಕರಣಗಳಲ್ಲಿ ಖಾಸಗಿ ಕಂಪನಿಯೊಂದಕ್ಕೆ ಅನುಕೂಲ ಮಾಡಿಕೊಡಲು ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಲಾಗಿರುತ್ತದೆ. ಇದು 1988ರ ಕಾಯ್ದೆಯಡಿ ಕ್ರಮ ಜರುಗಿಸಲು ಬೇಕಾಗುವ ಒಬ್ಬ ವ್ಯಕ್ತಿಗೆ ಅನುಕೂಲ ಮಾಡಿರುವುದಾಗಿರುವುದಿಲ್ಲ. ಇಲ್ಲಿ ನಡೆದಿರಬಹುದಾದ ಲಂಚ ಮತ್ತು ಸಾರ್ವಜನಿಕ ಹಣ ಲೂಟಿಯನ್ನು ಪತ್ತೆಹಚ್ಚಲು ಸಾಧ್ಯವಾಗಿರುವುದಿಲ್ಲ. ಆದರೆ ಬೊಕ್ಕಸಕ್ಕೆ ಭಾರಿ ನಷ್ಟವಾಗಿರುತ್ತದೆ. ಸಾರ್ವಜನಿಕ ಹಿತಾಸಕ್ತಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿರುತ್ತದೆ. ಉದಾಹರಣೆಗೆ ಉದ್ದೇಶಪೂರಕವಾಗಿ ಅಧಿಕಾರ ದುರುಪಯೋಗ ಮಾಡಿಕೊಂಡು ಸಾರ್ವಜನಿಕ ಉದ್ದಿಮೆಗಳನ್ನು ಮಾರಾಟ ಮಾಡುವುದು.

2. ಕಾರ್ಯವಿಧಾನದ ಬಗ್ಗೆ ಸ್ಪಷ್ಟಣೆ

ಲೋಕ್‌ಪಾಲ್ ಅಗತ್ಯವಾಗಿ ಸತ್ಯವನ್ನು ಪತ್ತೆ ಹಚ್ಚುವ ಸಂಸ್ಥೆಯಾಗಿರಬೇಕು. ದೂರುಗಳನ್ನು ಸ್ವೀಕರಿಸುವುದು, ವಿಚ್ಛರಣೆ ಮಾಡುವುದು, ತನಿಖೆಗೆ ಒಳಪಡಿಸುವುದು. ಭ್ರಷ್ಟಾಚಾರ ನಡೆದಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಲ್ಲಿ ಒಂದು ನಿಗದಿತ ಅವಧಿಯೊಳಗೆ ಕಾನೂನು ಕ್ರಮ ಜರುಗಿಸಲು ಮತ್ತು ಶಿಕ್ಷೆಗೆ ಗುರಿಪಡಿಸಲು ಅಂತಹ ಪ್ರಕರಣಗಳನ್ನು ವಿಶೇಷ ನ್ಯಾಯಾಲಯಗಳಿಗೆ ಶಿಫಾರಸು ಮಾಡುವ ಅಧಿಕಾರ ಹೊಂದಿರಬೇಕು. ಯಾವುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಮತ್ತು ತನಿಖೆ ನಡೆಸುವ ಅಧಿಕಾರ ಹೊಂದಿರಬೇಕು. ಕೇಂದ್ರ ಸರ್ಕಾರದ ಮಟ್ಟದಲ್ಲಿ ನಡೆಯುವ ಎಲ್ಲ ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದ ಆಡಳಿತಶಾಹಿಯ ಎಲ್ಲ ಹಂತಗಳ ಮೇಲ್ವಿಚಾರಣೆ ನೋಡುವ ಅಧಿಕಾರ ಹೊಂದಿರಬೇಕು. ಅಂತಿಮವಾಗಿ ಲೋಕ್‌ಪಾಲ್ ಶಿಕ್ಷೆಯನ್ನು ಕಾರ್ಯಗತಗೊಳಿಸಲು ಶಿಫಾರಸು ಮಾಡುವ ಮತ್ತು ಕಾರ್ಯಗತಗೊಳಿಸಲು ಒಪ್ಪದಿದ್ದಾಗ ಕೋರ್ಟ್ ಮೊರೆ ಹೋಗುವ ಅಧಿಕಾರವನ್ನು ಲೋಕ್‌ಪಾಲ್ ಹೊಂದಿರಬೇಕು.

ಲೋಕ್‌ಪಾಲ್‌ಗೆ ಸ್ವತಂತ್ರ ನ್ಯಾಯಾಂಗ ಸಂಸ್ಥೆ ಅಧಿಕಾರ ನೀಡಬೇಕು. ಮತ್ತು ಇದನ್ನು ಕಾರ್ಯಗತಗೊಳಿಸಲು ಸ್ವತಂತ್ರವಾದ, ಜವಾಬ್ದಾರಿಯುತ, ಪಾರದರ್ಶಕ ಮತ್ತು ನಿಗದಿತ ಅವಧಿ ಹೊಂದಿರುವ ಸ್ವಾಯತ್ತತೆ ನೀಡಬೇಕು.

ಪುಟ 10ಕ್ಕೆ

ಲೋಕಪಾಲ ಸ್ವರೂಪ ಹಾಗೂ ಇತರ ಆಯಾಮಗಳ ಬಗೆಗೆ ಸಿಪಿಐ(ಎಂ) ನಿಲುವು

ಪುಟ9 ರಿಂದ

ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವೆ ಪ್ರತ್ಯೇಕವಾಗಿ ಅಧಿಕಾರ ಹಂಚಿಕೆ ಮಾಡಿರುವುದು ಸಂವಿಧಾನದ ಮೂಲರಚನೆಯಲ್ಲಿನ ಅಂಶವಾಗಿದೆ. ಹಾಗಾಗಿ ಲೋಕ್‌ಪಾಲ್ ಸಂಸ್ಥೆ ಸಹ ಇಂತಹ ಮೂಲ ಆಶಯಕ್ಕೆ ಅನುರೂಪವಾಗಿರಬೇಕು.

ಲೋಕ್‌ಪಾಲ್ ಭ್ರಷ್ಟಾಚಾರ ಅಥವಾ ಕುಂದುಕೊರತೆಗಳನ್ನು ನಿವಾರಿಸುವ ಸಂಸ್ಥೆಯೂ ಆಗಿರಲಿದೆಯೇ ಎಂಬ ವಿಷಯದ ಕುರಿತು ಪರಿಶೀಲಿಸುವ ಅಗತ್ಯವಿದೆ. ಸಿಪಿಐ(ಎಂ) ಪಕ್ಷ ಈ ಎರಡೂ ವಿಷಯಗಳ ಕುರಿತು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುವುದರ ಪರವಾಗಿದೆ. ಸಾರ್ವಜನಿಕರ ಕುಂದುಕೊರತೆ ನಿವಾರಣೆಗೆ ಪ್ರತ್ಯೇಕ ವ್ಯವಸ್ಥೆ ಇರಬೇಕು. ಇದನ್ನು ಪ್ರತ್ಯೇಕ ಶಾಸನ ರೂಪಿಸುವ ಮೂಲಕ ಸ್ಥಾಪಿಸಬೇಕು. ಸಾರ್ವಜನಿಕರ ಕುಂದುಕೊರತೆಗಳು ಮತ್ತು ಸಾರ್ವಜನಿಕ ಸಂಸ್ಥೆ ಮತ್ತಿತರ ಸಮಸ್ಯೆಗಳನ್ನು ಇದರ ವ್ಯಾಪ್ತಿಗೆ ಒಳಪಡಿಸಬೇಕು.

3. ಆಯ್ಕೆ ಮತ್ತು ಲೋಕ್‌ಪಾಲ್ ರಚನೆ:

ಲೋಕ್‌ಪಾಲ್‌ಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಈ ಕಾಯ್ದೆ ವಸ್ತುನಿಷ್ಠ ಮತ್ತು ಯೋಗ್ಯತೆ, ಅನುಭವ, ವಿದ್ಯಾರ್ಥತೆ ಮತ್ತಿತರ ವಿಷಯಗಳ ಕುರಿತು ಪಾರದರ್ಶಕತೆ ಆಯ್ಕೆಯ ಆದ್ಯತೆಯಾಗಿರಬೇಕು. ಆಯ್ಕೆ ಸಮಿತಿ ವಿಶಾಲ ವ್ಯಾಪ್ತಿಯದಾಗಿದ್ದು, ಕಾರ್ಯಾಂಗ, ಸಂಸತ್ತಿನ ನಾಯಕರು, ನ್ಯಾಯಾಧೀಶರು, ಕಾನೂನು ತಜ್ಞರು ಮತ್ತು ಶಿಕ್ಷಣ ತಜ್ಞರು ಸಮಿತಿಯಲ್ಲಿ ಇರಬೇಕು.

ಸಂಖ್ಯೆ: ಚೇರ್ಮನ್ ಅವರನ್ನು ಹೊರತುಪಡಿಸಿ ಲೋಕ್‌ಪಾಲ್ ಸಮಿತಿಯಲ್ಲಿ 10 ಸದಸ್ಯರು ಇರಬೇಕು. ಈ ಹತ್ತು ಸದಸ್ಯರ ಪೈಕಿ ನಾಲ್ವರು ನ್ಯಾಯಮೂರ್ತಿಗಳಾಗಿರಬೇಕು. ಮೂವರು ಆಡಳಿತ ಮತ್ತು ಸಾರ್ವಜನಿಕ ಸೇವೆ ಹಿನ್ನೆಲೆ ಹೊಂದಿರುವವರಾಗಿರಬೇಕು. ಉಳಿದ ಮೂವರನ್ನು ಕಾನೂನು, ಶಿಕ್ಷಣ ಮತ್ತು ಸಮಾಜ ಸೇವಾ ಕ್ಷೇತ್ರಗಳವರಾಗಿರಬೇಕು. ವಾಣಿಜ್ಯ ಮತ್ತು ಉದ್ಯಮ ವಲಯದಿಂದ ಯಾವುದೇ ವ್ಯಕ್ತಿ ಇರಬಾರದು. ಹಾಗೆಯೇ ರಾಜಕಾರಣಿಯೂ ಸಮಿತಿಯಲ್ಲಿ ಇರಬಾರದು.

4. ಅಧಿಕಾರ ವ್ಯಾಪ್ತಿ:

ಉನ್ನತ ಸ್ಥಳಗಳಲ್ಲಿ ನಡೆಯುವ ಭ್ರಷ್ಟಾಚಾರವನ್ನು ಆದ್ಯತೆಯ ಮೇರೆಗೆ ತಡೆಗಟ್ಟಬಹುದು, ಆದರೆ ಸಾಮಾನ್ಯ ಜನ ಪ್ರತಿದಿನವೂ ಈ ಸಮಸ್ಯೆಯನ್ನು ಎದುರಿಸುತ್ತಿರುತ್ತಾನೆ. ಈ ಸಮಸ್ಯೆಯನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗಿದೆ. ಇಂತಹ ಬಹುತೇಕ ಪ್ರಕರಣಗಳು ತಮ್ಮ ದಿನನಿತ್ಯದ ಕೆಲಸಗಳಿಗಾಗಿ ಅಧಿಕಾರಿಗಳ ಬಳಿಗೆ ಹೋಗುವುದರಿಂದ ಎದುರಿಸಲಿದ್ದು, ಇದು ರಾಜ್ಯ ಸರ್ಕಾರಗಳಿಗೆ ಸಂಬಂಧಪಟ್ಟಿರುವುದಾಗಿರುತ್ತದೆ. ಲೋಕ್‌ಪಾಲ್ ಮಾದರಿಯಲ್ಲೇ ಲೋಕಾಯುಕ್ತರನ್ನೂ ಸ್ಥಾಪಿಸಬೇಕು. ರಾಜ್ಯ ಸರ್ಕಾರಿ ನೌಕರರು, ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಮತ್ತು ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಇದರ ವ್ಯಾಪ್ತಿಗೆ ಒಳಗಾಗಬೇಕು. ಇದರೊಂದಿಗೆ, ಈಗಾಗಲೇ ಹೇಳಿರುವಂತೆ ಸಾರ್ವಜನಿಕ ಕುಂದುಕೊರತೆಗಳನ್ನು ನಿವಾರಿಸುವ ಒಂದು ವ್ಯವಸ್ಥೆಯನ್ನು ಪ್ರತ್ಯೇಕವಾಗಿ ಸ್ಥಾಪಿಸಬೇಕು. ಇದು ಸಾರ್ವಜನಿಕರಿಗೆ ಒದಗಿಸುವ ಮೂಲ ಸೇವೆ ಮತ್ತು ಅವರ ಹಕ್ಕುಗಳಿಗೆ ಚ್ಯುತಿಯಾಗದಂತೆ ಸಮಸ್ಯೆಗಳನ್ನು ನಿವಾರಿಸಬೇಕು.

ಅ) ಪ್ರಧಾನ ಮಂತ್ರಿ: ಅಗತ್ಯ ಸುರಕ್ಷತೆಗಳೊಂದಿಗೆ ಪ್ರಧಾನ ಮಂತ್ರಿಗಳನ್ನೂ ಲೋಕ್‌ಪಾಲ್ ವ್ಯಾಪ್ತಿಗೆ ಒಳಪಡಿಸಬೇಕು. ವಿ.ಪಿ. ಸಿಂಗ್ ನೇತೃತ್ವದ ಸರ್ಕಾರ 1989ರಲ್ಲಿ ಪ್ರಧಾನ ಮಂತ್ರಿಗಳ ಕಚೇರಿ ಮತ್ತು ಎಲ್ಲ ನಾಗರಿಕ ಸೇವಾ ಅಧಿಕಾರಿಗಳನ್ನು ಲೋಕ್‌ಪಾಲ್ ವ್ಯಾಪ್ತಿಗೆ ಸೇರಿಸಿತ್ತು. ಅದರ ನಂತರ ಮಾಡಿದ ಎಲ್ಲ ಶಾಸನಗಳಲ್ಲೂ ಪ್ರಧಾನಿಗಳನ್ನು ಲೋಕ್‌ಪಾಲ್ ವ್ಯಾಪ್ತಿಗೆ ಒಳಪಡಿಸಿತ್ತು. ವಾಸ್ತವವಾಗಿ ಹೇಳುವುದಾದರೆ 2001ರಲ್ಲಿ ಲೋಕ್‌ಪಾಲ್ ಮಸೂದೆ ಕುರಿತು ಪರಿಶೀಲನೆ ನಡೆಸುವಾಗ ಪ್ರಣಬ್ ಮುಖರ್ಜಿ ನೇತೃತ್ವದ ಸಂಸತ್ತಿನ ಸ್ಥಾಯಿ ಸಮಿತಿ ಈ ಅಂಶವನ್ನು ನಿರ್ದಿಷ್ಟವಾಗಿ ಹೇಳಿತ್ತು. ಆದರೆ 1989ರ ನಂತರದಲ್ಲಿ ಅದೇ ಮೊದಲ ಬಾರಿಗೆ, ಯುಪಿಎ ಸರ್ಕಾರ ಭಾರಿ ಪ್ರಮಾಣದ ಹಗರಣಗಳಲ್ಲಿ ಸಿಲುಕಿರುವುದರಿಂದ, ಪ್ರಧಾನ ಮಂತ್ರಿಗಳ ಕಚೇರಿಯನ್ನು ಹೊಣೆಗಾರರನ್ನಾಗಿ ಮಾಡುವುದಕ್ಕೆ ಒಪ್ಪುತ್ತಿಲ್ಲ. ಸ್ಪಷ್ಟವಾಗಿ ಹೇಳುವುದೆಂದರೆ, ಭ್ರಷ್ಟಾಚಾರ ನಿರ್ಮೂಲನೆ ಕಾಯ್ದೆ ವ್ಯಾಪ್ತಿಗೆ ಬರುವ ಎಲ್ಲ ಕೇಂದ್ರ ಸರ್ಕಾರದ ಎಲ್ಲ ಅಧಿಕಾರಿಗಳು, ಪ್ರಧಾನ ಮಂತ್ರಿಗಳೂ ಸೇರಿದಂತೆ, ಕಡ್ಡಾಯವಾಗಿ ಲೋಕ್‌ಪಾಲ್ ಮಸೂದೆ ವ್ಯಾಪ್ತಿಗೆ ಬರಬೇಕು.

ಆ) ನ್ಯಾಯಾಂಗ: ನ್ಯಾಯಾಂಗ ವ್ಯವಸ್ಥೆಯನ್ನೂ ತೀವ್ರತರವಾದ ಮೇಲ್ವಿಚಾರಣೆಗೆ ಒಳಪಡಿಸಬೇಕು ಮತ್ತು ಹೆಚ್ಚು ಜವಾಬ್ದಾರಿಯುತವನ್ನಾಗಿಸಬೇಕು. ನ್ಯಾಯಾಂಗ ವ್ಯವಸ್ಥೆಯಲ್ಲಿ ನಡೆಯುವ ಭ್ರಷ್ಟಾಚಾರ ಪ್ರಕರಣಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಮತ್ತು ತನಿಖೆಗೆ ಒಳಪಡಿಸಲು ಮುಖ್ಯ ನ್ಯಾಯಮೂರ್ತಿಗಳ ಪೂರ್ವಾನುಮತಿ ಅಗತ್ಯ ಎಂಬುದು ವಾಸ್ತವವಾಗಿ ಹೇಳುವುದಾದರೆ ಭ್ರಷ್ಟರಿಗೆ ವಿನಾಯಿತಿ ನೀಡಿದಂತೆಯೇ. ಆದರೆ ಸರ್ವೋಚ್ಚ ನ್ಯಾಯಾಲಯವನ್ನು ಲೋಕ್‌ಪಾಲ್ ವ್ಯಾಪ್ತಿಗೆ ಒಳಪಡಿಸುವುದೆಂದರೆ ಸಂವಿಧಾನ ಬದ್ಧವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ನೀಡಿರುವ ಸ್ವಾತಂತ್ರ್ಯವನ್ನು ಅತಿಕ್ರಮಿಸಿದಂತೆಯೇ ಸರಿ. ನ್ಯಾಯಾಧೀಶರೊಬ್ಬರು ದುರುದ್ದೇಶಪೂರಿತವಾಗಿ ನಡೆದುಕೊಂಡಿದ್ದಾರೆ ಎಂಬ ಆರೋಪಗಳು ಬಂದ ಮಾತ್ರಕ್ಕೆ ಲೋಕ್‌ಪಾಲ್ ತನಿಖೆಯನ್ನು ಆರಂಭಿಸಬಹುದು ಎಂದಾಗುವುದಾದರೆ, ನ್ಯಾಯಾಧೀಶರು ನಿರ್ಭಯವಾಗಿ ಕಾರ್ಯನಿರ್ವಹಿಸಲು ಅವಕಾಶ ಇಲ್ಲದಂತಾಗುವ ಸಾಧ್ಯತೆಗಳು ಎದುರಾಗಬಹುದು.

ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳ ಮೇಲ್ವಿಚಾರಣೆಯನ್ನು ರಾಷ್ಟ್ರೀಯ ನ್ಯಾಯಾಂಗ ಆಯೋಗ ನೋಡಿಕೊಳ್ಳಬೇಕು. ಈ ಆಯೋಗ ನ್ಯಾಯಾಂಗ ವ್ಯವಸ್ಥೆಯಲ್ಲಿನ ಉನ್ನತ ಮಟ್ಟದ ನೇಮಕಾತಿ ಮತ್ತು ಅವರ ನಡುವಳಿಕೆ ಹಾಗೂ ಅವರ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳ ತನಿಖೆ ನಡೆಸಬೇಕು. ಇದಕ್ಕೆ ಅಗತ್ಯವಾದ ಶಾಸನವನ್ನು ರೂಪಿಸಬೇಕು. ಈ ಉದ್ದೇಶಕ್ಕಾಗಿ ರೂಪಿಸಿರುವ ನ್ಯಾಯಾಂಗದ ಉತ್ಕೃಷ್ಟತೆ ಮತ್ತು ಜವಾಬ್ದಾರಿ ಮಸೂದೆ–2010 ಕೆಟ್ಟದಾಗಿದ್ದು, ಅಸಮರ್ಪಕವಾಗಿದೆ.

ಇ) ಸಂಸತ್ ಸದಸ್ಯರು: ಸದ್ಯ, ಭ್ರಷ್ಟಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಂಸತ್ ಸದಸ್ಯರನ್ನು ವಿಚಾರಣೆಗೆ ಒಳಪಡಿಸುವ ಕ್ರಮ ತುಂಬಾ ದುರ್ಬಲ ಮತ್ತು ಅತೃಪ್ತಿದಾಯಕವಾಗಿದೆ. ಸಂಸತ್‌ನ ಸದಸ್ಯರಿಗೆ, ಸಂವಿಧಾನದ ಆರ್ಟಿಕಲ್ 105 ಮಾತನಾಡುವ ಸ್ವಾತಂತ್ರ್ಯ ಮತ್ತು ಮತ ಚಲಾಯಿಸುವುದಕ್ಕೆ ಸಂಬಂಧಿಸಿದಂತೆ ರಕ್ಷಣೆ ನೀಡುತ್ತದೆ. ಇಲ್ಲಿನ ವಾಸ್ತವವಾದ ವಿಷಯ ಎಂದರೆ, ಈ ಸ್ವಾತಂತ್ರ್ಯ ಸಂಸದರ ಭ್ರಷ್ಟಾಚಾರ ಪ್ರಕರಣಗಳಿಗೆ ಅನ್ವಯವಾಗದಂತೆ ಮಾಡುವುದು ಹೇಗೆ ಎಂಬುದಾಗಿದೆ.

ಇದನ್ನು ಆರ್ಟಿಕಲ್ 105ಕ್ಕೆ ಸಂವಿಧಾನದ ಕಾರ್ಯವಿಧಾನ ಕುರಿತು ಪರಿಶೀಲಿಸುವ ರಾಷ್ಟ್ರೀಯ ಆಯೋಗದ ಶಿಫಾರಸಿನ ಆಧಾರದಲ್ಲಿ ತಿದ್ದುಪಡಿ ತರುವ ಮೂಲಕ ಮಾಡಬೇಕಾಗಿದೆ.

ಇದಕ್ಕೆ ಪರ್ಯಾಯವಾಗಿ, ಒಂದು ವೇಳೆ ಸಾಧ್ಯವಾದರೆ, ಯಾವುದೇ ಸಂಸದ ಭ್ರಷ್ಟಾಚಾರದಲ್ಲಿ ನಿರತನಾಗಿದ್ದರೆ, ಅದು ಸಂಸತ್ತಿನಲ್ಲಿ ಅವರು ನಡೆದುಕೊಳ್ಳುವ ರೀತಿಯ (ಭಾಷಣ, ಮತ ಚಲಾವಣೆ ಮತ್ತಿತರ ನಡವಳಿಕೆಗಳು) ಮೇಲೆ ಪ್ರಭಾವ ಬೀರಿದ್ದರೆ, ಆಗ ಅವರ ನಡವಳಿಕೆ ಭ್ರಷ್ಟಾಚಾರ ನಿರ್ಮೂಲನೆ ಕಾಯ್ದೆ ಮತ್ತು ಐಪಿಸಿ ವ್ಯಾಪ್ತಿಗೆ ಒಳಪಡಿಸುವಂತಹ ಶಾಸನವನ್ನು ರೂಪಿಸಬೇಕು.

5. ಲೋಕಾಯುಕ್ತ:

ಕೇಂದ್ರದಲ್ಲಿ ಲೋಕ್‌ಪಾಲ್ ಸ್ಥಾಪಿಸಿದಂತೆಯೇ ರಾಜ್ಯಗಳಲ್ಲೂ ಲೋಕಾಯುಕ್ತರನ್ನು ನೇಮಕ ಮಾಡಬೇಕು.

6. ಭ್ರಷ್ಟಾಚಾರದ ಸುಳಿವು ನೀಡುವವರ ರಕ್ಷಣೆ:

ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಬೇಕಾದರೆ ಈ ಕುರಿತು ಸುಳಿವು ನೀಡುವವರಿಗೆ (ವಿಶಲ್‌ಬ್ಲೋವರ್ಸ್) ರಕ್ಷಣೆ ನೀಡುವುದು ತುಂಬಾ ಮುಖ್ಯ. ಇವರಿಗೆ ರಕ್ಷಣೆ ನೀಡುವುದು ಮತ್ತು ಅವರ ಮೇಲ್ವಿಚಾರಣೆ ನೋಡಿಕೊಳ್ಳುವುದು ಲೋಕ್‌ಪಾಲ್‌ರ ಆದ್ಯ ಕರ್ತವ್ಯವಾಗಿರಬೇಕು. ಆದರೆ ಇದಕ್ಕೆ ಸಮಗ್ರವಾದ ಶಾಸನದ ಬೆಂಬಲ ಬೇಕು. ಸಾರ್ವಜನಿಕ ಹಿತಾಸಕ್ತಿ ಬಹಿರಂಗ (ರಕ್ಷಣೆ ಮತ್ತು ಮಾಹಿತಿ) ಮಸೂದೆ, 2010ನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕು. ಮತ್ತು ಈ ಮಸೂದೆಯನ್ನು ಆದಷ್ಟು ಬೇಗನೆ ಜಾರಿಗೆ ತರಬೇಕು.

7. ಬೃಹತ್ ಉದ್ಯಮಿಗಳು–ಸರ್ಕಾರಿ ಅಧಿಕಾರಿಗಳ ನಂಟು

ಜಾಗತೀಕರಣದ ನಂತರದಲ್ಲಿ, ಬೃಹತ್ ಉದ್ಯಮಿಗಳು ಮತ್ತು ನಾಗರಿಕ ಸೇವಾ ಅಧಿಕಾರಿಗಳ ನಡುವಿನ ನಂಟು ಭ್ರಷ್ಟಾಚಾರ ಹುಟ್ಟುಹಾಕುವ ಪ್ರಮುಖ ಆಗರ ಎಂಬುದನ್ನು ಮನಗಾಣುವುದು ತುಂಬಾ ಅಗತ್ಯವಾಗಿದೆ. ಬೃಹತ್ ಕಂಪನಿಗಳಿಗೆ ಅಧಿಕಾರಿಗಳು ಪರವಾನಗಿ ನೀಡುವಂತೆ ಶಿಫಾರಸು ಮಾಡುವುದು, ರದ್ದುಪಡಿಸುವುದು, ಗುತ್ತಿಗೆಗಳನ್ನು ನೀಡುವುದು, ಬೋಗ್ಯಕ್ಕೆ ಅಥವಾ ಒಪ್ಪಂದಗಳನ್ನು ಮಾಡಿಕೊಳ್ಳುವುದು. ಇವುಗಳನ್ನು ಲಂಚ ಪಡೆದು ಮಾಡಿದ್ದಲ್ಲಿ ಲೋಕ್‌ಪಾಲ್ ಈ. ಕುರಿತು ತನಿಖೆ ನಡೆಸುವುದೂ ತುಂಬಾ ಅಗತ್ಯ. ಕಪ್ಪುಪಟ್ಟಿಗೆ ಸೇರಿರುವ ಕಂಪನಿಗಳು ಸರ್ಕಾರದ ಗುತ್ತಿಗೆಗಳು, ಪರವಾನಗಿಗಳನ್ನು ಪಡೆಯುವುದನ್ನು ತಡೆಯುವಂತೆ ಶಿಫಾರಸು ಮಾಡುವ ಅಧಿಕಾರವೂ ಲೋಕ್‌ಪಾಲ್ ಹೊಂದಿರಬೇಕು. ಅದೇ ರೀತಿ, ಒಂದು ವೇಳೆ ಭ್ರಷ್ಟಾಚಾರದ ಮೂಲಕ ಲಾಭ ಗಳಿಸಿರುವುದು ಒಂದು ಉದ್ಯಮ ಸಂಸ್ಥೆಯಾದಲ್ಲಿ, ಅವರಿಂದ ಬೊಕ್ಕಸಕ್ಕೆ ಆಗಿರುವ ನಷ್ಟವನ್ನು ವಸೂಲಿ ಮಾಡಲು ನಿರ್ದಿಷ್ಟ ಕ್ರಮಗಳನ್ನು ಜರುಗಿಸುವಂತೆ ಶಿಫಾರಸು ಮಾಡುವ ಅಧಿಕಾರ ಲೋಕ್‌ಪಾಲ್ ಹೊಂದಿರಬೇಕು. ಸರ್ಕಾರ ಈ ಎಲ್ಲ ಶಿಫಾರಸುಗಳನ್ನು ಒಪ್ಪಿಕೊಳ್ಳಬೇಕು ಮತ್ತು ಅದರಂತೆ ಕಾರ್ಯಪ್ರವೃತ್ತವಾಗಬೇಕು.

ಉಪಸಂಹಾರ:

ಸಿಪಿಐ(ಎಂ) ಪಕ್ಷ ಎತ್ತಿಹಿಡಿಯುವುದೇನೆಂದರೆ, ಸ್ವತಂತ್ರ ಲೋಕ್‌ಪಾಲ್ ಸ್ಥಾಪನೆಗೆ ಶಾಸನವನ್ನು ರೂಪಿಸುವುದರ ಜೊತೆಗೆ, ಇದರ ಜೊತೆಜೊತೆಗೆ ಭ್ರಷ್ಟಾಚಾರದ ವಿರುದ್ಧ ಕಾನೂನು ಮತ್ತು ಆಡಳಿತಾತ್ಮಕ ವ್ಯವಸ್ಥೆಯನ್ನು ಬಲಿಷ್ಠಗೊಳಿಸುವುದು ತುಂಬಾ ಅಗತ್ಯ.

1) ರಾಷ್ಟ್ರೀಯ ನ್ಯಾಯಾಂಗ ಆಯೋಗವನ್ನು ರಚಿಸಬೇಕು. ಮತ್ತು ನ್ಯಾಯಾಂಗ ವ್ಯವಸ್ಥೆಯನ್ನು ಇದರ ವ್ಯಾಪ್ತಿಗೆ ಒಳಪಡಿಸಬೇಕು.
2) ನಾಗರಿಕ ಹಕ್ಕು ರಕ್ಷಣೆ ಮತ್ತು ಕುಂದುಕೊರತೆಗಳ ನಿವಾರಣೆಗೆ ಶಾಸನ ರೂಪಿಸಬೇಕು.
3) ಸಂಸದರನ್ನು ಭ್ರಷ್ಟಾಚಾರ ವಿರೋಧಿ ಕಾನೂನಿನ ವ್ಯಾಪ್ತಿಗೆ ಒಳಪಡಿಸಲು ಸಂವಿಧಾನದ ಆರ್ಟಿಕಲ್ 105ಕ್ಕೆ ತಿದ್ದುಪಡಿ ತರಬೇಕು.
4) ಚುನಾವಣೆಗಳಲ್ಲಿ ಹಣಬಲ ನಿಯಂತ್ರಿಸಲು ಚುನಾವಣೆ ಪ್ರಕ್ರಿಯೆಗೆ ಸುಧಾರಣೆ ತರಬೇಕು.
5) ರಾಜ್ಯ ಮಟ್ಟದಲ್ಲಿ ಎಲ್ಲ ಅಧಿಕಾರಿಗಳನ್ನು ಒಳಪಡಿಸಲು ರಾಜ್ಯಗಳಲ್ಲಿ ಲೋಕಾಯುಕ್ತರನ್ನು ನೇಮಿಸಬೇಕು.
6) ಕಪ್ಪುಹಣವನ್ನು ಹೊರತೆಗೆಯಲು ಕ್ರಮಗಳನ್ನು ಕೈಗೊಳ್ಳಬೇಕು. ವಿದೇಶಗಳಲ್ಲಿನ ಬ್ಯಾಂಕ್‌ಗಳು ಮತ್ತು ತೆರಿಗೆ ಸ್ವರ್ಗಗಳಲ್ಲಿ ಬಚ್ಚಿಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು.



ಬಿಜೆಪಿ ದರ್ಬಾರ್

ಭೂಗಳ್ಳತನ, ತನಿಖಾ ವರದಿ ತಿರಸ್ಕಾರ, ನ್ಯಾಯಾಂಗದ ಆದೇಶಕ್ಕೆ ಧಿಕ್ಕಾರ, ವಿಕೃತ ಸಿನಿಮಾಗೆ ಪುರಸ್ಕಾರ!

ಏನು ನಡೆದಾದ್ದೋ? ಇನ್ನೇನು ನಡೀತಾದ್ದೋ?

■ ಆರ್.ರಾಮಕೃಷ್ಣ

ಬಿಜೆಪಿ ಸರ್ಕಾರದ ಭೂಮಿ ಹಗರಣಗಳ ಬಗೆಗೆ ಓದಿ, ಓದಿ–ಕೇಳಿ, ಕೇಳಿ ನಮ್ಮ ನಾಡಿನ ಜನರ ತಲೆ ಚಿಟ್ಟು ಹಿಡಿದಿರಬಹುದು. ಹಾಗಾಗಿ ಸ್ವಲ್ಪ ಸಿನಿಮಾ ವಿಷಯ ಮಾತಾಡೋಣ. ಸಿನಿಮಾ ವಿಷಯ ಅಂದರೆ ಬಹಳ ಜನರಿಗೆ ಆಸಕ್ತಿ. ಯಡಿಯೂರಪ್ಪನವರಿಗೂ ಅಷ್ಟೆ. ಅದರಲ್ಲೂ ತಮ್ಮ ಪಕ್ಷ ಬಾಂಧವರು ತೆಗೆದ ಸಿನಿಮಾ ಅಂದರೆ ಬಹಳ ಆಸಕ್ತಿ.

ನೋಡಿ ಇಲ್ಲಿ ಏನಾಗಿದೆ ಅಂತ. 2009ರ ಸಾಲಿನಲ್ಲಿ ಕನ್ನಡದಲ್ಲಿ ಒಂದು ಗಬ್ಬು ಸಿನಿಮಾ ಬಂದಿತ್ತು. 'ಪತ್ರೆ ಲವ್ಸ್ ಪದ್ಮ' ಅಂತ ಆ ಸಿನಿಮಾದ ಹೆಸರು. 'ಪತ್ರೆ' ಮಾನಸಿಕ ಸಮಸ್ಯೆ ಇರುವ ಒಬ್ಬ ಯುವಕನಂತೆ. ಇಂಥಾ ಕತೆಯನ್ನ ನೆಪವಾಗಿಟ್ಟುಕೊಂಡು ಶಾಲಾ, ಕಾಲೇಜಿನ ಹದಿ ಹರೆಯದ ಮಕ್ಕಳ ಮನಸ್ಸಿನ ಮೇಲೆ ತೀರಾ ದುಷ್ಪರಿಣಾಮ ಬೀರಬಹುದಾದ ವಿಕೃತ ಪ್ರೇಮ ಪ್ರಕರಣಗಳ ಸರಣಿಯ ತಿಕ್ಕಲು ಕತೆಯನ್ನು ಆ ಸಿನಿಮಾ ಹೊಂದಿತ್ತು. ಮಾನಸಿಕ ಸಮಸ್ಯೆ ಇರುವ ಯಾರೋ ಮೆಂಟಲ್ ಗಿರಾಕಿಗಳೋ ಅಥವಾ ವಿಕೃತ ಮನಸ್ಸಿನ ಜನರೋ ಈ ಸಿನಿಮಾ ತೆಗೆದಿದ್ದಾರೆ.... ಇವೆಲ್ಲಾ ಜನರಿಗೆ, ಯುವಜನರಿಗೆ ನಿಜಕ್ಕೂ ಬೇಕಿತ್ತಾ...? ಅಂತ ಆಗ ತುಂಬಾ ಜನ ಅಂದುಕೊಂಡಿದ್ದರು. ಮತ್ತು ನೊಂದುಕೊಂಡಿದ್ದರು.

ಈಗ ಆ ಸಿನಿಮಾದ ವಿಷಯ ಯಾಕೆ ಅಂದ್ರಾ? ಕನ್ನಡ ಸಿನಿಮಾ ಲೋಕಕ್ಕೆ ಇಂಥಾ ಒಂದು 'ವಿಕೃತ' ಸಿನಿಮಾ ನೀಡಿದ ಮಹಾನುಭಾವರಿಗೆ ನಮ್ಮ ಯಡಿಯೂರಪ್ಪನವರ ಕೃಪಾಕಟಾಕ್ಷದಿಂದ 10 ಲಕ್ಷದ ಭರ್ಜರಿ ಬಹುಮಾನ ಸಿಕ್ಕಿದೆ.

ಇವೆಲ್ಲಾ ಹೇಗಾಗಿದೆ ನೋಡಿ. 2009 ರ ಸಾಲಿನಲ್ಲಿ ಬಂದ ಕನ್ನಡ ಚಿತ್ರಗಳಲ್ಲಿ ಆಯ್ದ ಕೆಲವು 'ಗುಣಮಟ್ಟದ ಸಿನಿಮಾ'ಗಳಿಗೆ ತಲಾ 10 ಲಕ್ಷ ಸಹಾಯಧನ ನೀಡುವ ಸಲುವಾಗಿ ಆಯ್ಕೆ ಸಮಿತಿಯೊಂದನ್ನು ರಚಿಸಲಾಗಿತ್ತು. ಆ ಸಮಿತಿಯು ಬಿಡುಗಡೆಯಾಗಿದ್ದ 102 ಚಿತ್ರಗಳಲ್ಲಿ 23 ಸಿನಿಮಾಗಳನ್ನು ಸಹಾಯಧನಕ್ಕೆ ಆಯ್ಕೆ ಮಾಡಿತ್ತು. 23 ಚಿತ್ರಗಳ ಪಟ್ಟಿಯಲ್ಲಿ 'ಪತ್ರೆ ಲವ್ಸ್ ಪದ್ಮ' ಖಂಡಿತ ಇರಲಿಲ್ಲ. (ಸಮಿತಿ ಈ ಸಿನಿಮಾವನ್ನು ಆಯ್ಕೆ ಮಾಡಿದಿದ್ದರೆ ಸಮಿತಿ ಸದಸ್ಯರನ್ನು ಯಾರಾದರು ಉತ್ತಮ ಮಾನಸಿಕ ತಜ್ಞರಿಗೆ ತೋರಿಸಬೇಕಾಗುತ್ತಿತ್ತು.) ಆದರೆ ಪಟ್ಟಿಯಲ್ಲೇ ಇರದಿದ್ದ 'ಪತ್ರೆ'ಗೆ 10 ಲಕ್ಷ ಸಬ್ಸಿಡಿ ಭಾಗ್ಯ ಸಿಕ್ಕೇ ಬಿಟ್ಟಿತು. ಇವೆಲ್ಲಾ ಆಗಿದ್ದಾದರು ಹೇಗೆ ?

ಈ ಮಹಾನ್ ಸಿನಿಮಾ ತೆಗೆದವರು ಅಂದರೆ ಸಿನಿಮಾದ ಘನ ನಿರ್ಮಾಪಕಿ ಆರ್.ಪ್ರಮೀಳಾ ಅಂತ. ಅವರು ಬಿಜೆಪಿ ಪಕ್ಷದ ಮಹಿಳಾ ಮೋರ್ಚಾದ ಕಾರ್ಯಕಾರಿ ಸಮಿತಿ ಸದಸ್ಯೆ ಅಂತೆ. ಅಂದರೆ ಬಿಜೆಪಿ ಪಕ್ಷದ ಪದಾಧಿಕಾರಿ. ತಮ್ಮ ಪಕ್ಷದವರೊಬ್ಬರು ಸಿನಿಮಾ ತೆಗೆದ ಮೇಲೆ ಅದಕ್ಕೆ ಸಹಾಯಧನ ಸಿಗಲೇ ಬೇಕು. ಸಿನಿಮಾ ಹೇಗಿದ್ದರೆ ತಾನೆ ಏನು ?

ಸರಿ ಇದೊಂದು ವಿಶೇಷ ಪ್ರಕರಣ ಅಂತ ಪರಿಗಣಿಸಿ 10 ಲಕ್ಷ ಸಹಾಯಧನದ ನೀಡಲಾಗುವ ಚಿತ್ರಗಳ ಪಟ್ಟಿಗೆ 'ಪತ್ರೆ'ಯನ್ನು ಸೇರಿಸಲು ಯಡಿಯೂರಪ್ಪ ಹಾರಿಬಂದು ಮಧ್ಯಪ್ರವೇಶಿಸಿಯೇ ಬಿಟ್ಟರು. ನಿರ್ಮಾಪಕಿಯ ಜೇಬಿಗೆ ಬರೋಬ್ಬರಿ 10 ಲಕ್ಷ. ಬಿಜೆಪಿ ಸರ್ಕಾರದ ಹೊಲಸುಗೆಟ್ಟ ಆಡಳಿತ, ಧೋರಣೆಗಳು, ಭ್ರಷ್ಟಾಚಾರಗಳು ಹೇಗೆ ನಮ್ಮ ಸಮಾಜದ ಬೇರೆ ಬೇರೆ ರಂಗವನ್ನು ಹಾಳು ಮಾಡುತ್ತಿದೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆ ಅಷ್ಟೆ. ಈ ಪತ್ರೆ ಸಿನಿಮಾಕ್ಕೆ ಯಡಿಯೂರಪ್ಪ ಅತ್ಯುತ್ತಮ ಸಿನಿಮಾ ಅಂತ ಪ್ರಶಸ್ತಿ ಕೊಡಿಸಲು ಸಾಧ್ಯವಾಗಿಲ್ಲ. ಅದಕ್ಕಾಗಿ ನಾವು ನೀವೆಲ್ಲ ಸಂತೋಷ ಪಡಬೇಕಾಗಿದೆ.

★

ಜನಾರ್ಧನ ರೆಡ್ಡಿಯ ಕ್ರಿಮಿನಲ್ ಕೃತ್ಯಗಳು : 35 ಸಾರಿ ವಾರೆಂಟ್ ಜಾರಿಯಾಗದೇ ವಾಪಸ್

ಇದನ್ನು ಏನೆಂದು ಕರೆಯುವುದು ? ಈ ಪುಣ್ಯಾತ್ಮನ ಮೇಲೆ ಹಲವಾರು ಕ್ರಿಮಿನಲ್ ಮೊಕದ್ದಮೆಗಳಿವೆ. ಅಕ್ರಮ ಗಣಿಗಾರಿಕೆಗಾಗಿ ರಾಜ್ಯದ ಗಡಿ ಗುರುತನ್ನೇ ಹುಡಿಮಾಡಿ ಕರ್ನಾಟಕದ ನೆಲವನ್ನು ನುಂಗಿ ಹಾಕಿರುವುದು, ಸುಗ್ಗಲಮ್ಮನ ದೇವಾಲಯವನ್ನು ಕೆಡವಿ ಹಾಕಿದ್ದು... ಇನ್ನು ಹೀಗೆ. ಆ ಸಂಬಂಧವಾಗಿ ಬಳ್ಳಾರಿ ಜಿಲ್ಲಾ ಕೋರ್ಟುಗಳು ವಾರೆಂಟ್ ಹೊರಡಿಸುತ್ತವೆ. ಅಂದರೆ ನ್ಯಾಯಾಲಯಕ್ಕೆ ಹಾಜರಾಗಬೇಕು ಅಂತ ಆದೇಶ. ಆದರೆ ಆ ಕೋರ್ಟ್ ವಾರೆಂಟ್ ಜಾರಿಯೇ ಆಗುವುದಿಲ್ಲ. ಅಂದರೆ ಆತ ಆ ವಾರೆಂಟನ್ನು ಪಡೆದುಕೊಳ್ಳುವುದೇ ಇಲ್ಲ. ಎಷ್ಟು ಬಾರಿ. ಬರೋಬ್ಬರಿ 35 ಬಾರಿ. ಯಾರಾದರು ಬಡಪಾಯಿ ಸಣ್ಣ ಪುಟ್ಟ ತಪ್ಪು ಮಾಡಿ ಸಿಕ್ಕಿಬಿದ್ದರೆ, ಅಥವಾ ಸಾಮಾನ್ಯ ಆಟೋ ಚಾಲಕರೋ, ಬೈಕ್ ಸವಾರರೋ ಸಂಚಾರ ನಿಯಮ ಮೀರುವ ಸಣ್ಣ ಪುಟ್ಟ ತಪ್ಪು ಮಾಡಿದರೆ ಕಾನೂನುಗಳು ಮತ್ತು ವಾರೆಂಟುಗಳು ಯಾವ ರೀತಿಯಲ್ಲಿ ಜಾರಿಯಾಗುತ್ತವೆ ಎಂಬುದು ನಮಗೆಲ್ಲಾ ಗೊತ್ತೇ ಇದೆ.

ಇಲ್ಲಿ ವಾರೆಂಟ್ ತೆಗೆದುಕೊಳ್ಳದೆ ಧೀಮಾಕು ತೋರುವ ವ್ಯಕ್ತಿ ಬೇರೆ ಯಾರೂ ಅಲ್ಲ. ರಾಜ್ಯದ ಸಾಕ್ಷಾತ್ ಪ್ರವಾಸೋದ್ಯಮ ಸಚಿವ ಜನಾರ್ಧನ ರೆಡ್ಡಿ. ಕಾನೂನಿನ ಆಡಳಿತ ಹಾಗೂ ಸಂವಿಧಾನವನ್ನು ಕಾಪಾಡುವುದಾಗಿ ಪ್ರಮಾಣ ವಚನ ತೆಗೆದುಕೊಂಡಿರುವ ಸನ್ಮಾನ್ಯ ಬಿಜೆಪಿ ಸಚಿವ.

ಈಗಾಗಲೇ ಈ ವಿಷಯ ರಾಜ್ಯದ ಹೈಕೋರ್ಟಿನ ಗಮನಕ್ಕೆ ಬಂದು ಕೋರ್ಟು ಈ ವಿಷಯದಲ್ಲಿ ವಾರೆಂಟ್ ಜಾರಿ ಮಾಡುವ



ನಿಟ್ಟಿನಲ್ಲಿ ಹಾಗೂ ಈ ಹಿಂದೆ ವಾರೆಂಟ್ ಜಾರಿಯಾಗದ ಬಗೆಗೆ ಏನು ಕ್ರಮವಹಿಸಲಾಗುವುದು ಎಂದು ವರದಿ ಕೊಡಿ ಎಂದು ಸರ್ಕಾರಕ್ಕೆ ಆದೇಶ ನೀಡಿದೆ. ಘನ ಬಿಜೆಪಿ ಸರ್ಕಾರ ಕ್ರಮ ತೆಗೆದುಕೊಂಡಿದೆ ? ಯಾರ ಮೇಲೆ ಅಂದಿರಾ, ಇನ್ಯಾರ ಮೇಲೆ ?.

ವಾರೆಂಟ್ 'ಜಾರಿ ಮಾಡಲು ವಿಫಲರಾದ' ಪೋಲಿಸ್ ಕಾನ್‌ಸ್ಟೇಬಲ್ ಹಾಗೂ ಪೋಲಿಸ್ ಸಬ್ ಇನ್ಸಪೆಕ್ಟರ್‌ಗಳನ್ನು ಅಮಾನತ್ತು ಮಾಡಲಾಗಿದೆಯಂತೆ. ಇನ್ನು ಕೆಲವರಿಗೆ ಷೋ ಕಾಸ್ ನೋಟಿಸ್ ಅಂದರೆ ಕಾರಣ ಕೊಡಿ ಅಂತ ಪತ್ರ ನೀಡಲಾಗಿದೆಯಂತೆ. ಆಹಾ ?! ಅಮೋಘ ಸರ್ಕಾರದ ಅದ್ಭುತ ಆಡಳಿತವೇ ? ಅಂದರೆ ಬಡಪಾಯಿ ಪೋಲಿಸ್ ಪೇದೆಗಳಂತಹ ಕೆಲವು ಕ್ಷುದ್ರಜೀವಿಗಳನ್ನು ಬಲಿನೀಡಿ 'ಬಿಜೆಪಿಯ ಅಷ್ಟೈಶ್ವರ್ಯ ಸಂಪನ್ನರಾದ ದೇವತೆಗಳನ್ನು ಸಂತ್ರಪ್ತಗೊಳಿಸುವುದು'.

ಅಂತೂ ಹೈಕೋರ್ಟ್ ಆದೇಶಿಸಿದರೂ ಬಿಜೆಪಿ ಸರ್ಕಾರವು ಶಾನು ಕಾಪಾಡಬೇಕಾದರನ್ನು ಕಾಪಾಡಿದೆ. ಉಪ್ಪು ತಿಂದ ಋಣ ತೀರಿಸುತ್ತಿದೆ. ಕೊನೆಗೂ ವಾರೆಂಟ್ ಜಾರಿಯಾಗಿಲ್ಲ. ಸಚಿವ ಮಹಾಶಯರು ಕೋರ್ಟಿಗೆ ಹಾಜರಾಗಲಿಲ್ಲ.

ಹೈ ಕೋರ್ಟ್ ಮತ್ತೊಮ್ಮೆ ಚಾಟಿಯನ್ನೇನೋ ಬೀಸಿದೆ. ಆದರೆ ಆಪರೇಷನ್ ಕಮಲದ ಆಧಾರ ಸ್ಥಂಭವಾಗಿರುವ ಗಣಿ ಲೂಟಿಕೋರ, ಖದೀಮ ಮಂತ್ರಿಗಳನ್ನು ರಾಜ್ಯ ಬಿಜೆಪಿ ಸರ್ಕಾರ ಅಷ್ಟು ಸುಲಭವಾಗಿ ಕೋರ್ಟಿನ ಕಟಕಟೆಗೆ ಒಪ್ಪಿಸಿ ಬಿಡುತ್ತದೆಯೇ? ನೋಡೋಣ ಮುಂದೆ ಏನಾಗಲಿದೆ.

★

ಡಾ। ಬಾಲಸುಬ್ರಮಣ್ಯನ್ ವರದಿ ತಿರಸ್ಕಾರ?

ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಜಮೀನುಗಳ ಅತಿಕ್ರಮಣದ ಬಗೆಗೆ ತನಿಖೆ ಮಾಡಿ ವರದಿ ನೀಡುವುದಕ್ಕಾಗಿಯೇ ರಾಜ್ಯ ಬಿಜೆಪಿ ಸರ್ಕಾರವೇ ನೇಮಿಸಿದ್ದ ಡಾ॥ ಬಾಲಸುಬ್ರಮಣ್ಯನ್ ನೇತೃತ್ವದ ಸಮಿತಿಯು ವರದಿಯನ್ನು ಸ್ವೀಕರಿಸುವ ಮುಂಚೆಯೇ ತಿರಸ್ಕರಿಸುವ ಮಾತು ಹೊರಬಿದ್ದಿತು. ಅದನ್ನು ಸರ್ಕಾರ ಒಪ್ಪುವುದಿಲ್ಲ ಎಂದು ಸರ್ಕಾರದ ಮಂತ್ರಿಯೊಬ್ಬರು ಘೋಷಿಸಿ ಬಿಟ್ಟರು.

ಸಮಿತಿಯು ರಾಜ್ಯದಲ್ಲಿ ಒಟ್ಟಾರೆ ಸುಮಾರು 12 ಲಕ್ಷ ಎಕರೆ ಸರ್ಕಾರಿ ಜಮೀನು ಕಬಳಿಕೆಯಾಗಿದೆ ಎಂದೂ, ಎಷ್ಟೋ ಪ್ರಕರಣಗಳಲ್ಲಿ ಸರ್ಕಾರವೇ ಭೂಕಬಳಿಕೆದಾರರಿಗೆ ಅಕ್ರಮ ನಡೆಸಲು ನೆರವಾಗಿದೆ ಅಥವಾ ಅವರಿಗೆ ರಕ್ಷಣೆ ನೀಡುತ್ತಿದೆ ಎಂದು ಆಧಾರಸಹಿತವಾಗಿ ವರದಿ ನೀಡುತ್ತಿರುವಂತೆ ಕಂಡು ಬರುತ್ತಿದೆ.

ಇಂಥಾ ಒಂದು ಗಂಭೀರವಾದ ವರದಿಯ ಬಗೆಗೆ ಸರ್ಕಾರ ತುರ್ತು ಕ್ರಮವಹಿಸಿ ಜಮೀನು ವಾಪಸ್ ವಶಕ್ಕೆ ಪಡೆಯಬೇಕು ಮತ್ತು ಭೂಗಳ್ಳ ಖದೀಮರನ್ನು ಜೈಲಿಗಟ್ಟಬೇಕು ಎಂದು ಯಾರೇ ಬಯಸುವುದು ಮತ್ತು ಆಗ್ರಹಿಸುವುದು ಸಹಜ. ಬಹುತೇಕ ಸಾರ್ವಜನಿಕ ಸಂಪತ್ತನ್ನು ಲೂಟಿ ಹೊಡೆಯುವುದಕ್ಕಾಗಿಯೇ ಅವತಾರವೆತ್ತಿ ಬಂದಂತಿರುವ ಮುಖ್ಯಮಂತ್ರಿ ಮಂತ್ರಿಗಳಿಂದಲೇ ಅಲಂಕೃತವಾದ ರಾಜ್ಯದ ಬಿಜೆಪಿ ಸರ್ಕಾರದ ಸಚಿವರು ವರದಿ ಕೈಗೆ ಸಿಗುವ ಮೊದಲೇ ಅದನ್ನು ಸರ್ಕಾರ ಒಪ್ಪುವುದಿಲ್ಲ ಎಂದು ಘೋಷಿಸಿದ್ದಾರೆ.

(ಕಬಳಿಕೆ ಆಗಿದೆ ಎನ್ನಲಾದ ಭೂಮಿಯನ್ನು ಒಂದೊಮ್ಮೆ ಬಡ ರೈತರು, ಕೂಲಿಕಾರರು

ಭಗವದ್ಗೀತೆ–ಶಿಕ್ಷಣ ಸರ್ಕಾರ–ನೈತಿಕ ಮೌಲ್ಯ

ಪುಟ 8 ರಿಂದ

ಧರ್ಮ ಪ್ರಚೋದನೆಯ, ಆಣೆ ಪ್ರಮಾಣಕ್ಕೆ ಪೀಠದಲ್ಲಿಡುವ ಈ ಭಗವದ್ಗೀತೆಯಲ್ಲಿ ಏನಿದೆ ಅಂಥಾ ಮಹಿಮೆ. ಅಂದ್ರರೆ ಹುಬ್ಬೇರಿಸಬೇಕಾದ್ದಿಲ್ಲ... ನಾನೇನೂ ಇಲ್ಲದ್ದನ್ನು ಹೇಳುತ್ತಿಲ್ಲ ಅಥವಾ ಭಗವದ್ಗೀತೆಯನ್ನು ಬೋಧಿಸುತ್ತಿಲ್ಲ. ನೀವೇ ಓದಿಕೊಳ್ಳಿ. ಬದಲಾಗಿ ಭಗವದ್ಗೀತೆಯನ್ನು ಓದಿದರೆ, ಓದಿದ್ದನ್ನು ಕೇಳಿದರೆ, ಅರಗಿಸಿಕೊಂಡರೆ ಏನಾಗುತ್ತದೆ ಎಂಬ ಮಹಾತ್ಮ್ಯವನ್ನು ಮಾತ್ರ ಹೇಳುತ್ತೇನೆ.

ನೋಡಿ, 18 ಅಧ್ಯಾಯಗಳ ಈ ಭಗವದ್ಗೀತೆಯಲ್ಲಿ ಬ್ರಾಹ್ಮಣ ಪುರುಷನನ್ನು ಹೊರತು ಪಡಿಸಿ ಉಳಿದೆಲ್ಲರೂ ಅಂದರೆ, ಬ್ರಾಹ್ಮಣ ಮಹಿಳೆಯಿಂದಾರಭ್ಯ ಬೇರೆಲ್ಲಾ ಜಾತಿ–ವರ್ಣಗಳವರೂ ಪಾಪಯೋನಿಯಲ್ಲಿ ಹುಟ್ಟಿದವರು. ಇದರಲ್ಲಿ ತಂತ್ರ–ಪ್ರತಿತಂತ್ರ–ಕುತಂತ್ರಗಳನ್ನು ಹೆಣೆಯುವುದು ಹೇಗೆ(ಇಂದಿನ ರಾಜಕಾರಣದ ಮೂಲ ಮಂತ್ರ) ಹಾಗೂ ವರ್ಣ ಸಂಕರಗಳ ವಿಷಯಗಳೂ ಚರ್ಚೆಗೆ ಬರುತ್ತವೆ. ನೋಡಲಿಕ್ಕೆ ನೇರವಾಗಿ ಕೃಷ್ಣಾರ್ಜುನರ ಸಂಭಾಷಣೆಯನ್ನು (ಉಪದೇಶವನ್ನು) ಧೃತರಾಷ್ಟ್ರನಿಗೆ ಸಂಜಯ ಹೇಳುವ ಶೈಲಿಯಲ್ಲಿದೆ. ಇದನ್ನು ಪಠನ–ಪಾಠಣ–ಮನನ ಮಾಡುವುದರಿಂದ ಏನಾಗುತ್ತದೆಂದು ವರಾಹ ಪುರಾಣದಲ್ಲಿ ಬರುವ 'ಗೀತಾ ಮಹಾತ್ಮೆ' ಹೀಗೆ ಹೇಳುತ್ತದೆ.

ಪ್ರಾರಬ್ಧಂ ಭುಜ್ಯಮಾನೋಽಪಿ ಗೀತಾಭ್ಯಾಸ ರತಃ ಸದಾ।
ಸ ಮುಕ್ತಃ ಸ ಸುಖೀ ಲೋಕೇ ಕರ್ಮಣಾ ನೋಪಲಿಪ್ಯತೇ॥

ಪ್ರಾರಬ್ಧವನ್ನು ಅನುಭವಿಸುತ್ತಿರುವವನು ಯಾವಾಗಲೂ ಗೀತೆಯನ್ನು ಓದುವುದರಲ್ಲಿ ಆಸಕ್ತನಾದರೆ ಅವನು ಮುಕ್ತನು. ಲೋಕದಲ್ಲಿ ಆತ ಸುಖಿ. ಅವನಿಗೆ ಕರ್ಮಗಳು ಅಂಟುವುದಿಲ್ಲ ಅಂತ. ಯಡಿಯೂರಪ್ಪ ಮತ್ತು ಬಿಜೆಪಿ ಸರ್ಕಾರದ ಕರ್ಮಕಾಂಡದಿಂದ ನಲುಗುತ್ತಿರುವ ಕರ್ನಾಟಕದ ಜನತೆಯು ಇವರನ್ನು ಪ್ರಶ್ನಿಸಬಾರದು. ಪ್ರಾರಬ್ಧ ಅನುಭವಿಸಲು ಜನತೆಯ ಬಾಯಿಗೆ ಬೀಗ ಹಾಕಲು ಈ ಭಗವದ್ಗೀತೆಯನ್ನು ಧಾರಾಳವಾಗಿ ಬಳಸಬಹುದು.

ಮಹಾಪಾಪಾದಿ ಪಾಪಾನಿ ಗೀತಾಧ್ಯಾನಂ ಕರೋತಿ ಚೇತ್।
ಕ್ವಚಿತ್ ಸ್ಪರ್ಶಂ ನ ಕುರ್ವಂತಿ ನಲಿನೀದಲಮಂಬುವತ್॥

ಗೀತೆಯ ಧ್ಯಾನ ಮಾಡುವವನಿಗೆ ಮಹಾಪಾತಕಗಳು ಕೂಡಾ ಕಮಲದ ಎಲೆಗಳಿಗೆ ನೀರು ಹೇಗೋ ಹಾಗೆ ಎಷ್ಟು ಮಾತ್ರಕ್ಕೂ ಅಂಟುವುದಿಲ್ಲ. ಹೇಗಿದೆ ಪರ್ಮಿಶನ್ನು? ಕಮಲದ ಪಾರ್ಟಿಗೆ ಅನುಕೂಲವಾಗುವಂತೆಯೇ ಭ್ರಷ್ಟಾಚಾರದ ಪಾತಕಕ್ಕೆ, ಸ್ವಜನ ಪಕ್ಷಪಾತಕ್ಕೆ, ಭೂಹಗರಣಕ್ಕೆ ಅವಕಾಶ ಮಾಡಿಕೊಟ್ಟಿದೆ! ಅಂದರೆ ಈ ಸರ್ಕಾರಕ್ಕೆ ಪಾಪ ಪ್ರಜ್ಞೆಯಿಲ್ಲ ಎಂದಾಗಲಿಲ್ಲವೇ? ಹಾಗಾದರೆ ಭಗವದ್ಗೀತೆಯು ನೈತಿಕವಾಗಿ ಮನುಷ್ಯರನ್ನು ಎತ್ತ ಕೊಂಡೊಯ್ಯುತ್ತದೆ? ಇದನ್ನು ಬೋಧಿಸುವುದರಿಂದ ಮುಂದಿನ ಕಳಂಕಯುಕ್ತ ವ್ಯಕ್ತಿಗಳನ್ನು ತಯಾರು ಮಾಡಿದಂತಾಗುತ್ತದೆ.

ದಿಕ್ತಸ್ಯ ಜ್ಞಾನಮಾಚಾರಂ ವ್ರತಂ ಚೇಷ್ಟಾ ತಪೋಯಶಃ।
ಗೀತಾರ್ಥ ಪಠನಂ ನಾಸ್ತಿ ನಾಧಮಸ್ತತ್ಪರೋ ಜನಃ॥

'ಗೀತೆಯ ಅರ್ಥದ ಅನುಸಂಧಾನ ಇಲ್ಲದವನ ಜ್ಞಾನ, ಆಚಾರ, ವ್ರತ, ನಡತೆ, ತಪಸ್ಸು, ಕೀರ್ತಿ ಎಲ್ಲಕ್ಕೂ ಧಿಕ್ಕಾರವಿರಲಿ. ಅವನಿಗಿಂತ ಕೀಳಾದವರು ಇನ್ನೊಬ್ಬರಿಲ್ಲ'. ಎಂದೂ ಇದೇ ಭಗವದ್ಗೀತೆ ಹೇಳುತ್ತದೆ. ಗೀತೆಯ ಅರ್ಥದ ಅನುಸಂಧಾನ ಯಾರಿಗೆ ಇರುತ್ತದೆ ಹೇಳಿ? ಸಂಸ್ಕೃತಾಭ್ಯಾಸ ಮಾಡಿದ ಮೇಲ್ಜಾತಿಗೆ ಹಾಗೂ ಮೇಲ್ಜಾತಿಯವರನ್ನು ಪುರೋಹಿತರನ್ನಾಗಿಸಿಕೊಂಡ ಕ್ಷತ್ರಿಯರಿಗೆ ಮಾತ್ರ. ಉಳಿದವರೆಲ್ಲ ಶುದ್ಧ ಶ್ರಮಜೀವಿಗಳು. ಸಂಸ್ಕೃತವೂ ಬರುವುದಿಲ್ಲ, ಕಲಿತು ಓದಲು ಸಮಯವೂ ಇಲ್ಲ. ಇವರೆಲ್ಲ ಬದುಕಿಗೆ ತೀರಾ ಅಗತ್ಯವಾದ ಅನ್ನವನ್ನು ಸೃಷ್ಟಿಸಿದವರು, ಮಾನವೀಯ ಸಂಬಂಧಗಳನ್ನು ಹೆಣೆದವರು, ಮನುಷ್ಯ–ಮನುಷ್ಯರ ನಡುವೆ ಪ್ರೀತಿಯ ಸೇತುವೆ ಕಟ್ಟುವ ಹಂಬಲವುಳ್ಳವರು. ಇವರಿಗೆ ಗೀತೆ ಧಿಕ್ಕಾರ ಹೇಳುತ್ತದೆ. ಇವರಿಗಿಂತ ಕೀಳಾದವರು ಬೇರೊಬ್ಬರಿಲ್ಲವೆಂದು ಅವಮಾನಿಸುತ್ತದೆ ಎನ್ನುವಲ್ಲಿ ಗೀತೆಯ 'ಮಹಾತ್ಮೆಯನ್ನು ಕಾಣಬಹುದಾಗಿದೆ.

ಗೀತಾರ್ಥ ಶ್ರವಣಾಸಕ್ತೋ ಮಹಾಪಾಪಯುತೋಽಪಿವಾ।
ವೈಕುಂಠ ಸಮವಾಪ್ನೋತಿ ವಿಷ್ಣುನಾ ಸಹ ನೋಪಲಿಪ್ಯತೆ॥

'ಎಷ್ಟೇ ದೊಡ್ಡ ಪಾಪಕೃತ್ಯ ಮಾಡಿದರೂ ಗೀತೆಯ ಅರ್ಥ ಕೇಳುವುದರಲ್ಲಿ ಆಸಕ್ತನಾದರೆ ವೈಕುಂಠವನ್ನು ಪಡೆದು ವಿಷ್ಣುವಿನೊಡನೆ ಆನಂದ ಪಡುತ್ತಾನೆ' ಎಂದ ಮೇಲೆ ಸದ್ಯದ ಬಿಜೆಪಿ ಸರ್ಕಾರಕ್ಕೆ ಇದು ಆಪ್ಯಾಯಮಾನವಾಗದಿದ್ದರೆ ಹೇಗೆ? ಕಳೆದ ಮೂರು ವರ್ಷದಲ್ಲಿ ಬಂದ ಗಣಿ ಹಗರಣ, ಭೂ ಹಗರಣ, ಸ್ವಜನ ಪಕ್ಷಪಾತ ಹಗರಣಗಳಲ್ಲಿ ಮುಳುಗಿದ ಸರ್ಕಾರದ ಪಾಪಕೃತ್ಯ ಮುಚ್ಚಿಹಾಕಲು ವಿನಃ ದುಷ್ಟರ ಶಿಕ್ಷೆಗಲ್ಲ ಎಂದಾಯಿತು.

ಇಷ್ಟಾಗಿಯೂ ಭಗವದ್ಗೀತೆ ನೈತಿಕತೆಯನ್ನು ಪ್ರತಿಪಾದಿಸುತ್ತದೆ ಎಂದಾದಲ್ಲಿ ಅನೈತಿಕತೆಯ ಮಹಾಕೂಪವಾದ ಬಿಜೆಪಿ ಸರ್ಕಾರದ ಯಾವೊಬ್ಬ ಮಂತ್ರಿ–ಶಾಸಕರೂ ಇದನ್ನು ಓದಿಲ್ಲ ಎಂದಾಯಿತು. ಬದುಕಿನಲ್ಲಿ ಅನ್ನಕ್ಕಿಂತ ನೈತಿಕ ಮೌಲ್ಯಕ್ಕೆ ಬೆಲೆಕೊಡುವ ಸಾಮಾನ್ಯ ಜನರಿಗೆ ಭಗವದ್ಗೀತೆ ಬೋಧಿಸುವ ಬದಲು ಈ ರಾಜ್ಯದ ಈ ದೇಶದ ಮಠ ಮಾನ್ಯರಿಗೆ, ಸಂಘ ಪರಿವಾರದವರಿಗೆ ಮತ್ತು ಈ ರಾಜ್ಯ ಸರ್ಕಾರಕ್ಕೆ ಬೋಧಿಸುವುದು ರಾಜ್ಯದ ಹಿತ ದೃಷ್ಟಿಯಿಂದ ಒಳಿತು.

ಇತಿ ಶ್ರೀ ಭಗವದ್ಗೀತಾಧ್ಯಯನಂ ಸಂಪೂರ್ಣಂ.

ಭಾರತೀಯ ರೈಲ್ವೆ ಎಂಬೊಂದು ಮೃತ್ಯುಪಾಶ

ಪುಟ 7 ರಿಂದ

ಎಕ್ಸ್‌ಪ್ರೆಸ್ ಅಸ್ಸಾಂನ ಚಾರಿತ್ರಿಕ ನಗರ ರಂಗಿಯಾದ ಬಳಿ ಒಂದು ಬೃಹತ್ ಸ್ಫೋಟದ ನಂತರ ಹಳಿ ತಪ್ಪಿತು. ಶಂಕಿತ ಭಯೋತ್ಪಾದಕರು ಇಂತಹ ಸ್ಫೋಟವನ್ನು ನಡೆಸಿರಬಹುದು ಎಂಬ ಆರೋಪಗಳಿವೆ. ಕಳೆದ ವರ್ಷ 150 ಪ್ರಯಾಣಿಕರನ್ನು ಸಾಯಿಸಿದ ಜ್ಞಾನೇಶ್ವರಿ ಎಕ್ಸ್‌ಪ್ರೆಸ್ ಅಪಘಾತದಲ್ಲೂ ಇಂತಹುದೇ ಪ್ರಶ್ನೆಗಳನ್ನು ಎತ್ತಲಾಗಿತ್ತು. ಅದು ಉಗ್ರಗಾಮಿಗಳ ಕೈಚಳಕ ಎಂದು ಆಗಿನ ಕೇಂದ್ರ ರೈಲ್ವೆ ಮಂತ್ರಿಗಳು ಹೇಳಿದ್ದರು. ಇಂದು ಅದೇ ವ್ಯಕ್ತಿ ಪಶ್ಚಿಮ ಬಂಗಾಲದ ಮುಖ್ಯಮಂತ್ರಿಯಾಗಿ ಇಂತಹ 46 ಉಗ್ರರನ್ನು ಜೈಲಿನಿಂದ ಬಿಡುಗಡೆ ಮಾಡುವ ನಿರ್ಧಾರವನ್ನು ಪ್ರಕಟಿಸಿದ್ದಾರೆ !

ಭಾರತೀಯ ರೈಲ್ವೆಯೊಂದಿಗೆ ಈ ರೀತಿಯ ಸಿನಿಕ ವರ್ತನೆ ಸಲ್ಲ, ಭಾರತೀಯ ಜನತೆ ಇದಕ್ಕೆ ಅವಕಾಶವನ್ನೂ ಕೊಡಬಾರದು. ಭಾರತೀಯ ರೈಲು ಜಾಲ ನಮ್ಮ ದೇಶದ ಜನತೆಯ ಜೀವಸೆಲೆ. ಅದರ ಸುರಕ್ಷಿತತೆಯ ಬಗ್ಗೆ ಇಂತಹ ಸಡಿಲ ವರ್ತನೆ ಆ ಜೀವಸೆಲೆಯನ್ನೇ ಇಂಗಿಸಿ ಬಿಡುತ್ತದೆ. ಈ ಯುಪಿಎ–2 ಸರಕಾರ ನೆಟ್ಟಗೆ ನಿಂತು ಭಾರತೀಯ ರೈಲ್ವೆಯನ್ನು ತಮ್ಮ ರಾಜಕೀಯ ಗುರಿಸಾಧನೆಗಾಗಿ ಬಳಸಿಕೊಳ್ಳುವವರ ಸುಪರ್ದಿಗೆ ವಹಿಸದೆ, ಅದನ್ನು ನಡೆಸಬಲ್ಲ ಬದ್ಧತೆ ಮತ್ತು ಸಾಮರ್ಥ್ಯ ಇರುವವರ ಕೈಗಳಿಗೆ ಒಪ್ಪಿಸಬೇಕಾಗಿದೆ.

ಕೊನೆಯದಾಗಿ, ಈ ಅಪಘಾತಗಳ ಆಮೂಲಾಗ್ರ ತನಿಖೆ ನಡೆಸಬೇಕು, ಅವು ಮಾನವ ತಪ್ಪಿನಿಂದ ನಡೆದಿದ್ದರೆ ತಪ್ಪಿತಸ್ಥರನ್ನು ಗುರುತಿಸಿ ಅದು ಮತ್ತೊಮ್ಮೆ ಸಂಭವಿಸದಂತೆ ಮಾಡುವ ಶಿಕ್ಷೆಯನ್ನು ಅವರಿಗೆ ವಿಧಿಸಬೇಕು ಎಂದು ಬೇರೆ ಹೇಳಬೇಕಾಗಿಲ್ಲ. ಇಲಾಖಾ ತನಿಖೆಗಳಿಂದೇನೂ ಆಗದು. ದೇಶದ ಮತ್ತು ಜನತೆಯ ಹಿತದೃಷ್ಟಿಯಿಂದ ಇದನ್ನು ನಡೆಸಲೇಬೇಕು.

ಶಿಕ್ಷಣ ಸಚಿವರ ಉದ್ಧಟತನಕ್ಕೆ ಸಿಪಿಐ(ಎಂ)ಖಂಡನೆ

ಭಗವತದ್ಗೀತೆ ಅಭಿಯಾನ ವಿರೋಧಿಸುವವರು ದೇಶ ಬಿಡಲಿ ಎಂಬಂತಹ ಮಾತನಾಡಿದ ಪ್ರಾಥಮಿಕ , ಪ್ರೌಢಶಿಕ್ಷಣ ವಿಶ್ವೇಶ್ವರ ಸಚಿವ ಹೆಗಡೆ ಕಾಗೇರಿಯರ ಹೇಳಿಕೆ ಉದ್ಧಟತನದ್ದು ಎಂದು ಸಿ.ಪಿ.ಐ(ಎಂ) ತೀವ್ರವಾಗಿ ಖಂಡಿಸಿತ್ತು.

ಬೆಂಗಳೂರಿನಲ್ಲಿ ಜುಲೈ 15ರಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಸಿ.ಪಿ.ಐ(ಎಂ) ರಾಜ್ಯ ಸೆಕ್ರಟಾರಿಯೇಟ್ ಸದಸ್ಯರುಗಳಾದ ಜಿ.ಎನ್.ನಾಗರಾಜ್, ನಿತ್ಯಾನಂದಸ್ವಾಮಿ, ಎಸ್.ವೈ.ಗುರುಶಾಂತ ಮಾತನಾಡಿದರು. ಭಗವದ್ಗೀತೆಯ ಬಗ್ಗೆ ಯಾರೂ ಚರ್ಚೆ, ವಿಶ್ಲೇಷಣೆ ಮಾಡಬಾರದು, ಭಗವದ್ಗೀತೆಯನ್ನು ಎಲ್ಲರೂ ಒಪ್ಪಬೇಕೆಂಬ ಸಚಿವರ ಫರ್ಮಾನನ್ನು ಅವರು ತೀವ್ರವಾಗಿ ಟೀಕಿಸಿದರು. ಸಿ.ಪಿ.ಐ.(ಎಂ) ಇದು ಫ್ಯಾಸಿಸ್ಟ್ ಮನೋಭಾವ ಎಂದಿತು. ಯಾವುದೂ ವಿಮರ್ಶಾತೀತವಲ್ಲ. ಗೀತೆಯ ಬಗ್ಗೆ ನಮ್ಮ ದೇಶದಲ್ಲಿಯೇ ಹಲವಾರು ಟೀಕೆ. ವಿಶ್ಲೇಷಣೆಗಳನ್ನು ಮಾಡಲಾಗಿದೆ. ಸ್ವತಃ ಸ್ವಾಮಿ ವಿವೇಕಾನಂದರೇ ಗೀತೆಯನ್ನು ವಿಮರ್ಶೆಗೆ ಒಳಪಡಿಸಿದ್ದಾರೆ. ಹಿಂದೂಧರ್ಮದ ಭಾಗವೆನ್ನುವ ಹಲವಾರು ಧಾರ್ಮಿಕ ಪಂಥಗಳು ಗೀತೆಯನ್ನು ಒಪ್ಪಿಲ್ಲ. 8ನೇ ಶತಮಾನದಲ್ಲಿ ಶಂಕರಾಚಾರ್ಯರು ಭಗವದ್ಗೀತೆಯನ್ನು ಪ್ರಚಾರಕ್ಕೆ ತರುವ ಮೊದಲು ಅದು ಹೆಚ್ಚು ಬೆಳಕಿಗೆ ಬಂದಿರಲಿಲ್ಲ. ದ್ವೈತ ಅದ್ವೈತದ ಮುಂತಾದ ಪಂಥಗಳು ತಮ್ಮದೇ ದೃಷ್ಟಿಯಲ್ಲಿ ವ್ಯಾಖ್ಯಾನಿಸಿವೆ. ಹಾಗಾಗಿ ಯಾವುದೋ ಒಂದೇ ಮಠದ ವಿಶ್ಲೇಷಣೆಯೇ ಭಗವದ್ಗೀತೆಯ ಏಕೈಕ ವಿಶ್ಲೇಷಣೆ ಅಲ್ಲ ಎಂಬುದನ್ನು ಅರಿಯಲಿ ಎಂದು ಹೇಳಿತು.

'ಇದು ಪ್ರಜಾ ಪ್ರಭುತ್ವ ದೇಶ, ಅದರಂತೆಯೇ ಕಾಗೇರಿಯವರು, ಬಿಜೆಪಿಯವರು ಅಧಿಕಾರದಲ್ಲಿ ಅಧಿಕಾರಕ್ಕೇರಿದ್ದಾರೆ. ವಿದೇಶದ ಈ ವಿಚಾರದಿಂದಾಗಿ ಅವರಿಲ್ಲಿದ್ದಾರೆ. ಹಾಗಾದರೆ ದೇಶ ಬಿಟ್ಟು ತೊಲಗಬೇಕಾದವರು ಅವರಲ್ಲವೇ? ಎಂದು ಖಾರವಾಗಿ ಪ್ರಶ್ನಿಸಲಾಯಿತು.

'ಸರ್ಕಾರವು ನಂಬಿರುವ ಧರ್ಮ, ಸಂಸ್ಕೃತಿಗೆ ಬೆಂಬಲಿಸಲು ಮಠಮಾನ್ಯಗಳಿಗೆ ಹಣ ಕೊಡುತ್ತೇವೆ ಎಂಬ ಸಚಿವರ ಮಾತು ಸಂವಿಧಾನ ವಿರೋಧಿಯಾಗಿದೆ. ಯಾವುದೇ ಧರ್ಮದಲ್ಲಿನ ನಂಬಿಕೆ ಜಾತ್ಯತೀತ ಪ್ರಜಾ ಪ್ರಭುತ್ವದ ಲಕ್ಷಣವಲ್ಲ. ಸಾರ್ವಜನಿಕ ಹಣವನ್ನು ಅದರ ಪ್ರಚಾರಕ್ಕೆ ಬಳಸುವಂತಿಲ್ಲ ಎಂದು ಸಂವಿಧಾನ ಸ್ಪಷ್ಟಪಡಿಸಿದೆ. ಇದನ್ನೇ ಉಲ್ಲಂಘಿಸುತ್ತಿದ್ದಾರೆ.

2ಜಿ ಹಗರಣಕ್ಕೆ ಸಂಬಂಧಪಟ್ಟಂತೆ ಯುಪಿಎ-1 ದೂರಸಂಪರ್ಕ ಮಂತ್ರಿಯಾಗಿದ್ದ ಯುಪಿಎ-2 ಜವಳಿ ಮಂತ್ರಿ ಹೊರಗಟ್ಟಲ್ಪಟ್ಟ ನಂತರ ನಡೆಸಿದ ಸಂಪುಟ ಪುನರ್ರಚನೆ ಯುಪಿಎ-2 ಸರಕಾರದ ಇಮೇಜನ್ನೇನೂ ಶುಭ್ರಗೊಳಿಸಿಲ್ಲ, ಬದಲಿಗೆ ಅದರ ನಿಷ್ಕ್ರಿಯತೆಯನ್ನು ಮತ್ತೆ ಎತ್ತಿ ತೋರಿದೆ.

- ಈ ನಡುವೆ 'ದಕ್ಷತೆ'ಯ ಹೆಸರಿನಲ್ಲಿ ನಡೆದ ಪುನರ್ರಚನೆಯ ಎರಡೇ ದಿನಗಳಲ್ಲಿ ಮತ್ತೆ ಮೂರು ಸ್ಫೋಟಗಳು ಮುಂಬೈ ಮಹಾನಗರಿಯನ್ನು ಅಲುಗಾಡಿಸಿರುವುದು 26/11 ರ ನಂತರ ಭಯೋತ್ಪಾದನೆ ನಿಗ್ರಹದ ಹೆಸರಿನಲ್ಲಿ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡಿರುವ ಯುಪಿಎ-2 ಮತ್ತು ಪುನರ್ರಚನೆಯಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡಿರುವ ಅದರ ಗೃಹಮಂತ್ರಿಗಳ 'ದಕ್ಷತೆ' ಎಂತಹುದು ಎಂಬ ಪ್ರಶ್ನೆಯನ್ನು ಎತ್ತಿದೆ.
- ಈ ನಡುವೆ 2ಜಿ ಹಗರಣದ ತನಿಖೆ ಮುಂದುವರೆದಿದ್ದು ಯುಪಿಎ ಹಣಕಾಸು ಮಂತ್ರಿಗಳೂ ಎ.ರಾಜ ಅವರ 'ಕ್ರಮ'ಗಳಿಗೆ ಸಮ್ಮತಿ ಸೂಚಿಸಿದ್ದರು ಎಂದು ಬಯಲಾಗಿದೆ; ಜಾರಿ ನಿರ್ದೇಶನಾಲಯ ಎಟಿಸಲಾಟ್ ಕಂಪನಿಯ ಮೇಲೆ ವಿದೇಶಿ ನೇರ ಹೂಡಿಕೆಯ ವಿಧಿ-ವಿಧಾನಗಳನ್ನು ಉಲ್ಲಂಘಿಸಿದ್ದಕ್ಕಾಗಿ ಈಗ 7528 ಕೋಟಿ ರೂ.ಗಳ ದಂಡ ವಿಧಿಸಿದೆ. ಎಸ್-ಬ್ಯಾಂಡ್ ಹಗರಣದ ಪಾತ್ರಧಾರಿ ದೇವಸ್ ಕಾರ್ಪೊರೇಶನ್ ಯುಪಿಎ-2 ಸರಕಾರ ಅಂತರಿಕ್ಷ ಕಾರ್ಪೊರೇಶನ್‌ನೊಂದಿಗಿನ ಒಪ್ಪಂದವನ್ನು ರದ್ದು ಮಾಡಿರುವ ವಿರುದ್ಧ ಅಂತರ್ರಾಷ್ಟ್ರೀಯ ಪಂಚಾಯ್ತಿ ನ್ಯಾಯಾಲಯದ ಮೊರೆ ಹೋಗಿದೆ.
- ಕಪ್ಪು ಹಣ ಮತ್ತು ಸಲ್ವಾ ಜುಡುಂ ವಿಷಯದಲ್ಲಿ ಸುಪ್ರಿಂ ಕೋರ್ಟಿನ ಚಾಟಿಯೇಟುಗಳಿಂದ ಕುಪಿತಗೊಂಡಿರುವ ಯುಪಿಎ-2 ಸರಕಾರ ಈ ಎರಡೂ ತೀರ್ಪುಗಳ ಮರು ವಿಮರ್ಶೆಗೆ ಅರ್ಜಿ ಹಾಕುವ ಬಗ್ಗೆ ಯೋಚಿಸುತ್ತಿದೆಯಂತೆ.




ವೇದರಾಜ ಎಸ್.ಕೆ.

ಯುಪಿಎ-2 ಸಂಪುಟ ಪುನರ್ರಚನೆ: 'ಸಮಗ್ರ' ಮತ್ತು 'ಕೊನೆಯದ್ದು' ಎಂದರಾ ಪ್ರಧಾನಿ

ಯುಪಿಎ-2 ಸಂಪುಟದ ಬಹು ನಿರೀಕ್ಷಿತ ಪುನರ್ರಚನೆ ಈ ವಾರ ನಡೆದಿದೆ. ಪ್ರಧಾನ ಮಂತ್ರಿಗಳು ಇದೊಂದು ಸಮಗ್ರ ಪುನರ್ರಚನೆ ಎಂದು ಬೆನ್ನು ತಟ್ಟಿಕೊಂಡಿದ್ದಾರೆ. ಸಂಪುಟ ದರ್ಜೆಯ ಮಂತ್ರಿಗಳ ಸಂಖ್ಯೆಯಲ್ಲಿ ನಾಲ್ಕು ಹೆಚ್ಚಳವಾಗಿದೆ. ನಾಲ್ಕು ರಾಜ್ಯ ದರ್ಜೆಯ ಮಂತ್ರಿಗಳಿಗೆ ಸ್ವತಂತ್ರ ಜವಾಬ್ದಾರಿಗಳನ್ನು ಕೊಡಲಾಗಿದೆ. ಹೊಸದಾಗಿ ಐವರನ್ನು ರಾಜ್ಯದರ್ಜೆಯ ಮಂತ್ರಿಗಳಾಗಿ ಸೇರಿಸಿಕೊಳ್ಳಲಾಗಿದೆ.

ಹಗರಣಗಳಿಂದ ತತ್ತರಿಸಿ ಹೋಗಿರುವ ತಮ್ಮ ಸಂಪುಟದ ಪುನರ್ರಚನೆಯ ಮೂಲಕ ಪ್ರಧಾನ ಮಂತ್ರಿಗಳು ತಮ್ಮ ಸಂಪುಟದ ಇಮೇಜನ್ನು ಉತ್ತಮ ಪಡಿಸುವ ದಿಟ್ಟ ಪ್ರಯತ್ನ ನಡೆಸುತ್ತಾರೆ ಎಂಬ ಹಲವರ ನಿರೀಕ್ಷೆ ಸುಳ್ಳಾಗಿದೆ, ಈ ಸಂಪುಟ ಪುನರ್ರಚನೆಯೂ ಯುಪಿಎ-2 ಸರಕಾರದ ನಿಷ್ಕ್ರಿಯತೆಗೆ ಇನ್ನೊಂದು ಸಾಕ್ಷಿ ಒದಗಿಸಿದೆ ಎಂದು ಹಲವು ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ. ಸಂಪುಟ ಪುನರ್ರಚನೆಯ ಬಗ್ಗೆ ಇಬ್ಬರು ಕಾಂಗ್ರೆಸ್ ಮಂತ್ರಿಗಳೇ ತಮ್ಮ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ, ಅವರಲ್ಲಿ ಒಬ್ಬರಂತೂ ರಾಜೀನಾಮೆಯನ್ನೇ ಕೊಟ್ಟಿದ್ದಾರೆ. ಒಬ್ಬ ಸಂಪುಟ ದರ್ಜೆಯ ಮಂತ್ರಿಗಳು ಯಾರದೋ ತಪ್ಪಿಗೆ ತಾನು ಶಿಕ್ಷೆ ಅನುಭವಿಸಬೇಕಾಗಿ ಬಂದಿದೆ ಎಂದು ಅಳಲು ವ್ಯಕ್ತಪಡಿಸಿದ್ದಾರೆ.

ಪ್ರಧಾನಿಗಳು ಮಾತ್ರ ಇದು ದಕ್ಷತೆಯನ್ನು, ಮುಂದುವರಿಕೆಯನ್ನು ಮತ್ತು ವಿವಿಧ ರಾಜ್ಯಗಳ ನಡುವಿನ ಸಮತೋಲನವನ್ನು ಪರಿಗಣಿಸಿ ಮಾಡಿರುವ ಪುನರ್ರಚನೆ ಎಂದಿದ್ದಾರೆ. ಪರಿಸರ ಇಲಾಖೆಯಲ್ಲಿ ಬಹಳ ಸದ್ದು ಮಾಡುತ್ತಿದ್ದ ಜಯರಾಂ ರಮೇಶ್‌ರಿಗೆ ಸಂಪುಟ ದರ್ಜೆಗೆ


ಕೃಪೆ : ಸುಧಾ

ಬಡ್ತಿ ನೀಡಿದ್ದರೂ ಗ್ರಾಮೀಣಾಭಿವೃದ್ಧಿ ಇಲಾಖೆಗೆ ವರ್ಗಾಯಿಸಿದ್ದರಲ್ಲಾಗಲೀ, ಮೊಯಿಲಿಯವರನ್ನು ಕಾನೂನು ಇಲಾಖೆಯಿಂದ ಕಾರ್ಪೊರೇಟ್ ಇಲಾಖೆಗೆ ಇಳಿಸಿದ್ದರಲ್ಲಾಗಲೀ ಈ ಅಂಶಗಳು ಇವೆ ಎಂಬುದನ್ನು ಬಹಳ ಮಂದಿ ನಂಬುತ್ತಿಲ್ಲ. ವಾಸ್ತವವಾಗಿ ಮೊಯಿಲಿಯವರ ಖಾತೆ ಬದಲಾವಣೆಗೆ 2ಜಿ, ಕಪ್ಪು ಹಣದ ತನಿಖೆ ಇತ್ಯಾದಿಗಳಲ್ಲಿ ಯುಪಿಎ-2 ಕ್ಕೆ ಸುಪ್ರಿಂ ಕೋರ್ಟಿನಲ್ಲಿ ಸಿಕ್ಕಿರುವ ಚಾಟಿಯೇಟುಗಳು ಕಾರಣ ಎನ್ನಲಾಗುತ್ತಿದೆ. ಅಷ್ಟೇ ಏಕೆ, ಸರಕಾರದ ಪ್ರಮುಖ ಕಾನೂನು ಪ್ರತಿನಿಧಿ ಅಂದರೆ ಸಾಲಿಸಿಟರ್ ಜನರಲ್ ಗೋಪಾಲ ಸುಬ್ರಮಣ್ಯಂ ರಾಜೀನಾಮೆ ಕೊಡುವಂತಹ ಪರಿಸ್ಥಿತಿ ನಿರ್ಮಾಣವಾದ್ದೂ ಕೂಡ ಕಪ್ಪು ಹಣದಲ್ಲಿ ಸುಪ್ರಿಂ ಕೋರ್ಟ್ ಯುಪಿಎ-2 ಸರಕಾರಕ್ಕೆ ನೀಡಿದ ಚಾಟಿಯೇಟು ಕಾರಣ ಎನ್ನಲಾಗಿದೆ. ಈ ಹುದ್ದೆಯ ಘನತೆಯನ್ನು ಉಳಿಸಲು ತಾನು ರಾಜೀನಾಮೆ ನೀಡಿರುವುದಾಗಿ ಅವರು ಹೇಳಿದ್ದಾರೆ. ಈಬಗ್ಗೆ ಪ್ರಧಾನ ಮಂತ್ರಿಗಳು ನಿರ್ಣಯ ಕೈಗೊಳ್ಳಲಿದ್ದಾರೆ ಎಂದು ಒಂದು ವಾರದಿಂದ ಸುದ್ದಿಗಳು ಬರುತ್ತಿವೆ, ನಿರ್ಧಾರ ಮಾತ್ರ ಇನ್ನೂ (ಈ ಸಂಚಿಕೆ ಮುದ್ರಣಕ್ಕೆ ಹೋಗುವವರೆಗೆ) ಬಂದಿಲ್ಲ

ಇಷ್ಟೇ ಅಲ್ಲ, ಪ್ರಧಾನಿಗಳು ಇನ್ನು ಮುಂದೆ ಮುಂದಿನ ಚುನಾವಣೆಗಳ ಮೊದಲು ಯಾವುದೇ ಸಂಪುಟ ಪುನರ್ರಚನೆಯಿರುವುದಿಲ್ಲ ಎಂದೂ ಹೇಳಿರುವುದು ಹಲವರಿಗೆ ಆಶ್ಚರ್ಯ ಉಂಟು ಮಾಡಿದೆ. ಎರಡು ವರ್ಷಗಳಲ್ಲೇ ಹಲವು ಮಂತ್ರಿಗಳು ಕುರ್ಚಿ ಬಿಡಬೇಕಾಗಿ ಬಂದಿರುವ ಒಂದು ಸಂಪುಟದಲ್ಲಿ ಮುಂದಿನ ಮೂರು ವರ್ಷ ಯಾವುದೇ ಬದಲಾವಣೆ ಇರುವುದಿಲ್ಲ ಎಂಬುದನ್ನು ಬಹುಮಂದಿ ನಂಬಲಾರದ ಸನ್ನಿವೇಶದಲ್ಲಿ ಮುಂದಿನ ಸಾರ್ವತ್ರಿಕ ಚುನಾವಣೆಗಳು 2014ರ ಮೊದಲೇ ನಡೆಯಬಹುದು ಎಂಬ ಇಂಗಿತ ಇರಬಹುದೇ ಎಂಬ ಅನುಮಾನ ಹಲವರಿಗೆ. 2014ರಲ್ಲಿ ಎಂದು ಸದ್ಯಕ್ಕೆ ಪ್ರಧಾನ ಮಂತ್ರಿಗಳು ಹೇಳಿದ್ದಾರೆ.

ಈ ನಡುವೆ, ಪ್ರಧಾನ ಮಂತ್ರಿಗಳು ಈಗಿರುವ ರಾಜಕೀಯ ಪರಿಸರದಲ್ಲಿ ಅಗತ್ಯ ಅಧಿಕಾರವನ್ನು ಚಲಾಯಿಸುವಲ್ಲಿ ಅಸಮರ್ಥರಾಗಿದ್ದಾರೆ ಎಂದು ಯುಪಿಎ-1 ಆಡಳಿತದಲ್ಲಿ ಅವರ ಮಾಧ್ಯಮ ಸಲಹೆಗಾರರಾಗಿದ್ದ ಸಂಜಯ ಬರು ಹೇಳಿದ್ದಾರೆ.

ಎರಡೆರಡು ಬಾರಿ ಪಕ್ಷಾಂತರಿ ಈಗ ಯುಪಿಎ-2 ಮಂತ್ರಿ

ಇತ್ತೀಚಿನ ಯುಪಿಎ ಸಂಪುಟ ಪುನರ್ರಚನೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ರಾಜ್ಯ ಮಂತ್ರಿ ಪದವಿ ಗಿಟ್ಟಿಸಿಕೊಂಡಿರುವ ಸುದೀಪ್ ಬಂದೋಪಾಧ್ಯಾಯ ತೃಣಮೂಲ ಕಾಂಗ್ರೆಸಿನ ಸ್ಥಾಪಕ ಸದಸ್ಯರಲ್ಲಿ ಒಬ್ಬರು. ಆದರೆ ಮಂತ್ರಿಯಾಗುವ ಮೊದಲು ಎರಡೆರಡು ಬಾರಿ ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ ನಡುವೆ ಅಡ್ಡಾಡಿದ ಮಹಾನುಭಾವ.

ಇವರನ್ನು 1997ರಲ್ಲಿ ಮಮತಾ ಬ್ಯಾನರ್ಜಿಯವರೊಂದಿಗೆ ಕಾಂಗ್ರೆಸಿನಿಂದ ಉಚ್ಚಾಟಿಸಲಾಯಿತು. 1998ರಲ್ಲಿ ಮೊದಲ ಬಾರಿಗೆ ತೃಣಮೂಲ ಕಾಂಗ್ರೆಸ್ ಟಿಕೆಟಿನಲ್ಲಿ ಲೋಕಸಭೆ ಪ್ರವೇಶ. 2004ರಲ್ಲಿ ಆತನಿಗೆ ತೃಣಮೂಲ ಕಾಂಗ್ರೆಸ್ ಟಿಕೆಟ್ ನಿರಾಕರಿಸಲಾಯಿತು, ಏಕೆಂದರೆ ಈ ನಡುವೆ ಎನ್‌ಡಿಎ ಸರಕಾರದಲ್ಲಿ ಮಂತ್ರಿಯಾಗಲು ಬಿಜೆಪಿಯೊಂದಿಗೆ ಶಾಮೀಲಾಗಿದ್ದರಂತೆ. 'ಎದೆಗುಂದದ' ಆತ ಕಾಂಗ್ರೆಸ್ ಬೆಂಬಲಿತ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದರು, ಸೋತರು. ನಂತರ ತೃಣಮೂಲ ಕಾಂಗ್ರೆಸಿನಿಂದ ಉಚ್ಚಾಟನೆ. 'ವಿಧಿವತ್ತಾಗಿ' ಕಾಂಗ್ರೆಸ್ ಸೇರ್ಪಡೆ. ಮತ್ತೆ 2008ರಲ್ಲಿ ತೃಣಮೂಲ ಕಾಂಗ್ರೆಸಿನತ್ತ ಪಯಣ. 2009ರಲ್ಲಿ ಮತ್ತೆ ಉತ್ತರ ಕೊಲ್ಕತಾ ಕ್ಷೇತ್ರದಿಂದ ತೃಣಮೂಲ ಲೋಕಸಭಾ ಸದಸ್ಯ.

ಭಾರತ ಈಗ ಅಲಿಪ್ತ ದೇಶವಲ್ಲ- ಅಮೆರಿಕಾದ ಕಣ್ಣಲ್ಲಿ!

'ಭಾರತ ಈಗ ಒಂದು ಅಲಿಪ್ತ ದೇಶವಾಗಿ ಉಳಿದಿಲ್ಲ ಎಂದು ನಾನು ಪರಿಗಣಿಸುತ್ತೇನೆ. ಅದು 9/11ರ ನಂತರ ನಿಜವಾಗಿಯೂ ಬದಲಾಯಿತು, ಅಮೆರಿಕಾದೊಂದಿಗೆ ತನಗೆ ವ್ಯಾಪಕವಾದ ಸಮಾನ ಹಿತಾಸಕ್ತಿಗಳು ಇವೆ ಎಂದು ಭಾರತಕ್ಕೆ ಅರಿವಾಗಿದೆ ಎಂದು ನನಗನಿಸುತ್ತಿದೆ' ಎಂದಿದ್ದಾರೆ ಅಮೆರಿಕನ್ ವಿದೇಶಾಂಗ ಸಹಾಯಕ ಕಾರ್ಯದರ್ಶಿ ರಾಬರ್ಟ್ ಬ್ಲೇಕ್. ಅವರು ಈ ತಿಂಗಳ ಕೊನೆಯಲ್ಲಿ ಭಾರತ ಮತ್ತು ಅಮೆರಿಕಾ ನಡುವೆ ನಡೆಯಲಿರುವ 'ಆಯಕಟ್ಟಿನ ಸಂವಾದ'ದ ಹಿನ್ನೆಲೆಯಲ್ಲಿ ಇದನ್ನು ಹೇಳಿದ್ದಾರೆ.

ಆದರೆ ಭಾರತ ಮತ್ತು ಅಮೆರಿಕಾ ಸಾಂಪ್ರದಾಯಿಕ ಅರ್ಥದಲ್ಲಿ ಮಿತ್ರರು ಎಂದೂ ಹೇಳುವಂತಿಲ್ಲವಂತೆ! ಇದೂ ಅವರದ್ದೇ ಅನಿಸಿಕೆ. ಅಮೆರಿಕಾದೊಂದಿಗೆ 'ಆಯಕಟ್ಟಿನ ಸಂಬಂಧಗಳ' ರೂವಾರಿ ಯುಪಿಎ ಪ್ರಧಾನಿಗಳು ಇದನ್ನೂ ಸರ್ಟಿಫಿಕೇಟ್ ಎಂದು ಬಾಚಿಕೊಳ್ಳುತ್ತಾರೆಯೇ, ಗೊತ್ತಾಗಿಲ್ಲ.

★

ಮತ್ತೆರಡು ರೈಲು ದುರಂತ: ಹೊಸ ರೈಲು ಮಂತ್ರಿಗೆ ಧಿಕ್ಕಾರ

ಕಳೆದ ಭಾನುವಾರ, ಜುಲೈ 10ರಂದು ಮತ್ತೆ ಎರಡು ರೈಲು ಅಪಘಾತಗಳು 60ಕ್ಕೂ ಹೆಚ್ಚು ಪ್ರಯಾಣಿಕರನ್ನು ಬಲಿ ತೆಗೆದುಕೊಂಡಿವೆ. ಮುನ್ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಹೌರಾ-ದಿಲ್ಲಿ ಕಾಲ್ಕಾ ಮೇಲ್‌ನ ಹಲವು ಬೋಗಿಗಳು ಉತ್ತರ ಪ್ರದೇಶದ

ಪುಟ 15ಕ್ಕೆ

ಜಗದಗಲ

ಶರತ್‌ಚಂದ್ರ

ಮುರ್ಡೋಕ್ ಪತ್ರಿಕಾ ಸಾಮ್ರಾಜ್ಯಕ್ಕೆ ಶಾಕ್!

"ಸೂರ್ಯ ಮುಳುಗದ" ಮುರ್ಡೋಕ್ ಮಾಧ್ಯಮ ಸಾಮ್ರಾಜ್ಯದ ಸೂರ್ಯ ಮುಳುಗಲಾರಂಭಿಸಿದ್ದಾನೆಯೇ? ಆಸ್ಟ್ರೇಲಿಯಾದಿಂದ ಅಮೆರಿಕದವರೆಗೆ, ಬ್ರಿಟನಿನಿಂದ ಇಂಡಿಯಾವರೆಗೆ ರೂಪರ್ಟ್ ಮುರ್ಡೋಕ್ ಮಾಧ್ಯಮ ಸಾಮ್ರಾಜ್ಯ ಹಬ್ಬಿದೆ. ಆತ ಮನಸ್ಸು ಮಾಡಿದರೆ ಯಾರನ್ನೂ ಅಧಿಕಾರಕ್ಕೆ ತರಬಲ್ಲ. ಯಾವ ಸರ್ಕಾರವನ್ನೂ ಉರುಳಿಸಬಲ್ಲ. ಅವನು ಮುಟ್ಟಿದ್ದೆಲ್ಲಾ ಚಿನ್ನ ಎಂಬ ಖ್ಯಾತಿ ಹೊಂದಿದ್ದ ಮುರ್ಡೋಕ್ ಮೊದಲ ಬಾರಿಗೆ ಸೋಲು ಕಂಡಿದ್ದಾನೆ. ತೀವ್ರ ಭ್ರಷ್ಟಾಚಾರ ಮತ್ತು ಕ್ರಿಮಿನಲ್ ಆಪಾದನೆ ಎದುರಿಸಿದ ಆತನ ಒಡೆತನದ ಬ್ರಿಟಿಷ್ ಪತ್ರಿಕೆ "ನ್ಯೂಸ್ ಆಫ್ ದಿ ವರ್ಲ್ಡ್" ಮುಚ್ಚಬೇಕಾಗಿ ಬಂದಿದೆ. ಅವನ ಜತೆಗೆ ನಿಕಟ ಸಂಬಂಧ ಹೊಂದಿದ್ದ ಬ್ರಿಟಿಷ್ ರಾಜಕೀಯ ನಾಯಕರು, ಅಧಿಕಾರಿಗಳೂ ತಲೆ ತಗ್ಗಿಸಬೇಕಾಗಿ ಬಂದಿದೆ. ಈಗಿನ ಪ್ರಧಾನಿ ಕೆಮರೂನ್ ಅವರ ಮುಖ್ಯ ಮಾಧ್ಯಮ ಅಧಿಕಾರಿಯಾಗಿದ್ದ ಈ ಪತ್ರಿಕೆಯ ಮಾಜಿ ಸಂಪಾದಕ ಆಂಡಿ ಕೌಲ್ಸನ್ ನನ್ನು ಪೋಲೀಸರು ಬಂಧಿಸಿದ್ದಾರೆ. ಈ ಪತ್ರಿಕೆಯ ಬ್ರಿಟಿಷ್ ಅರಮನೆಯ ವಿಶೇಷ ವರದಿಗಾರ ಆಗಿದ್ದ ಕ್ಲೈವ್ ಗುಡಮನ್ ನನ್ನು 2007 ರಲ್ಲೇ ಬಂಧಿಸಲಾಗಿತ್ತು.

168 ವರ್ಷದಷ್ಟು ಹಳೆಯ "ನ್ಯೂಸ್ ಆಫ್ ದಿ ವರ್ಲ್ಡ್" ಭಾನುವಾರದ ಪತ್ರಿಕೆ ಹಿಂದಿನಿಂದಲೂ ಕ್ರೈಮ್, ಸೆಕ್ಸ್ ಕೆರಳಿಸುವ, ಪ್ರತಿಷ್ಟಿತರ ಖಾಸಗಿ ಜೀವನದ ರಸಭರಿತ ಸುದ್ದಿ ವರದಿಗಳ ಮೂಲಕ 'ಜನಪ್ರಿಯ'ವಾಗಿತ್ತು. ಅದರ ಪ್ರಸಾರ 80 ಲಕ್ಷದವರೆಗೆ ಏರಿತ್ತು. ಕೆಲ ಮಟ್ಟಿನ ಸಾರ್ವಜನಿಕ ಹಿತಾಸಕ್ತಿಯ ತನಿಖಾ ವರದಿಗಳನ್ನು ಬಿಟ್ಟರೆ, ಕೀಳು ಅಭಿರುಚಿಯ ಪತ್ರಕಾರಿಕೆಗೆ ಕುಪ್ರಸಿದ್ಧವಾಗಿತ್ತು. ಮುರ್ಡೋಕ್ ಈ ಪತ್ರಿಕೆ ವಹಿಸಿಕೊಂಡ ಮೇಲೆ ಕೋತಿಗೆ ಕಳ್ಳು ಕುಡಿಸಿದಂಗೆ ಆಗಿತ್ತು. ಲಂಡನ್ ಮೆಟ್ರೋದಲ್ಲಿ 2005 ರ ಭಯೋತ್ಪಾದಕ ದಾಳಿ ಸೇರಿದಂತೆ ಹಲವು ಅಪರಾಧಗಳಿಗೆ ಬಲಿಯಾದವರ ಮತ್ತು ಅವರ ನಿಕಟ ಸಂಬಂಧಿಕರ ಫೋನ್, ವಾಯ್ಸ್ ಮೈಲ್ ಕದ್ದು ಆಲಿಸಿದ್ದು ಪತ್ರಿಕೆಯ ಮೇಲೆ ಮುಖ್ಯ ಆಪಾದನೆ. ಇಂತಹ ದುರಂತಗಳಿಗೆ ಒಳಗಾದವರ ಖಾಸಗಿ ಬದುಕಿನ "ಕಣ್ಣೀರಿನ" ಕಥೆಯನ್ನು ರೋಚಕವಾಗಿ ವರದಿ ಮಾಡಿ ಪ್ರಸಾರ ಹೆಚ್ಚಿಸುವುದು ಉದ್ದೇಶವಾಗಿತ್ತು. ನಮ್ಮಲ್ಲಿ "ಕಣ್ಣೀರಿನ" ಫಿಲಂಗಳು ಇದ್ದಂಗೆ, "ಕಣ್ಣೀರಿನ ಪತ್ರಗಾರಿಕೆ" ಒಂದನ್ನು ರೂಪಿಸಲಾಗಿತ್ತು. ಇತರರ ಫೋನ್ ಅಥವಾ ವಾಯ್ಸ್ ಮೈಲ್ ಕದ್ದು ಆಲಿಸುವುದು ಬ್ರಿಟಿಷ್ ಕಾನೂನು ಪ್ರಕಾರ ಅಪರಾಧ. ಇದಕ್ಕಾಗಿ ಮತ್ತು ಈ ಅಪರಾಧಗಳನ್ನು ಮುಚ್ಚಿ ಹಾಕಲು ಪೋಲೀಸ್ ಅಧಿಕಾರಿಗಳಿಗೆ ಲಂಚ ಕೊಡುವುದು, ಆಂತರಿಕ ಮೈಲ್ ಮುಂತಾದ ಪುರಾವೆಗಳನ್ನು ನಾಶ ಮಾಡುವುದು, ಈ ಅಪರಾಧಗಳ ಬಗ್ಗೆ ತನಿಖೆ ಬಗ್ಗೆ ಪಾರ್ಲಿಮೆಂಟರಿ ಸಮಿತಿಗೆ ಸುಳ್ಳು ಸಾಕ್ಷ್ಯ ಕೊಟ್ಟಿದ್ದು – ಹೀಗೆ ಅಪರಾಧಗಳ ಸರಣಿಯನ್ನೇ ನಡೆಸಿತ್ತು.

ಮುರ್ಡೋಕ್ ಸಾಮ್ರಾಜ್ಯವನ್ನು ಪ್ರಶ್ನಿಸುವವರೇ ಇಲ್ಲ. ಪ್ರಧಾನಿಯೇ ತಮ್ಮ ಜೇಬಿನಲ್ಲಿರುವಾಗ ಯಾರೂ ಏನೂ ಮಾಡುವಂತಿಲ್ಲ ಎಂದು ಬೀಗುತ್ತಿರುವಾಗಲೇ ಈ ಶಾಕ್ ಬಂದಿದೆ. ಮುರ್ಡೋಕ್ ಸಾಮ್ರಾಜ್ಯದ ಕೊಡ ತುಂಬಿದ ಹಾಗಿದೆ. ಫೋನ್ ಕದ್ದಾಲಿಕೆ ಸುದ್ದಿ ಹೊರ ಬೀಳುತ್ತಿದ್ದಂತೆ ಜನತೆಯ ತೀವ್ರ ಆಕ್ರೋಶ ವ್ಯಕ್ತವಾಯಿತು. ತಮ್ಮ ಪ್ರಸಾರ ಹೆಚ್ಚಿಸಲು ಭಯೋತ್ಪಾಕ ದಾಳಿಗೊಳಗಾದ ಮಕ್ಕಳ ದುರವಸ್ಥೆಯನ್ನು ಬಂಡವಾಳ ಮಾಡಿಕೊಂಡ ಈ ಪತ್ರಿಕೆ ಮತ್ತು ಅದರ ಮಾಲಕರು ಮತ್ತು ಸಿಬ್ಬಂದಿ ಮೇಲೆ ಜನ ಆಕ್ರೋಶ ವ್ಯಕ್ತ ಪಡಿಸಿದರು. ಜನತೆ ಆಕ್ರೋಶ ನೋಡಿ ಬೆದರಿ ತಮ್ಮ ಬ್ರಾಂಡಿಗೆ ಧಕ್ಕೆ ಬರಬಹುದೆಂದು ಹಲವು ಪ್ರತಿಷ್ಟಿತ ಕಂಪನಿಗಳು ತಮ್ಮ ಜಾಹೀರಾತು ನಿಲ್ಲಿಸಿದರು. ಜನತೆಯ ಆಕ್ರೋಶ ಪಾರ್ಲಿಮೆಂಟಿನಲ್ಲೂ ಪ್ರತಿಧ್ವನಿಸಿತು. ಮುರ್ಡೋಕ್ ಆತಂಕ ಇದ್ದಿದ್ದು ಜನತೆಯ ಆಕ್ರೋಶದ ಬಗ್ಗೆ ಅಲ್ಲ. ಈ ನಡುವೆ ಆತ ಬ್ರಿಟನಿನ ಅತಿ ದೊಡ್ಡ ಟಿವಿ ಸ್ಕೈ ಚಾನೆಲ್ ಖರೀದಿಗೆ ಹವಣಿಸುತ್ತಿದ್ದ. ಅದಕ್ಕೆ ಪಾರ್ಲಿಮೆಂಟಿನ ಅನುಮತಿ ದೊರಕಿದ್ದು ಕೆಲವೇ ಇತರ ಅನುಮತಿಗಳು ಬೇಕಾಗಿತ್ತು. ಈ ಹಗರಣದಿಂದ ಅದಕ್ಕೆ ಅಡ್ಡಿ ಆಗಬಹುದು ಅಂತ ಮುರ್ಡೋಕ್ "ನ್ಯೂಸ್ ಆಫ್ ದಿ ವರ್ಲ್ಡ್" ಪತ್ರಿಕೆಯನ್ನೇ ಬಲಿ ಕೊಡಲು ಅಣಿಯಾದ. ಜುಲೈ 10 ರದ್ದೇ ಕೊನೆಯ ಪತ್ರಿಕೆ ಎಂದ.

ಆದರೆ ಅಪರಾಧ ತನಿಖೇನೂ ಜೋರಾಗಿ ನಡೀತಿದೆ. ಸ್ಕೈ ಚಾನೆಲ್ ಖರೀದಿಗೆ ಕೊಟ್ಟಿದ್ದ ಅನುಮತಿಯನ್ನು ಪಾರ್ಲಿಮೆಂಟು ಸ್ಥಗಿತಗೊಳಿಸಿದೆ. ಮುರ್ಡೋಕ್ ಬ್ರಿಟಿಷ್ ಸಾಮ್ರಾಜ್ಯದ ಮುಖ್ಯಸ್ಥೆ (ಮತ್ತು ಈ ಅಪರಾಧಗಳು ನಡೆದಾಗಿನ ಪತ್ರಿಕೆಯ ಸಂಪಾದಕಿ) ರಾಜೀನಾಮೆ ಕೊಡಬೇಕು. ಆಕೆಯನ್ನು ಬಂಧಿಸಬೇಕು ಎಂಬ ಕೋಲಾಹಲ ನಡೆಯುತ್ತಿದೆ. ಈ ರೀತಿ ಮೊದಲ ಬಾರಿಗೆ. ಮುರ್ಡೋಕ್ ಜನತೆ ಹಾಗೂ ಸರ್ಕಾರದ ಮುಂದೆ ತಲೆ ತಗ್ಗಿಸಬೇಕಾಗಿದೆ.

ಇಟಲಿಯಲ್ಲೂ ಇತರ ಹಲವು ಬಂಡವಾಳಶಾಹಿ ದೇಶಗಳಲ್ಲೂ ಮಾಧ್ಯಮ, ಸರ್ಕಾರ ಮತ್ತು ರಾಜಕೀಯ ಪಕ್ಷಗಳ ನಡುವೆ ವ್ಯತ್ಯಾಸ ಮಾಸುತ್ತಿದ್ದು, ಈ ದುಷ್ಟಕೂಟದ ಅಪರಿಮಿತ ಅಧಿಕಾರ ಪ್ರಜಾಪ್ರಭುತ್ವಕ್ಕೆ ತೀವ್ರ ಸವಾಲಾಗುತ್ತಿದೆ. ಬ್ರಿಟನಿನಲ್ಲಿ ಮುರ್ಡೋಕ್ ಸೋಲು ಈ ಅಪಾಯಕಾರಿ ಬೆಳವಣಿಗೆಗೆ ತಡೆ ಹಾಕಿದೆ.

ಥಾಯ್ಲೆಂಡಿಗೆ ಮಹಿಳಾ ಪ್ರಧಾನಿ

ಥಾಯ್ಲೆಂಡಿನಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ವಿರೋಧ ಪಕ್ಷವಾಗಿದ್ದ ಫೂ ಥಾಯ್ 500 ಸೀಟುಗಳ ಪಾರ್ಲಿಮೆಮಂಟಿನ 265 ಸೀಟು ಗಳಿಸಿ ಬಹುಮತ ಪಡೆದಿದೆ. ಆ ಪಕ್ಷದ ನಾಯಕಿ ಯಿಂಗ್ ಲಕ್ ಶಿನಾವತ್ರ ಥಾಯ್ಲೆಂಡಿನ ಮೊತ್ತ ಮೊದಲ ಮಹಿಳಾ ಪ್ರಧಾನಿಯಾಗಿದ್ದಾರೆ. ಫೂ ಥಾಯ್ ಬಹುಮತ ಪಡೆದಿದ್ದರೂ 4 ಇತರ ಸಣ್ಣ ಪಕ್ಷಗಳ ಜತೆ ಸಮ್ಮಿಶ್ರ ಸರ್ಕಾರ ನಡೆಸಲು ಯಿಂಗ್ ಲಕ್ ಯಿಂಗ್ ನಿರ್ಧರಿಸಿದ್ದಾರೆ. ಈಗ ದುಬಾಯಿನಲ್ಲಿ ರಾಜಕೀಯ ಸ್ವಯಂ-ದೇಶಭ್ರಷ್ಟರಾಗಿರುವ ಮಾಜಿ ಪ್ರಧಾನಿ ಮತ್ತು ಸೋದರ ಥಕ್ಸಿನ್ ಶಿನಾವತ್ರ ಅವರಿಗೆ ಯಿಂಗ್ ಲಕ್ 'ಡಮ್ಮಿ' ಅಭ್ಯರ್ಥಿ ಆಗಿದ್ದರೂ, ಆಕೆಗೆ ಬಲವಾದ ಜನಬೆಂಬಲ ವ್ಯಕ್ತವಾಗಿದೆ.

ಕಳೆದ ಹಲವು ತಿಂಗಳುಗಳಿಂದ ರಾಜಕೀಯ ಅಸ್ಥಿರತೆ ಅನುಭವಿಸುತ್ತಿರುವ ಥಾಯ್ಲೆಂಡಿನಲ್ಲಿ ಚುನಾವಣೆಯ ನಂತರ ಸ್ಥಿರತೆ ನೆಲೆಸುವುದೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ. ವಿರೋಧ ಪಕ್ಷಗಳು, ಮಿಲಿಟರಿ ಮತ್ತು ರಾಜ ಸಹ ಜನಾದೇಶ ಮನ್ನಿಸಿ ಯಿಂಗ್ ಲಕ್ ಸರ್ಕಾರ ಅಸ್ಥಿರಗೊಳಿಸುವ ಯಾವುದೇ ಕ್ರಮ ಕೈಗೊಳ್ಳದಿದ್ದರೆ ಮಾತ್ರ ಅದು ಸಾಧ್ಯ. ಆದರೆ ಈಗಾಗಲೇ ಚುನಾವಣಾ ಕಮಿಶನ್ ಚುನಾವಣಾ ದೂರುಗಳನ್ನು ಪರಿಶೀಲಿಸಿ ಒಂದು ತಿಂಗಳೊಳಗೆ ವರದಿ ಕೊಡುವುದಾಗಿ ಹೇಳಿದೆ. ದೇಶದ ಆರ್ಥಿಕ ಮತ್ತಿತರ ಸಮಸ್ಯೆಗಳ ಪರಿಹಾರದ ಬಗ್ಗೆ ಗಮನ ಹರಿಸುವ ಬದಲು, ಸೋದರನ ದೇಶಭ್ರಷ್ಟತೆ ತಪ್ಪಿಸಲು ಕಾನೂನು ಬದಲಾವಣೆಗೆ ಹೊಸ ಪ್ರಧಾನಿ ಒತ್ತು ಕೊಡುವುದಿಲ್ಲ ಎಂದು ಆಶಿಸಲಾಗಿದೆ. ಥಕ್ಸಿನ್ ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಅಧಿಕಾರ ಕಳೆದು ಕೊಂಡಿದ್ದರು. ಅವರ ಮೇಲೆ ಮಿಲಿಟರಿ ಸರ್ಕಾರ ಭ್ರಷ್ಟಾಚಾರದ ಆಪಾದನೆ ತಂದಾಗ, ಆತ ದೇಶ ಬಿಟ್ಟು ಹೋಗಿದ್ದ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಥಕ್ಸಿನ್ ಸಹ ದುಬಾಯಿಯಿಂದ "ರಿಮೋಟ್ ಕಂಟ್ರೋಲ್" ಮೂಲಕ ಸರ್ಕಾರ ನಿಯಂತ್ರಿಸುವ ಬದಲು ಯಿಂಗ್ ಲಕ್‌ಗೆ ಆಡಳಿತ ನಡೆಸಲು ಬಿಡಬೇಕಾಗಿದೆ.



7.5 ಲಕ್ಷ ಬ್ರಿಟಿಷ್ ಕಾರ್ಮಿಕರ ಸಾರ್ವತ್ರಿಕ ಮುಷ್ಕರ



ಜೂನ್ 30 ರಂದು ಬ್ರಿಟಿಷ್ ಸಾರ್ವಜನಿಕ ವಲಯದ 7.5 ಲಕ್ಷ ಕಾರ್ಮಿಕರ ಸಫಲ ಸಾರ್ವತ್ರಿಕ ಮುಷ್ಕರ ಇತ್ತೀಚಿನ ಅವಧಿಯಲ್ಲಿ ನಡೆದ ಅತಿ ದೊಡ್ಡ ಮುಷ್ಕರ. ಅಂದು ಸಾರ್ವಜನಿಕ ಮತ್ತು ನಾಗರಿಕ ಸೇವಾ ಕಾರ್ಮಿಕರ ಯೂನಿಯನ್, ನೇಶನಲ್ ಟೀಚರ್ಸ್ಮ ಯೂನಿಯನ್, ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಅಧ್ಯಾಪಕರ ಯೂನಿಯನುಗಳು ಮುಷ್ಕರಕ್ಕೆ ಕರೆ ನೀಡಿದ್ದವು. ಮುಖ್ಯವಾಗಿ ಸಾರ್ವಜನಿಕ ವಲಯದ ಕಾರ್ಮಿಕರ ಪೆಂಶನ್ ಸವಲತ್ತುಗಳನ್ನು ಮೊಟಕು ಮಾಡುವುದರ ವಿರುದ್ಧ ಮುಷ್ಕರ ಹೂಡಲಾಗಿದೆ. ಮುಷ್ಕರ ಸಫಲವಾಗಿದ್ದು ಸ್ಕೂಲು ಕಾಲೇಜುಗಳು ಬಂದಾಗಿದ್ದವು, ಹೆಚ್ಚಿನ ಸಾರ್ವಜನಿಕ ಸೇವೆಗಳೂ ಬಂದಾಗಿದ್ದವು.

ಥ್ಯಾಚರ್ ಸರ್ಕಾರದ ಅವಧಿಯಲ್ಲಿ ತಂದ ಕಾರ್ಮಿಕ-ವಿರೋಧಿ ಕಾನೂನುಗಳ ಅನ್ವಯ ಮುಷ್ಕರ ದುಸ್ಸಾಧ್ಯವಾದ್ದು. ಈ ಕಾನೂನುಗಳ ಪ್ರಕಾರ ಯೂನಿಯನುಗಳು ಮುಷ್ಕರಕ್ಕೆ ಗುಪ್ತ ಮತದಾನದ ಮೂಲಕ ಸದಸ್ಯರ ಅಭಿಪ್ರಾಯ ಸಂಗ್ರಹ ಮಾಡಬೇಕು. ಈ ಕ್ಷೇತ್ರದ ಎಲ್ಲಾ ಯೂನಿಯನುಗಳು ಇದನ್ನು ಪಾಲಿಸಿದ್ದು, ಶೇ. 80 ರಿಂದ 90 ರಷ್ಟು ಸದಸ್ಯರು ಮುಷ್ಕರಕ್ಕೆ ಬೆಂಬಲ ನೀಡಿದ್ದರು. ಆದರೂ ಕಾರ್ಮಿಕರ ಮುಷ್ಕರ ಇಷ್ಟು ವ್ಯಾಪಕವಾಗಿ ನಡೆದದ್ದು ಕಾರ್ಮಿಕರನ್ನು ಆವರಿಸಿರುವ ಆಕ್ರೋಶ ಮತ್ತು ಬ್ರಿಟಿಷ್ ಕಾರ್ಮಿಕರಲ್ಲಿ ಬರುತ್ತಿರುವ ಮಹತ್ವದ ಬೆಳವಣಿಗೆಯ ಸೂಚಿ ಎನ್ನಬಹುದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಿಜೆಪಿ ದರ್ಬಾರ್....

ಪುಟ 13 ರಿಂದ

ಹೊಟ್ಟೆಪಾಡಿನ ವ್ಯವಸಾಯಕ್ಕೆ ಒತ್ತುವರಿ ಮಾಡಿಕೊಂಡಿದ್ದರೆ, ಅಥವಾ ಬಡಬಗ್ಗರು ವಾಸಕ್ಕೆ ಗುಡಿಸಲೋ, ಮನೆಯೋ ಕಟ್ಟಿಕೊಂಡಿದ್ದರೆ ಅಂತಹ ಪ್ರಕರಣಗಳನ್ನು ಅಕ್ರಮ ಅಂತ ಪರಿಗಣಿಸದೇ ಇತ್ಯರ್ಥಪಡಿಸಬೇಕು ಎಂಬಂತಹ ತಕರಾರರನ್ನು ಬಿಟ್ಟು ಯಾರಾದರು ವರದಿಯನ್ನು ಸರಾಸಗಟಾಗಿ ತಿರಸ್ಕರಿಸಿದ್ದೇವೆ ಎಂದರೆ ಅದರ ಹಿಂದಿನ ತರ್ಕವೇನಿರಬಹುದು?

ಅಂದ ಹಾಗೇ ವರದಿ ತಿರಸ್ಕರಿಸುವುದಾಗಿ ಹೇಳಿರುವ ಮಂತ್ರಿ ಯಾರು ? ಕಂದಾಯ ಮಂತ್ರಿ ಸನ್ಮಾನ್ಯ ಕರುಣಾಕರ ರೆಡ್ಡಿಗಳು. ಅವರ ಯೋಗ್ಯತೆಗೆ ತಕ್ಕನಾದ ಹೇಳಿಕೆಯನ್ನೆ ಕೊಟ್ಟಿದ್ದಾರೆ.

ಇದರಲ್ಲಿ ಇನ್ನೂ ಅಘಾತಕಾರಿಯಾದ ಅಂಶಗಳಿವೆ. ಸರ್ಕಾರದ ಬುಡಕ್ಕೆ, ಸಚಿವರು, ಶಾಸಕರ ಬುಡಕ್ಕೆ ಬರಲಿರುವ ಅಪಾಯವನ್ನು ಮನಗಂಡ ಸರ್ಕಾರ ಈ ವರದಿಯನ್ನು ಸರ್ಕಾರಿ ಮುದ್ರಣಾಲಯಲ್ಲಿ ಮುದ್ರಿಸಲು ಅವಕಾಶವನ್ನೇ ಮಾಡಿಕೊಡದೇ ಭೂಗಳ್ಳರು, ಭೂಚೋರರ ಪರವಾದ ವಕೀಲರಂತೆ ವರ್ತಿಸಿದೆ.

★

ಆರು ತಿಂಗಳಲ್ಲಿ ಮಠಗಳಿಗೆ 50 ಕೋಟಿ

ಯಾರೇ ಕೂಗಾಡಲಿ–ಊರೇ ಹೋರಾಡಲಿ, ಮಠಗಳಿಗೆ ನಾ ಹಣಕೋಡೋದ ಬಿಡುವುದೇ ಇಲ್ಲ...ಅಂತ ಯಡಿಯೂರಪ್ಪನವರು ಹಾಡುತ್ತಲೇ ಇದ್ದಾರೆ. ಅವರು ಈ ಗಾನವನ್ನು ಬಿಡುವಿಲ್ಲದೇ ಪಾಡುತ್ತಿರುವದರಿಂದ ರಾಜ್ಯದ ಜನ ಸಾಮಾನ್ಯರು ಇನ್ನಿಲ್ಲದ ಪಾಡು ಪಡುವಂತಾಗಿದೆ. ಸರ್ಕಾರದ ಖಜಾನೆಯ ಹಣ ಎಲ್ಲೆಲ್ಲಿಗೋ ಹರಿದು ಸೋರಿಕೆಯಾಗುತ್ತಿದೆ.

ಕಳೆದ ಆರು ತಿಂಗಳ ಅವಧಿಯಲ್ಲಿ ಯಡಿಯೂರಪ್ಪನವರ ಸರ್ಕಾರವು ರಾಜ್ಯದ ಮಠಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು ಗೊತ್ತೆ? 50 ಕೋಟಿ ರೂಪಾಯಿಗಳು. ಸರ್ಕಾರಿ ಆಸ್ಪತ್ರೆಗಳಲ್ಲಿ ಬಡವರಿಗೆ ಔಷಧ ಸಿಗದಿದ್ದರೂ, ಸರ್ಕಾರಿ ಹಾಸ್ಟೇಲು ಕಟ್ಟಡಗಳು ಹಾಳುಬಿದ್ದು ಸೋರುತ್ತಿದ್ದರೂ, ರಾಜ್ಯದಲ್ಲಿ ಲಕ್ಷಾಂತರ ಬಡವರು ಭದ್ರವಾದ ಸೂರು ಇಲ್ಲದೇ ಗುಡಿಸಲಿನಲ್ಲಿ ವಾಸಿಸುತ್ತಿದ್ದರೂ ನಮ್ಮ ಕೊಡುಗೈ ವೀರ ಯಡಿಯೂರಪ್ಪನವರು ಜಾತಿಮಠಗಳಿಗೆ ಮಾತ್ರ ಉದಾರವಾದ ಕೊಡುಗೆಗಳನ್ನು ಕೊಡುತ್ತಾ ಬಂದಿದ್ದಾರೆ. ಇದರಲ್ಲಿ ಶಿವಮೊಗ್ಗ ಜಿಲ್ಲೆಯ ಮಠಗಳಿಗೆ ಅತಿ ಹೆಚ್ಚು ದಾನ ಸಿಕ್ಕಿದೆ. ಅದು ಒಟ್ಟು 30 ಕೋಟಿ 91 ಲಕ್ಷದ 30 ಸಾವಿರ ರೂಪಾಯಿಗಳು. (30,91,30,000 ರೂ.) ಶಿವಮೊಗ್ಗ ಜಿಲ್ಲೆಯಲ್ಲೂ ತಮ್ಮ ಸ್ವಕ್ಷೇತ್ರ ಶಿಕಾರಿಪುರದ ಮಠಗಳಿಗೆ ಸಿಂಹಪಾಲು. ಅಂದರೆ 14.16 ಕೋಟಿ ರೂಪಾಯಿಗಳು). ಈ ಬಾಬ್ತಿನಲ್ಲಿ ಅತಿ ಕಡಿಮೆ ದಾನ ಪಡೆದ ಜಿಲ್ಲೆ ಎಂದರೆ ಅದು ಹಾಸನ ಜಿಲ್ಲೆ. ಹಾಸನ ಜಿಲ್ಲೆಯ ಮಠಗಳಿಗೆ ಒಟ್ಟಾರೆ 25 ಲಕ್ಷ ಮಾತ್ರ ಸಿಕ್ಕಿದೆ.

ಈ ಅಂಕಿ ಅಂಶಗಳನ್ನು ನೋಡುತ್ತಿದ್ದರೆ ಇದು ಪಕ್ಕಾ ಪಕ್ಕಾ ಚುನಾವಣಾ ಲೆಕ್ಕಾಚಾರದ ಓಟ್ ಬ್ಯಾಂಕ್ ರಾಜಕಾರಣ... ಕೀಳು ಜಾತಿ ರಾಜಕಾರಣ ಅಂತ ಬಹಳ ಸುಲಭವಾಗಿಯೇ ಗೊತ್ತಾಗುತ್ತದೆ. ಜಾತಿವಾದಿ, ಕೋಮುವಾದಿ ಮಠಗಳ ಮಡಿಲಿಗೆ ಕೋಟಿ, ಕೋಟಿ ರೂಪಾಯಿಗಳನ್ನು ಸುರಿಯುವುದರ ಹಿಂದೆ ಇರುವುದು ರಾಜ್ಯದ ಸಂಪತ್ತನ್ನು ಕೊಳ್ಳೆ ಹೊಡೆಯಲು ನಿಂತಿರುವ ಬಿಜೆಪಿ ಸರ್ಕಾರದ ಲೂಟಿಗೆ ಬೆಂಬಲ ಗಳಿಸಿಕೊಳ್ಳುವುದು ಮತ್ತು ಮುಂದಿನ ಚುನಾವಣೆಯಲ್ಲಿ ಜಾತಿವಾರು ಜನರನ್ನು ಎತ್ತಿಕಟ್ಟಿ ಅದರಿಂದ ಬಿಜೆಪಿಗೆ ರಾಜಕೀಯ ಲಾಭ ಹೊಡೆಯಲು ಅನುವು ಮಾಡಿಕೊಳ್ಳುವುದು.

ಬಾಲಂಗೋಚಿ;

ಇತ್ತೀಚೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸರ್ಕಾರಿ ಶಾಲೆಯೊಂದಕ್ಕೆ ಭೇಟಿನೀಡಿದ ಯಡಿಯೂರಪ್ಪನವರು ಅಲ್ಲಿ ಮಕ್ಕಳಿಗೆ ' ದುರಾಸೆ ಒಳ್ಳೆಯದಲ್ಲ... ದುರಾಸೆ ಪಡಬೇಡಿ' ಅಂತ ನೀತಿಪಾಠ ಹೇಳಿದರಂತೆ. ತಮಗೆ, ತಮ್ಮ ಮಕ್ಕಳಿಗೆ, ತಮ್ಮ ಸಚಿವ ಸಂಪುಟದ ಸಚಿವರುಗಳಿಗೆ ರಾಜ್ಯದ ಉದ್ದಗಲಕ್ಕೂ ಜನ ಹೇಳುತ್ತಿರುವ ನೀತಿಪಾಠವನ್ನ, ಕೊಡುತ್ತಿರುವ ಎಚ್ಚರಿಕೆಯ ಮಾತಗಳನ್ನ ತಗೊಂಡು ಹೋಗಿ ಹಾಗೇ ಆ ಎಳೆ ಮಕ್ಕಳಿಗೆ ಹೇಳೋದ ನಮ್ಮ ಯಡಿಯೂರಪ್ಪನವರು ? ಚೇ ಚೇ ಹೀಗೂ ಉಂಟೆ.

●

ಮುಂದುವರಿದಿದೆ ಬೀದಿ ಬದಿ ವ್ಯಾಪಾರಸ್ಥರ ಸಮರ

ಪುಟ 6 ರಿಂದ

ಸಮಿತಿಯನ್ನು ಆಯ್ಕೆಮಾಡಿತು. ಸುನಿಲ್ ಕುಮಾರ್ ಬಜಾಲ್ ಗೌರವಾಧ್ಯಕ್ಷರಾಗಿಯೂ, ಬಿ.ಎಂ.ಹಸನ್ ಅಧ್ಯಕ್ಷರಾಗಿಯೂ, ಮಹಮ್ಮದ್ ಮುಸ್ತಾಫ್ ಪ್ರಧಾನ ಕಾರ್ಯದರ್ಶಿಯಾಗಿ ಎ.ಎಂ.ಅತಾವುಲ್ಲಾ ಖಜಾಂಚಿಯಾಗಿ ಆಯ್ಕೆಯಾಗಿರುತ್ತಾರೆ. ಇನ್ನೂರಕ್ಕೂ ಮಿಕ್ಕಿ ಬೀದಿ ಬದಿ ವ್ಯಾಪಾರಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.'ಟೈಗರ್'ಕಾರ್ಯಾಚರಣೆ ನಿಲ್ಲಿಸುವವರೆಗೆ ಹೋರಾಟ ಮುನ್ನಡೆಸಲು ಸಮಾವೇಶ ತೀರ್ಮಾನಿಸಿದೆ.

★

ಮಂಗಳೂರು ಮತ್ತು ಕುಂದಾಪುರದಲ್ಲಿ 'ಪ.ಬಂಗಾಳ ಪ್ರಜಾಪ್ರಭುತ್ವ ಉಳಿಸಿ' ಪ್ರತಿಭಟನೆ

ಪಶ್ಚಿಮ ಬಂಗಾಳ ತೃಣಮೂಲ ಕಾಂಗ್ರೆಸಿನ ಹಿಂಸಾ ರಾಜಕೀಯದಿಂದ ಪ್ರಜಾಪ್ರಭುತ್ವಕ್ಕೆ ಆಗುತ್ತಿರುವ ಧಾಳಿಯನ್ನು ವಿರೋಧಿಸಿ ಸಿಪಿಎಂ ಪಕ್ಷವು ರಾಜ್ಯಾದ್ಯಂತ ಹಮ್ಮಿಕೊಂಡಿರುವ 'ಪಶ್ಚಿಮ ಬಂಗಾಳ ಪ್ರಜಾಪ್ರಭುತ್ವ ಉಳಿಸಿ' ಪ್ರತಿಭಟನೆ ಯನ್ನು ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿಯ ಎದುರು, ಕುಂದಾಪುರದಲ್ಲಿ ಕಾರ್ಮಿಕ ಸಭಾಭವನದಲ್ಲೂ ಜುಲೈ 7 ರಂದು ನಡೆಸಲಾಯಿತು.

ಸುರಿವ ಮಳೆಯ ಮಧ್ಯೆಯೂ ನಡೆದ ಮಂಗಳೂರಿನ ಕಾರ್ಯಕ್ರಮದಲ್ಲಿ ಸಿಪಿಎಂ ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಹಾಗೂ ಹಿರಿಯ ನಾಯಕರಾದ ಕೆ.ಆರ್.ಶ್ರೀಯಾನ್ ಮಾತನಾಡಿದರು. ಕುಂದಾಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಪಿಎಂ ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್ ಮಾತನಾಡಿದರು.

★

ಉಡುಪಿ ಮತ್ತು ಮಂಗಳೂರಿನಲ್ಲಿ ಬಿಸಿಯೂಟ ನೌಕರರ ಪ್ರತಿಭಟನೆ:

ವಿದ್ಯಾರ್ಥಿಗಳ ಹಾಜರಾತಿ ಆಧರಿಸಿ, ಬಿಸಿಯೂಟ ನೌಕರರನ್ನು ಕೆಲಸದಿಂದ ತೆಗೆಯುವ ಪ್ರಕ್ರಿಯೆಯನ್ನು ನಿಲ್ಲಿಸಬೇಕು, ಇಸ್ಕಾನ್ ಸೇರಿದಂತೆ ಖಾಸಗಿ ಸ್ವಯಂ ಸೇವಾ ಸಂಸ್ಥೆಗಳಿಗೆ ಬಿಸಿಯೂಟ ಯೋಜನೆಯನ್ನು ಕೊಡುವುದನ್ನು ಕೈಬಿಡಬೇಕು ಎಂದು ಆಗ್ರಹಿಸಿ ಜುಲೈ 11 ರಂದು ಬಿಸಿಯೂಟ ನೌಕರರು ಸಿಐಟಿಯು ಸಂಘಟನೆಗೆ ಸಂಯೋಜಿತ ತಮ್ಮ ಜಿಲ್ಲಾ ಸಂಘಗಳ ನೇತೃತ್ವದಲ್ಲಿ ಉಡುಪಿ ಮತ್ತು ಮಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು.

ಉಡುಪಿ ಜಿಲ್ಲಾ ಪಂಚಾಯತು ಕಚೇರಿ ಮುಂದೆ ನಡೆದ ಧರಣಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ



ಯು.ದಾಸು ಭಂಡಾರಿ, ಪ್ರಧಾನ ಕಾರ್ಯದರ್ಶಿ ರಮೇಶ್ ಮೆಂಡನ್, ಲಕ್ಷ್ಮೀ ನಂದಕುಮಾರ್, ಕೃಷ್ಣಮ್ಮ ಪಡುಬಿದ್ರೆ, ಸುಜಾತ ಶೆಟ್ಟಿ, ಮಾಲತಿ ನಾಯಕ್, ರುದ್ರಮ್ಮ, ಜಯಂತಿ ಕುಂದಾಪುರ ಮುಂತಾದವರು ಭಾಗವಹಿಸಿದ್ದರು.

ಮಂಗಳೂರಿನಲ್ಲಿ ದ.ಕ.ಜಿಲ್ಲಾ ಪಂಚಾಯತು ಕಚೇರಿ ಎದುರು ನಡೆದ ಧರಣಿಯನ್ನುದ್ದೇಶಿಸಿ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಸಿಐಟಿಯು ಮುಖಂಡರಾದ ಬಿ.ಎಂ.ಭಟ್, ಸುನಿಲ್ ಕುಮಾರ್ ಬಜಾಲ್, ಪದ್ಮಾವತಿ ಶೆಟ್ಟಿ ಮಾತನಾಡಿದರು. ಸಂಘದ ಅಧ್ಯಕ್ಷೆ ಗಿರಿಜಾ ಮೂಡಬಿದ್ರೆ, ಸಿಐಟಿಯು ಮುಖಂಡರಾದ ಯಶೋದಾ, ರಾಮಣ್ಣ ವಿಟ್ಲ ಮುಂತಾದವರು ಭಾಗವಹಿಸಿದ್ದರು.

ಯುಪಿಎ ದರ್ಬಾರ್

ಪುಟ 12 ರಿಂದ

ಮಾಲ್ಡಾಂದಲ್ಲಿ ಹಳಿ ತಪ್ಪಿದ್ದರಿಂದ ಆದ ಅಫಘಾತದಲ್ಲಿ ಅರವತ್ತಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ. ಅಪಘಾತಕ್ಕೆ ಕಾರಣದ ತನಿಖೆ ನಡೆಯುತ್ತಿದೆ. ಗುವಾಹಾಟಿಯಿಂದ ಹೊರಟಿದ್ದ ಪುರಿ ಎಕ್ಸ್‌ಪ್ರೆಸ್‌ನಲ್ಲಿ ಅಸ್ಸಾಂನ ಕಾಮರೂಪ್ ಜಿಲ್ಲೆಯಲ್ಲಿ ಸ್ಫೋಟ ಸಂಭವಿಸಿ ನಡೆದ ಅಪಘಾತದಲ್ಲಿ ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಕಳೆದೆರಡು 561 ಸಾವುಗಳು ಮತ್ತು 822 ಮಂದಿ ಗಾಯಗೊಳ್ಳಲು ಕಾರಣವಾದ ಹಲವು ಅಪಘಾತಗಳ ದಾಖಲೆ ಹೊಂದಿದ್ದ ಹಿಂದಿನ ರೈಲು ಮಂತ್ರಿಗಳು ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿಗಳಾದ ಮೇಲೆ ರೈಲು ಖಾತೆ ಸ್ವತಃ ಪ್ರಧಾನ ಮಂತ್ರಿಗಳ ಕೈಯಲ್ಲಿತ್ತು. ಹಿಂದಿನ ರೈಲು ಮಂತ್ರಿಗಳ ನಿಕಟವರ್ತಿ ಮುಕುಲ್ ರಾಯ್ ರೈಲ್ವೇ ಇಲಾಖೆಯಲ್ಲಿ ರಾಜ್ಯ ಮಂತ್ರಿ, ಆತ ಪಕ್ಕದ ರಾಜ್ಯದಲ್ಲಿದ್ದರೂ ಪುರಿ ಎಕ್ಸ್‌ಪ್ರೆಸ್‌ನಲ್ಲಿ ಸ್ಫೋಟ ನಡೆದ ಸ್ಥಳಕ್ಕೆ ಭೇಟಿ ನೀಡುವಂತೆ ಪ್ರಧಾನ ಮಂತ್ರಿಗಳು ಹೇಳಿದರೂ ಭೇಟಿ ನೀಡಲು ನಿರಾಕರಿಸಿದ್ದಾರೆ. ಪ್ರಧಾನಿಗಳ ಮಾಜಿ ಮಾಧ್ಯಮ ಸಲಹೆಗಾರರ ಅಭಿಪ್ರಾಯ ಸರಿಯಿರಬಹುದೆಂದು ಅನಿಸುತ್ತದೆಯಲ್ಲವೇ? ಅಥವ ಮತ್ತೆ 'ಸಮ್ಮಿಶ್ರ ಸರಕಾರದ ಧರ್ಮ'ದ ಪ್ರಶ್ನೆ ಪ್ರಯಾಣಿಕರ ಭದ್ರತೆಯ ಪ್ರಶ್ನೆಯನ್ನೂ ಬಾಧಿಸುತ್ತಿದೆಯೇ?

ಸಂಪುಟ ಪುನರ್‌ರಚನೆಯ ನಂತರ ಪೂರ್ಣ ಕಾಲದ ರೈಲು ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ದಿನೇಶ ತಿವಾರಿ ಫತೇಪುರ ಆಸ್ಪತ್ರೆಗೆ ಭೇಟಿ ನೀಡಿದಾಗ ಅಲ್ಲಿದ್ದ ಗಾಯಾಳುಗಳ ಸಂಬಂಧಿಕರು ಧಿಕ್ಕಾರ ಕೂಗಿದರಂತೆ– ರೈಲ್ವೆ ಅಧಿಕಾರಿಗಳು ಮತ್ತು ಪೋಲಿಸರ ವರ್ತನೆಯ ವಿರುದ್ಧ.

ರೈಲ್ವೆ ಇಲಾಖೆಯಲ್ಲಿ ಸುರಕ್ಷಿತತೆಗೆ ಸಂಬಂಧಪಟ್ಟ ಒಂದು ಲಕ್ಷಕ್ಕೂ ಹೆಚ್ಚು ಹುದ್ದೆಗಳು ಭರ್ತಿಯಾಗದೇ ಉಳಿದಿರುವುದು ಇಂತಹ ಅಪಘಾತಗಳು ಹೆಚ್ಚಲು ಕಾರಣ ಎಂಬ ಬಗ್ಗೆ ಈಗ ಯಾರಿಗೂ ಸಂದೇಹವಿಲ್ಲ. 'ತಮ್ಮವರಿಗೆ' ರೈಲ್ವೆ ಇಲಾಖೆಯಲ್ಲಿ 'ವರ'ಗಳನ್ನು ದಯಪಾಲಿಸುತ್ತಾ, ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿ ಪೀಠ ದಕ್ಕಿಸಿಕೊಳ್ಳುವುದಕ್ಕೇ ತನ್ನ ಕೇಂದ್ರ ಮಂತ್ರಿ ಪದವಿಯನ್ನು ಬಳಸಿಕೊಳ್ಳುವಲ್ಲೇ ಕಾಲ ಕಳೆದಿದ್ದ ಆಗಿನ ಮಂತ್ರಿಗಳಂತೂ ಈ ಬಗ್ಗೆ, ಗಮನವನ್ನೇ ನೀಡಲಿಲ್ಲ. ಈಗಲೂ ಅದೇ ಮುಂದುವರೆಯುತ್ತಿರುವಂತೆ ಕಾಣುತ್ತಿದೆ.

●

JANASHAKTHI KANNADA VARA PATRIKE JULY 24, 2011 Price : Rs. 5/- RNI No. KARKAN /2006/17926 Posted on every Saturday Postal Reg. No. RNP/KA/BGS/2078/2010-12
Posted at MBC Bangalore GPO

ಅಮೇರಿಕಾದ ಗಗನಯಾನ ನಾಗಾಲೋಟಕ್ಕೆ ಬ್ರೇಕ್ ಹಾಕಿದ ಆರ್ಥಿಕ ಬಿಕ್ಕಟ್ಟು

ಅಮೇರಿಕಾದ ಪ್ರತಿಷ್ಟಿತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ ತನ್ನ 'ಅಟ್ಲಾಂಟಿಸ್' ಗಗನನೌಕೆಯ ಅಂತಿಮ ಉಡಾವಣೆಯಾಗಿದ್ದು ಅದು ಕಳೆದ ವಾರವಷ್ಟೆ ಅಂತರಿಕ್ಷದಲ್ಲಿರುವ ಅಂತರಾಷ್ಟ್ರೀಯ ಗಗನ ನಿಲ್ದಾಣ ತಲುಪಿದೆ. ಇದು ತನ್ನೊಂದಿಗೆ ಕನಿಷ್ಟ ಒಂದು ವರ್ಷಕ್ಕೆ ಸಾಕಾಗುಷ್ಟು 4 ಟನ್ ತೂಕದ ಆಹಾರ, ಬಟ್ಟೆ ಸಾಮಗ್ರಿಗಳು ಮತ್ತು ಇತರೆ ವಸ್ತುಗಳ ಜೊತೆಗೆ 3 ಗಗನಯಾನಿಗಳನ್ನು ಅಂತರಿಕ್ಷದ ಗಗನ ನಿಲ್ದಾಣಕ್ಕೆ ಹೊತ್ತೊಯ್ದಿತು. ಇದು ಗಂಟೆಗೆ 17,500 ಮೈಲು ವೇಗದಲ್ಲಿ ಭೂಮಿಯ ಸುತ್ತ ಸುತ್ತಿ ಅಂತರಿಕ್ಷ ನಿಲ್ದಾಣ ತಲುಪಿದೆ. ಈ ನಿಲ್ದಾಣದ ಸೂಕ್ತ ಆಯಕಟ್ಟಿನ ಜಾಗದಲ್ಲಿ ನಟ್ಟು ಬೋಲ್ಟುಗಳಿಂದ 'ಅಟ್ಲಾಂಟಿಸ್' ನ್ನು ಬಿಗಿಯಾಗಿ ನಿಲ್ದಾಣಕ್ಕೆ ಜೋಡಿಸಲಾಯಿತು. ಇದರ ಜೊತೆಗೆ ಮೂತ್ರವನ್ನು ಪುನರ್-ಬಳಕೆಗೆ ಯೋಗ್ಯಗೊಳಿಸಬಲ್ಲ ಚೀಲ ಮತ್ತು ಅಂತರಿಕ್ಷದಲ್ಲಿ ಬಳಸಬಲ್ಲ ಐ-ಪೋನ್‌ಗಳನ್ನು ಪರೀಕ್ಷಿಸಲಾಗುತ್ತದೆ. 12 ದಿನಗಳ ಕಾಲ ಅಂತರಿಕ್ಷ ನಿಲ್ದಾಣದಲ್ಲಿ ತಮ್ಮ ಕಾರ್ಯ ಮುಗಿಸಿದ ನಂತರ ಇದೇ ತಿಂಗಳು 20ನೇ ತಾರೀಖು ವಾಪಸು ಭೂಮಿಗೆ ಮರಳಲಿದ್ದಾರೆ.



ಸೋವಿಯತ್ ರಷ್ಯಾದ ವೇಗಕ್ಕೆ ಎಚ್ಚೆತ್ತ ಅಮೇರಿಕಾ

ಈ ಗಗನನೌಕೆ ಉಡಾವಣೆಯು ಅಮೇರಿಕಾದ ಕೊನೆಯ ಉಡಾವಣೆ ಎಂದು ಸರ್ಕಾರ ಹೇಳಿದೆ. ಕಳೆದ 30 ವರ್ಷಗಳಿಂದ ಅಮೇರಿಕಾ ಸರ್ಕಾರ ಅಂತರಿಕ್ಷ ಸಂಶೋಧನೆ ಮತ್ತು ಉಪಗ್ರಹ ಉಡ್ಡಯನಕ್ಕೆ ನಿಗಧಿತ ಹಣ ಮೀಸಲಿರಿಸುತ್ತಿತ್ತು. ಆದರೆ, ಇತ್ತೀಚೆಗೆ ಅದರ ಆರ್ಥಿಕತೆ ಬಿಕ್ಕಟ್ಟಿನಲ್ಲಿರುವುದು ಮತ್ತು ಇದಕ್ಕೆ ಪೈಪೋಟಿ ನೀಡುತ್ತಿದ್ದ ಸೋವಿಯತ್ ರಷ್ಯಾದಂಥಹ ಸವಾಲಿನ ಉಡ್ಡಯನಗಳು ಕಡಿಮೆಯಾಗಿರುವುದು ಇದಕ್ಕೆ ಕಾರಣ ಎಂದು ಹೇಳಲಾಗಿದೆ. 1957 ರಲ್ಲಿ ಸೋವಿಯತ್ ರಷ್ಯಾ ಮೊಟ್ಟಮೊದಲ ಬಾರಿಗೆ ಸ್ಪುಟ್ನಿಕ್ ಉಪಗ್ರಹವನ್ನು ಯಶಸ್ವಿಯಾಗಿ ಹಾರಿಬಿಟ್ಟಾಗ ತಾನು ಎಲ್ಲ ರಂಗಗಳಲ್ಲೂ ಮುಂದುವರೆದ ಬಲಾಢ್ಯ ರಾಷ್ಟ್ರವೆಂದು ಬೀಗುತ್ತಿದ್ದ ಅಮೇರಿಕಾದ ಆಳರಸರ ಅಹಂ ಗೆ ದೊಡ್ಡ ಪೆಟ್ಟು ಬಿದ್ದಿತ್ತು. ಇದರಿಂದ ಎಚ್ಚೆತ್ತ ಅಮೇರಿಕಾ ತಾನು ಇನ್ನೊಂದು ದಶಕದಲ್ಲಿ ಚಂದ್ರನಲ್ಲಿಗೆ ಮನುಷ್ಯನನ್ನು ಕಳುಹಿಸುವುದಾಗಿ ತನ್ನ ಪ್ರಜೆಗಳಿಗೆ ವಾಗ್ದಾನ ಮಾಡಿತು. ನಂತರ ಇದಕ್ಕಾಗಿ ಬೃಹತ್ ಮಟ್ಟದ ಹಣಕಾಸು ಯೋಜನೆಗಳನ್ನು ಹಾಕಿಕೊಂಡು ಸರಣಿಯೋಪಾದಿಯ ಉಪಗ್ರಹಗಳನ್ನು ಅಮೇರಿಕಾ ಮತ್ತು ಸೋವಿಯತ್ ರಷ್ಯಾ ಅಂತರಿಕ್ಷಕ್ಕೆ ಹಾರಿಬಿಟ್ಟವು.

ಅಲ್ಲಿಂದೀಚೆಗೆ ಹಲವು ಸಂಖ್ಯೆಯ ಗಗನನೌಕೆಗಳನ್ನು ಉಡ್ಡಯನಗಳನ್ನು ಮಾಡಲಾಗಿದೆ. 1986ರಲ್ಲಿ ಛಾಲೆಂಜರ್ ಮತ್ತು 2003ರಲ್ಲಿ ಕೊಲಂಬಿಯಾ ಗಗನನೌಕೆಗಳು ದುರಂತಕ್ಕೀಡಾಗಿ 14 ಗಗನಯಾನಿಗಳು ಮರಣಹೊಂದಿದರು.

ಅಮೇರಿಕಾದ ಗಗನನೌಕೆ ತಂತ್ರಜ್ಞರು ಅತಿ ಕಡಿಮೆ ಬೆಲೆಯ ಪುನರ್-ಬಳಕೆ ಮಾಡಬಲ್ಲ ಗಗನನೌಕೆಗಳನ್ನು ತಯಾರಿಸಿ ವರ್ಷವೊಂದಕ್ಕೆ 64 ಸಲ, ಪ್ರತಿ ಸಲಕ್ಕೆ ಅಂದಾಜು ರೂ. 250 ಕೋಟಿ ವೆಚ್ಚದಲ್ಲಿ ಗಗನಪ್ರವಾಸ ಮಾಡಲು ಆರಂಭದಲ್ಲಿ ಯೋಜಿಸಿದ್ದರು. ಆದರೆ ವಾಸ್ತವವಾಗಿ ವರ್ಷವೊಂದಕ್ಕೆ 5 ಸಲ ಮಾತ್ರವೇ ಗಗನಪ್ರವಾಸಗಳಾಗಿದ್ದು, ಪ್ರತಿ ಉಡ್ಡಯನಕ್ಕೆ ರೂ. 6750 ಕೋಟಿ ವೆಚ್ಚ ತಗುಲಿದೆ. ಕಳೆದ ವರ್ಷ ನಮ್ಮ ದೇಶದ ಇಸ್ರೋ ಸಂಸ್ಥೆಯು



ಹಾರಿಬಿಟ್ಟ ಚಂದ್ರಯಾನ-1 ರ ಉಡ್ಡಯನಕ್ಕೆ ಒಟ್ಟು ರೂ. 380 ಕೋಟಿ ವ್ಯಯವಾಗಿದೆ.

ಚೀನಾ ಮತ್ತು ಭಾರತದ ಅಂತರಿಕ್ಷ ನೌಕೆಗಳು

ಭಾರತದ 1410 ಕೆಜಿ ತೂಕದ ಸಂವಹನ ಕಾರ್ಯದ ಜಿಸ್ಯಾಟ್-12 ಉಪಗ್ರಹವನ್ನು ಪಿಎಸ್‌ಎಲ್‌ವಿ ರಾಕೆಟ್ ಇದೇ ವಾರ ಹೊತ್ತೊಯ್ದಿದೆ. ಇದನ್ನು ದೂರ-ವೈದ್ಯಕೀಯ, ದೂರಶಿಕ್ಷಣ, ದೂರವಾಣಿ ಮತ್ತು ಇತರೆ ಸಂವಹನ ಸಂಪರ್ಕ ಸೇವೆಗಳಿಗೆ ಉಪಯೋಗಿಸಲಾಗುತ್ತದೆ. ಯಶಸ್ವಿಯಾಗಿ ಚಂದ್ರಯಾನ-1 ನ್ನು ಪೂರ್ಣಗೊಳಿಸಿರುವ ಇಸ್ರೋ ಚಂದ್ರಯಾನ-2 ಕ್ಕೆ ಸಿದ್ಧತೆ ನಡೆಸಿದೆ.

ಮತ್ತೊಂದೆಡೆ ಅಂತರಿಕ್ಷದ ಆಳ ಸಂಶೋಧನೆಯೆಡೆಗೆ ದಾಪುಗಾಲಿಡುತ್ತಿರುವ ಚೀನಾ ಮಹತ್ವಾಕಾಂಕ್ಷಿ ಗಗನ ಯೋಜನೆಯನ್ನೇ ರೂಪಿಸಿದೆ. ಅದರ ಆರ್ಥಿಕವು ಅಮೇರಿಕಾಗಿಂತ ವೇಗವಾಗಿ ಬೆಳೆಯುತ್ತಿರುವುದರಿಂದ ಹಣಕಾಸಿನ ಭಯವೂ ಅದಕ್ಕಿಲ್ಲ. ಈ ವರ್ಷ ಚೀನಾ ತನ್ನದೇ ಅಂತರಿಕ್ಷ ನಿಲ್ದಾಣ ನಿರ್ಮಿಸಲು ರಾಕೆಟ್‌ವೊಂದನ್ನು ಹಾರಿಬಿಡಲಿದೆ. 2013ರ ಹೊತ್ತಿಗೆ, ಚಂದ್ರನ ಮೇಲೆ ಶೋಧ ನಡೆಸಲು ರೋವರ್ ಎಂಬ ವಾಹನವನ್ನು ಕಳುಹಿಸಲಿದೆ. 2020 ರ ಹೊತ್ತಿಗೆ ಚಂದ್ರನಲ್ಲಿಗೆ ಮಾನವನನ್ನು ಕಳುಹಿಸುವ ನಿರೀಕ್ಷೆ ಹೊಂದಿದೆ.

ಅಂತರಿಕ್ಷದಲ್ಲಿ ತ್ಯಾಜ್ಯವಸ್ತುಗಳ ಅಪಾಯ

ಅಂತರಿಕ್ಷಕ್ಕೆ ಹಾರಿಬಿಟ್ಟು ವಿಫಲವಾಗುವ ಉಪಗ್ರಹಗಳು, ಗಗನನೌಕೆಗಳ ಚೂರುಗಳು ಮತ್ತು ಇತರೆ ತ್ಯಾಜ್ಯ ವಸ್ತುಗಳು ತಲೆನೋವಾಗಿ ಪರಿಣಮಿಸಿವೆ. ನಾಸಾ ಸಂಸ್ಥೆಯ ಪ್ರಕಾರ ಕಕ್ಷೆಯಲ್ಲಿ ಸುತ್ತುತ್ತಿರುವ 5 ಲಕ್ಷಕ್ಕೂ ಹೆಚ್ಚು ಚೂರುಗಳನ್ನು ಗುರುತಿಸಿ ಟ್ರ್ಯಾಕ್ ಮಾಡಲಾಗುತ್ತಿದೆ. ಇವು ಗಗನನೌಕೆ, ನಿಲ್ದಾಣ ಅಥವಾ ಗಗನನೌಕೆಗಳಿಗೆ ರಭಸದಿಂದ ಬಡಿದು ಹಾನಿಯುಂಟು ಮಾಡಬಲ್ಲವು. ಎರಡು ವಾರಗಳ ಹಿಂದೆ ಅಂತರಿಕ್ಷ ನಿಲ್ದಾಣಕ್ಕೆ ಕೇವಲ 1000 ಅಡಿ ದೂರವೊಂದರಲ್ಲಿ ಅಂಥಹ ದೊಡ್ಡ ಚೂರೊಂದು ಕಾಣಿಸಿಕೊಂಡು ನಿಲ್ದಾಣದಲ್ಲಿರುವ ಗಗನಯಾನಿಗಳು ಜೀವರಕ್ಷಕ ನೌಕೆಗಳ ಅವಲಂಬನೆ ಪಡೆಯುವಂತೆ ಮಾಡಿತ್ತು.

ಮುಂಬೈ: ಸರಣಿ ಬಾಂಬ್ ಸ್ಫೋಟ ಖಂಡನೆ

ಮುಂಬೈ ಮಹಾನಗರದಲ್ಲಿ 21 ಜನರ ಪ್ರಾಣ ಹರಣ ಮತ್ತು 141 ಜನರಿಗೆ ತೀವ್ರಸ್ವರೂಪದ ಗಾಯಗಳಾಗಿರುವ ಸರಣಿ ಬಾಂಬ್ ಸ್ಫೋಟಗಳನ್ನು ಸಿ.ಪಿ.ಐ(ಎಂ) ಪೊಲೀಟಬ್ಯೂರೋ ತೀವ್ರವಾಗಿ ಖಂಡಿಸಿದೆ. ಈ ಮೂರು ಸರಣಿ ಬಾಂಬ್ ಸ್ಫೋಟಗಳು ಭಯೋತ್ಪಾದಕರು ನಡೆಸಿದ ಇತ್ತೀಚಿನ ಕೃತ್ಯಗಳಾಗಿವೆ. ಸಾಮಾನ್ಯ ಜನ ಜೀವನವನ್ನು ಹಾಳುಗೇಡವಲು, ಜನರಲ್ಲಿ ಅನೈಕ್ಯತೆಯನ್ನುಂಟುಮಾಡಲು ನಡೆಸಿದ ಲೆಕ್ಕಚಾರದ ಯೋಜಿತಧಾಳಿ ಇದಾಗಿಡೆ.

ಈ ಪ್ರಯತ್ನಗಳನ್ನು ಸೋಲಿಸಬೇಕು, ದೇಶದ ವಿವಿಧ ಭಾಗಗಳಲ್ಲಿ ಸಂಭವಿಸಿದ ಬಾಂಬ್ ಸ್ಫೋಟಗಳ ಹಿಂದಿರುವ ಶಕ್ತಿಗಳನ್ನು ಗುರುತಿಸುವಲ್ಲಿ ಮತ್ತು ಬಂಧಿಸುವಲ್ಲಿ ಆಗದೇ ಇರುವುದು ಚಿಂತೆಗೀಡು ಮಾಡುವ ಸಂಗತಿಯಾಗಿದೆ. ಮುಂಬೈ ಸ್ಫೋಟಗಳಿಗೆ ಕಾರಣವಾಗಿರುವ ಅಪರಾಧಿಗಳನ್ನು ಪತ್ತೆಹಚ್ಚಿ ಬಗ್ಗುಬಡಿಯಲು ಯಾವುದೇ ಪ್ರಯತ್ನಗಳನ್ನು ಬಿಡಬಾರದು.

ಈ ಸ್ಫೋಟದಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬಗಳಿಗೆ ಸಿ.ಪಿ.ಐ(ಎಂ) ಹೃದಯಪೂರ್ವಕ ಸಂತಾಪ ಸೂಚಿಸುತ್ತದೆ, ಮತ್ತು ಗಾಯಗೊಂಡವರಿಗೆ ಸಿ.ಪಿ.ಐ.(ಎಂ) ತಿಳಿಸಿದೆ. ಎಲ್ಲಾ ವಿಭಾಗಗಳ ಜನತೆಯು ಐಕ್ಯತೆಯಿಂದಿರಬೇಕೆಂದೂ ಈ ಅತೀ ದುಷ್ಟ ಧಾಳಿಗಳ ಚೋರರಿಗೆ ತಕ್ಕ ಪ್ರತ್ಯುತ್ತರ ನೀಡಿ ಧಿಕ್ಕರಿಸಬೇಕೆಂದು ಸಿ.ಪಿ.ಐ(ಎಂ) ಜನತೆಯಲ್ಲಿ ಮನವಿ ಮಾಡಿದೆ.



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH